ಶುಕ್ರವಾರ, ಡಿಸೆಂಬರ್ 24, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅನಧಿಕೃತ ಕಟ್ಟಡ: ನಿರ್ಲಕ್ಷ್ಯಕ್ಕೆ ಕಾದಿದೆ ಹೈಕೋರ್ಟ್‌ನಿಂದ ಶಾಸ್ತಿ

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೈಕೋರ್ಟ್‌ನ ಮಹತ್ವದ ತೀರ್ಪು
- ಅರ್ಜಿದಾರರಿಗೆ ₹ 50 ಸಾವಿರ ದಂಡ



ಬೆಂಗಳೂರು: 'ಅಕ್ರಮ ಅಥವಾ ಅನಧಿಕೃತ ಕಟ್ಟಡಗಳ ವಿರುದ್ಧ ಕಾನೂನು ಕ್ರಮ ಜರುಗಿಸದೇ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್, ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಕಟ್ಟುನಿಟ್ಟಿನ ಆದೇಶ ಮಾಡಿದೆ.

ಶಿವಮೊಗ್ಗದ ಕೆ.ಎಸ್. ಈಶ್ವರಪ್ಪ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿದ್ದು, ಅರ್ಜಿದಾರರಿಗೆ ₹ 50 ಸಾವಿರ ದಂಡ ವಿಧಿಸಿದೆ.

'ಕರ್ನಾಟಕ ಮುನ್ಸಿಪಲ್ ಕಾಯ್ದೆ–1976ರ ಅಡಿ ಸಹಾಯಕ ಎಂಜಿನಿಯರ್‌ಗಳು, ಕಾರ್ಯಪಾಲಕ ಎಂಜಿನಿಯರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅನಧಿಕೃತ ಅಥವಾ ಅಕ್ರಮ ಕಟ್ಟಡಗಳ ತಪಾಸಣೆ ನಡೆಸಬೇಕು. ಒಂದು ವೇಳೆ ಅಂತಹ ಕಟ್ಟಡಗಳು ಕಂಡುಬಂದರೆ ತಡಮಾಡದೆ ಕಾನೂನು ಪ್ರಕಾರ ಕ್ರಮ ಜರುಗಿಸಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

'ಕ್ರಮ ಕೈಗೊಳ್ಳುವಲ್ಲಿ ವಿಫಲವಾದರೆ ಹಾಗೂ ತಮ್ಮ ಕರ್ತವ್ಯದಲ್ಲಿ ಲೋಪ ಎಸಗಿದರೆ ಅಂತಹ ಅಧಿಕಾರಿಗಳ ವಿರುದ್ಧ ಪಾಲಿಕೆಗಳ ಆಯುಕ್ತರು ಇಲಾಖಾ ವಿಚಾರಣೆ ನಡೆಸಬೇಕು. ತಪ್ಪೆಸಗಿರುವುದು ಕಂಡುಬಂದರೆ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು' ಎಂದು ತಿಳಿಸಿದೆ.

'ಅರ್ಜಿದಾರರು ದಂಡದ ಮೊತ್ತವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಜಮೆ ಮಾಡಬೇಕು. ಅರ್ಜಿದಾರರ ವಿರುದ್ಧ ಕೈಗೊಂಡಿರುವ ಕ್ರಮವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು' ಎಂದು ನ್ಯಾಯಪೀಠ ಮಹಾನಗರ ಪಾಲಿಕೆಗೆ ಆದೇಶಿಸಿದೆ. ಅಕ್ರಮ ಕಟ್ಟಡ ತೆರವಿಗೆ ಶಿವಮೊಗ್ಗ ಮಹಾನಗರ ಪಾಲಿಕೆ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಈಶ್ವರಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಆಡಳಿತಾತ್ಮಕ ಅಸಹಿಷ್ಣುತೆ ಸಲ್ಲದು'

'ಕರ್ತವ್ಯಲೋಪ ಎಸಗುವ ಅಧಿಕಾರಿಗಳ ವಿರುದ್ಧದ ಆಡಳಿತಾತ್ಮಕ ಸಹಿಷ್ಣುತೆ ಸಲ್ಲದು. ನಾಗರಿಕರು ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಲು ಮುಂದಾದರೆ ಅಂತಹುದನ್ನು ಕಠಿಣ ಕ್ರಮಗಳ ಮೂಲಕ ಹತ್ತಿಕ್ಕಬೇಕು. ಅಕ್ರಮಗಳಿಗೆ ಅಧಿಕಾರಿಗಳೇ ಅವಕಾಶ ಮಾಡಿಕೊಟ್ಟರೆ ಅವರ ವಿರುದ್ಧವೂ ಅಷ್ಟೇ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

ಸಾಮಾನ್ಯ ಜನರು ಅಕ್ರಮ ಅಥವಾ ಅನಧಿಕೃತ ಕಟ್ಟಡಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಅಧಿಕಾರಿಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಲಾಭ ಪಡೆಯುತ್ತಾರೆ. ಇದರಿಂದ ಜನರೂ ವಂಚನೆಗೆ ಒಳಗಾಗುತ್ತಾರೆ.

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಕೋರ್ಟ್ ಕಲಾಪ ನೇರ ಪ್ರಸಾರ: ಗೆಜೆಟ್ ಪ್ರಕಟಣೆಗೆ ಗಡುವು

ಬೆಂಗಳೂರು: ಹೈಕೋರ್ಟ್ ನ್ಯಾಯಪೀಠದ ಕಲಾಪಗಳನ್ನು ಯೂಟ್ಯೂಬ್‌ನಲ್ಲಿ ನೇರಪ್ರಸಾರ ಮಾಡುವುದಕ್ಕೆ ಸಂಬಂಧಿಸಿದ ಲೈವ್ ಸ್ಟ್ರೀಮಿಂಗ್ ಮತ್ತು ಕಲಾಪದ ಪ್ರಕ್ರಿಯೆ ರೆಕಾರ್ಡಿಂಗ್ ನಿಯಮಗಳಿಗೆ ರಾಜ್ಯ ಸರ್ಕಾರ ಸಮ್ಮತಿಸಿದೆ. ಇದನ್ನು ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕೆ ಹೈಕೋರ್ಟ್ ಒಂದು ವಾರದ ಗಡುವು ನೀಡಿದೆ.

ಇ-ಫೈಲಿಂಗ್ ಮತ್ತು ಲೈವ್ ಸ್ಟ್ರೀಮಿಂಗ್‌ಗೆ ಸಂಬಂಧಿಸಿದಂತೆ ವಕೀಲ ದಿಲ್‌ರಾಜ್ ರೋಹಿತ್ ಸಿಕ್ವೇರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. 'ನಿಯಮಗಳಿಗೆ ಸಂಬಂಧಿಸಿದಂತೆ ತಕ್ಷಣವೇ ಅಧಿಸೂಚನೆ ಹೊರಡಿಸಿ ಒಂದು ವಾರದಲ್ಲಿ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿ' ಎಂದು ರಾಜ್ಯ ಸರ್ಕಾರಕ್ಕೆ ನ್ಯಾಯಪೀಠವು ನಿರ್ದೇಶಿಸಿದೆ.

'ಲೈವ್ ಸ್ಟ್ರೀಮಿಂಗ್ ಮತ್ತು ಕಲಾಪದ ಪ್ರಕ್ರಿಯೆ ರೆಕಾರ್ಡಿಂಗ್ ನಿಯಮಗಳಿಗೆ ಯಾವುದೇ ತಿದ್ದುಪಡಿ ಮಾಡದೇ ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಈ ನಿಯಮಗಳು ಜಾರಿಗೆ ಬರುವ ದಿನಾಂಕವನ್ನು ಉಲ್ಲೇಖಿಸಿ ರಿಜಿಸ್ಟ್ರಾರ್ ಜನರಲ್ ಅಧಿಸೂಚನೆ ಹೊರಡಿಸಬೇಕಿದೆ' ಎಂದು ನ್ಯಾಯಪೀಠ ಹೇಳಿದೆ.

ನ್ಯಾಯಾಲಯದ ಕಲಾಪವನ್ನು ಲೈವ್ ಸ್ಟ್ರೀಮಿಂಗ್ ಮಾಡುವುದಕ್ಕೆ ಸಂಬಂಧಿಸಿದಂತೆ ರೂಪಿಸಲಾಗಿರುವ ನಿಯಮಗಳಿಗೆ ಕರ್ನಾಟಕ ಹೈಕೋರ್ಟ್‌ನ ಪೂರ್ಣಪೀಠವು ಸೆಪ್ಟೆಂಬರ್ 17ರಂದು ಒಪ್ಪಿಗೆ ನೀಡಿತ್ತು. ಈ ನಿಟ್ಟಿನಲ್ಲಿ ಪೂರ್ವ ತಯಾರಿಯ ಭಾಗವಾಗಿ ಮುಖ್ಯ ನ್ಯಾಯಮೂರ್ತಿಗಳ ನ್ಯಾಯಪೀಠದಿಂದ ಆಯ್ದ ಪ್ರಕರಣಗಳನ್ನು ಲೈವ್ ಸ್ಟ್ರೀಮ್ ಮಾಡಲಾಗಿತ್ತು.

ದಾಖಲಾತಿ ಪರಿಶೀಲನೆ: ವೇಳಾಪಟ್ಟಿ ಪ್ರಕಟ

ಬೆಂಗಳೂರು: ಬಿ.ಎಸ್ಸಿ ನರ್ಸಿಂಗ್, ಬಿಪಿಟಿ, ಬಿಪಿಒ, ಬಿಎಸ್ಸಿ ಅಲೈಡ್ ಸೈನ್ಸ್ ಕೋರ್ಸ್‌ಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ದಾಖಲಾತಿ ಪರಿಶೀಲನೆಗೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ಆಯಾ ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಕೇಂದ್ರಗಳಲ್ಲಿ ಡಿ.27ರಿಂದ 29ರವರೆಗೆ ಅರ್ಹ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ. ಮಾಹಿತಿಗೆ http://kea.kar.nic.in ನೋಡಬಹುದು.

ವರ್ಗಾವಣೆ ಕೌನ್ಸೆಲಿಂಗ್ ಮುಂದೂಡಿಕೆ

ಬೆಂಗಳೂರು: ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ವರ್ಗಾವಣೆಯ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

2020-21ನೇ ಸಾಲಿನ ವರ್ಗಾವಣೆ ಇದಾಗಿದ್ದು, ವಿಭಾಗದ ವ್ಯಾಪ್ತಿಯ ಹೊರಗೆ ವರ್ಗಾವಣೆಗೆ ಕೋರಿರುವ ಶಿಕ್ಷಕರಿಗೆ ಅನ್ವಯವಾಗಲಿದೆ. ಈ ಮೊದಲು ಡಿ.24ರಿಂದ ಜನವರಿ 10ರವರೆಗೆ ಕೌನ್ಸೆಲಿಂಗ್ ನಡೆಸಲು ಉದ್ದೇಶಿಸಲಾಗಿತ್ತು. ಮುಂದಿನ ಕೌನ್ಸೆಲಿಂಗ್ ದಿನಾಂಕಗಳನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ಶಿಕ್ಷಣ ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

ಕಾನೂನು ವಿದ್ಯಾರ್ಥಿಗಳ ಅರ್ಜಿ ವಜಾ

ಬೆಂಗಳೂರು: ಐದು ವರ್ಷದ ಕಾನೂನು ಪದವಿಯ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆ (ಆಫ್‌ಲೈನ್) ನಡೆಸಲು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ಕೆಎಸ್‌ಎಲ್‌ಯು) ಹೊರಡಿಸಿದ್ದ ಸುತ್ತೋಲೆ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ. ಕೋಲಾರದ ಕೆ.ಪಿ. ಪ್ರಭುದೇವ್ ಸೇರಿದಂತೆ ಒಂಬತ್ತು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಕಡಿಮೆ: ಅಧ್ಯಯನ ವರದಿ

ಡೆಲ್ಟಾಗಿಂತ ಒಮೈಕ್ರಾನ್ ಸೌಮ್ಯ

ಪ್ರಜಾವಾಣಿ ವಾರ್ತೆ

ಲಂಡನ್ (ಪಿಟಿಐ): ಕೊರೊನಾ ವೈರಾಣುವಿನ ಡೆಲ್ಟಾ ರೂಪಾಂತರ ತಳಿಗೆ ಹೋಲಿಸಿದರೆ ಓಮೈಕ್ರಾನ್ ರೂಪಾಂತರ ತಳಿಯ ತೀವ್ರತೆ ಕಡಿಮೆ. ಓಮೈಕ್ರಾನ್ ರೂಪಾಂತರ ತಳಿಯಿಂದ ಸೋಂಕಿಗೆ ಒಳಗಾದವರು ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಕಡಿಮೆ ಇದೆ ಎಂದು ಬ್ರಿಟನ್‌ನಲ್ಲಿ ನಡೆದ ಎರಡು ಅಧ್ಯಯನಗಳು ಹೇಳಿವೆ.

ಲಂಡನ್‌ನ ಇಂಪೀರಿಯಲ್ ಕಾಲೇಜ್ ಮತ್ತು ಎಡಿನ್‌ಬ್ರಾ ವಿಶ್ವವಿದ್ಯಾಲಯ ಈ ಅಧ್ಯಯನ ನಡೆಸಿವೆ.

ಓಮೈಕ್ರಾನ್ ಸೋಂಕು ದೃಢಪಟ್ಟವರು ಡೆಲ್ಟಾ ಸೋಂಕಿತರಿಗೆ ಹೋಲಿಸಿದರೆ ಒಂದು ಅಥವಾ ಅದಕ್ಕಿಂತ ರಾತ್ರಿಗಳನ್ನು ಆಸ್ಪತ್ರೆಯಲ್ಲಿ ಕಳೆಯಬೇಕಾದ ಪ್ರಮಾಣವು ಶೇ 40ರಿಂದ ಶೇ 45ರಷ್ಟು ಕಡಿಮೆ ಎಂದು ಇಂಪೀರಿಯಲ್ ಕಾಲೇಜಿನ ಅಧ್ಯಯನವು ಹೇಳಿದೆ.

ಈ ಹಿಂದೆ ಸೋಂಕಿಗೆ ಒಳಗಾಗದವರಿಗೆ ಹೋಲಿಸಿದರೆ, ಈ ಹಿಂದೆ ಸೋಂಕಿಗೆ ಒಳಗಾಗಿದ್ದು ಮತ್ತೆ ಓಮೈಕ್ರಾನ್ ಸೋಂಕು ತಗುಲಿದವರು ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯ ಶೇ 50ರಿಂದ ಶೇ 60ರಷ್ಟು ಕಡಿಮೆ. ಆದರೆ, ಲಸಿಕೆ ಹಾಕಿಸಿಕೊಂಡಿಲ್ಲದವರಿಗೆ ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯ ಹೆಚ್ಚು ಎಂದು ಈ ಅಧ್ಯಯನವು ತಿಳಿಸಿದೆ.

ಓಮೈಕ್ರಾನ್ ತಳಿಯ ವಿರುದ್ಧ ಲಸಿಕೆಗಳು ಹೆಚ್ಚು ಪರಿಣಾಮಕಾರಿ ಅಲ್ಲ ಎನ್ನಲಾಗುತ್ತಿದೆ. ಅಲ್ಲದೆ, ಓಮೈಕ್ರಾನ್ ಸೋಂಕಿನ ಹರಡುವಿಕೆ ಹೆಚ್ಚು ತೀವ್ರವಾಗಿದೆ. ಇತ್ತೀಚೆಗೆ ಕಂಡಂತೆ, ಹರಡುವಿಕೆ ತೀವ್ರವಾಗಿದ್ದರೆ ಆರೋಗ್ಯ ಸೇವೆಗಳ ಬೇಡಿಕೆ ಭಾರಿ ಪ್ರಮಾಣದಲ್ಲಿ ಹೆಚ್ಚಬಹುದು ಎಂದು ಇಂಪೀರಿಯಲ್ ಕಾಲೇಜಿನ ಪ್ರಾಧ್ಯಾಪಕ ನೀಲ್ ಫರ್ಗ್ಯೂಸನ್ ಹೇಳಿದ್ದಾರೆ. ಓಮೈಕ್ರಾನ್‌ನ 56,000 ಮತ್ತು ಡೆಲ್ಟಾದ 2,69,000 ಪ್ರಕರಣಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅಧ್ಯಯನ ಪ್ರಬಂಧವು ಸಹವರ್ತಿ ಪರಾಮರ್ಶೆಗೆ ಒಳಪಟ್ಟಿಲ್ಲ.

ಡೆಲ್ಟಾ ತಳಿಗೆ ಹೋಲಿಸಿದರೆ ಓಮೈಕ್ರಾನ್ ಸೋಂಕಿತರು ಆಸ್ಪತ್ರೆಗೆ ದಾಖಲಾಗಬೇಕಾದ ಸಾಧ್ಯತೆಯು ಮೂರನೇ ಎರಡರಷ್ಟು ಕಡಿಮೆ ಎಂದು ಎಡಿನ್‌ಬ್ರಾ ವಿಶ್ವವಿದ್ಯಾಲಯವು ನಡೆಸಿದ ಇನ್ನೊಂದು ಅಧ್ಯಯನವು ಹೇಳಿದೆ. ಆದರೆ ಈ ಅಧ್ಯಯನಕ್ಕೆ 15 ಸೋಂಕು ಪ್ರಕರಣಗಳನ್ನಷ್ಟೇ ಆಯ್ಕೆ ಮಾಡಿಕೊಳ್ಳಲಾಗಿದೆ.

ಸೋಂಕು ಹೆಚ್ಚು ವ್ಯಾಪಕವಾಗಿದ್ದ ದಕ್ಷಿಣ ಆಫ್ರಿಕಾದಿಂದ ಸಿಕ್ಕ ದತ್ತಾಂಶಗಳೂ ಇದನ್ನೇ ಹೇಳುತ್ತಿವೆ. ಇತರ ರೂಪಾಂತರ ತಳಿಗಳಿಗೆ ಹೋಲಿಸಿದರೆ ಓಮೈಕ್ರಾನ್ ಸೋಂಕಿತರನ್ನು ಆಸ್ಪತ್ರೆಗೆ ಸೇರಿಸಬೇಕಾದ ಅಗತ್ಯ ಶೇ 80ರಷ್ಟು ಕಡಿಮೆ. ಓಮೈಕ್ರಾನ್ ಸೋಂಕಿಗೆ ಒಳಗಾದ ರೋಗಿಗಳು ಗಂಭೀರ ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆಯು ಡೆಲ್ಟಾ ತಳಿ ಸೋಂಕಿತರಿಗೆ ಹೋಲಿಸಿದರೆ ಶೇ 70ರಷ್ಟು ಕಡಿಮೆ ಎಂದು ಸೋಂಕು ರೋಗಗಳ ರಾಷ್ಟ್ರೀಯ ಸಂಸ್ಥೆಯು ಹೇಳಿದೆ.

ಬೇರೆ ಬೇರೆ ಸಮುದಾಯಗಳಲ್ಲಿ ಸೋಂಕಿನ ತೀವ್ರತೆಯು ಭಿನ್ನವಾಗಿರಬಹುದು. ಹೆಚ್ಚು ವಯಸ್ಸಾದವರಲ್ಲಿ ಪರಿಣಾಮ ಹೇಗಿರುತ್ತದೆ ಎಂಬ ಬಗ್ಗೆ ಪೂರ್ಣ ಅಧ್ಯಯನ ನಡೆದಿಲ್ಲ ಎಂದು ಜಗತ್ತಿನ ವಿವಿಧ ಭಾಗಗಳ ಸಂಶೋಧಕರು ಹೇಳಿದ್ದಾರೆ.

ಚಟುವಟಿಕೆಗಳಿಗೆ ನಿರ್ಬಂಧ

- ಸ್ಪೇನ್‌ನ ಕೆಟಲೋನಿಯಾದಲ್ಲಿ ಶುಕ್ರವಾರದಿಂದ ರಾತ್ರಿ ಕರ್ಫ್ಯೂ ಜಾರಿಯಾಗಲಿದೆ. ದೇಶದಲ್ಲಿ ಓಮೈಕ್ರಾನ್ ಪ್ರಕರಣ ಹೆಚ್ಚಳವು ವೇಗ ಪಡೆದಿದ್ದು, ರಾತ್ರಿ ಕರ್ಫ್ಯೂ ವಿಧಿಸಲು ಕೆಟಲೋನಿಯಾ ಆಡಳಿತ ನಿರ್ಧರಿಸಿದೆ. ಇದು ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಮೇಲೆ ಪರಿಣಾಮ ಬೀರಲಿದೆ.
- ಜಗತ್ತಿನ ವಿವಿಧ ದೇಶಗಳಲ್ಲಿ ಓಮೈಕ್ರಾನ್ ಪ್ರಕರಣಗಳು ಕಂಡುಬಂದಿರುವುದರಿಂದ ಪ್ರಸಿದ್ಧ ವಿಮಾನಯಾನ ಸಂಸ್ಥೆ ಲುಫ್ತಾನ್ಸಾ, ಹಲವು ವಿಮಾನಗಳ ಹಾರಾಟವನ್ನು ರದ್ದುಪಡಿಸಲು ನಿರ್ಧರಿಸಿದೆ
- ಗ್ರೀಸ್‌ನಲ್ಲಿ ಕ್ರಿಸ್‌ಮಸ್ ಆಚರಣೆಗಳು ಹಾಗೂ ಬಹಿರಂಗ ಕಾರ್ಯಕ್ರಮಗಳನ್ನು ರದ್ದುಪಡಿಸಲು ಸರ್ಕಾರ ಗುರುವಾರ ನಿರ್ಧರಿಸಿದೆ. ಮಾಸ್ಕ್ ಕಡ್ಡಾಯ ಸೇರಿದಂತೆ ವಿವಿಧ ನಿಯಮಗಳು ಶುಕ್ರವಾರದಿಂದ ಜಾರಿಗೆ ಬರಲಿವೆ.
- ಕ್ರಿಸ್‌ಮಸ್ ಮುಗಿದ ತಕ್ಷಣ ಹಲವು ನಿರ್ಬಂಧಗಳನ್ನು ಜಾರಿಗೆ ತರಲು ಸ್ಕಾಟ್ಲೆಂಡ್ ನಿರ್ಧರಿಸಿದೆ. ನೈಟ್‌ಕ್ಲಬ್‌ಗಳನ್ನು ಬಂದ್ ಮಾಡಲು ತೀರ್ಮಾನಿಸಲಾಗಿದ್ದು, ಸೋಮವಾರ ಬೆಳಗಿನ ಜಾವ 5 ಗಂಟೆಯಿಂದ ಈ ಆದೇಶ ಜಾರಿಗೆ ಬರಲಿದೆ
- ಬ್ರಿಟನ್‌ನಲ್ಲಿ ಒಂದು ವಾರದಲ್ಲಿ 12 ಲಕ್ಷ ಜನರು ಕೊರೊನಾ ಸೋಂಕಿಗೆ ಒಳಗಾಗಿದ್ದಾರೆ. ದೇಶದ ಪ್ರತೀ 45 ಜನರ ಪೈಕಿ ಒಬ್ಬ ವ್ಯಕ್ತಿಗೆ ಸೋಂಕು ಕಾಣಿಸಿಕೊಂಡಿದೆ ಎಂದು ತಜ್ಞರು ಹೇಳಿದ್ದಾರೆ
- ಕ್ರಿಸ್‌ಮಸ್ ಆಚರಣೆ ಮುಗಿಯುವವರೆಗೆ ಯಾವುದೇ ಹೊಸ ನಿರ್ಬಂಧಗಳನ್ನು ಜಾರಿಗೆ ತರದಿರಲು ಬ್ರಿಟನ್ ಸರ್ಕಾರ ಗುರುವಾರ ತಿಳಿಸಿದೆ
- ಇಟಲಿಯಲ್ಲಿ ಓಮೈಕ್ರಾನ್ ವೇಗವಾಗಿ ಹರಡುತ್ತಿದ್ದು, ಮುಂದಿನ ದಿನಗಳಲ್ಲಿ ಪ್ರಾಬಲ್ಯ ಸಾಧಿಸಲಿದೆ ಎಂದು ರಾಷ್ಟ್ರೀಯ ಆರೋಗ್ಯ ಸಂಸ್ಥೆ ತಿಳಿಸಿದೆ. ಡಿ.6ರಂದು ನಡೆಸಿದ ಸಮೀಕ್ಷೆಯಲ್ಲಿ ಶೇ 0.19ರಷ್ಟಿದ್ದ ಓಮೈಕ್ರಾನ್ ಪ್ರಕರಣ ಪ್ರಮಾಣವು ಡಿ.20ರಂದು ನಡೆಸಿದ ಸಮೀಕ್ಷೆಯಲ್ಲಿ ಶೇ 28ಕ್ಕೆ ಏರಿಕೆಯಾಗಿದೆ

‘ಕೋವಿಡ್ ಹೆಚ್ಚಳ: ನಿರ್ವಹಣೆಗೆ ದೆಹಲಿ ಸಜ್ಜು’

ನವದೆಹಲಿ (ಪಿಟಿಐ): ಪ್ರತಿ ದಿನದ ಕೋವಿಡ್ ಪರೀಕ್ಷಾ ಸಾಮರ್ಥ್ಯವನ್ನು ಮೂರು ಲಕ್ಷಕ್ಕೆ ಏರಿಸಲು ಮತ್ತು ಮನೆ ಪ್ರತ್ಯೇಕವಾಸದ ಮಾದರಿಯಲ್ಲಿ ಪ್ರತಿ ದಿನ ಒಂದು ಲಕ್ಷ ಪ್ರಕರಣಗಳನ್ನು ನಿರ್ವಹಿಸಲು ಬೇಕಾದ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಓಮೈಕ್ರಾನ್ ಸೋಂಕಿನ ಹೆಚ್ಚಿನ ಪ್ರಕರಣಗಳಲ್ಲಿ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸಬೇಕಾದ ಅಗತ್ಯ ಇಲ್ಲ. ಹಾಗಾಗಿ, ಮನೆ ಪ್ರತ್ಯೇಕವಾಸ ಮಾದರಿಯನ್ನು ಬಲಪಡಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ ಸಂಸ್ಥೆಯೊಂದನ್ನು ನಿಯೋಜಿಸಲಾಗಿದೆ ಎಂದು ಕೇಜ್ರಿವಾಲ್ ತಿಳಿಸಿದ್ದಾರೆ.

2ನೇ ಡೋಸ್: ಬೆಂ.ನ. ಜಿಲ್ಲೆ ಶೇ 100 ಗುರಿ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ವಿತರಣೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಮುಂಚೂಣಿಯಲ್ಲಿದ್ದು, ಎರಡನೇ ಡೋಸ್ ವಿತರಣೆಯಲ್ಲೂ ಶೇ 100 ರಷ್ಟು ಗುರಿ ಸಾಧಿಸಿದೆ. ಈ ಮೂಲಕ ಗೊತ್ತುಪಡಿಸಲಾದ ಗುರಿ ಸಾಧಿಸಿದ ರಾಜ್ಯದ ಮೊದಲ ಜಿಲ್ಲೆಯಾಗಿ ಹೊರಹೊಮ್ಮಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ 10.32 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಜಿಲ್ಲೆಯಲ್ಲಿ ವಲಸೆ ಕಾರ್ಮಿಕರು ಸೇರಿದಂತೆ 13.26 ಲಕ್ಷ ಮಂದಿಗೆ ಮೊದಲ ಡೋಸ್ (ಶೇ 129) ಹಾಗೂ 10.35 ಲಕ್ಷ ಮಂದಿಗೆ ಎರಡನೇ ಡೋಸ್ ನೀಡಲಾಗಿದೆ.

ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟ 4.89 ಕೋಟಿ ಮಂದಿ ಇದ್ದಾರೆ. ಅವರಲ್ಲಿ 4.73 ಕೋಟಿ ಮೊದಲ ಡೋಸ್ ಪಡೆದಿದ್ದು, ಶೇ 97 ರಷ್ಟು ಗುರಿ ಸಾಧಿಸಲಾಗಿದೆ. 3.67 ಕೋಟಿ ಮಂದಿ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. ಎರಡನೇ ಡೋಸ್ ವಿತರಣೆಯಲ್ಲಿ ರಾಜ್ಯವು ಶೇ 75 ರಷ್ಟು ಗುರಿ ಸಾಧಿಸಿದೆ.

ಎರಡನೇ ಡೋಸ್ ವಿತರಣೆಯಲ್ಲಿ 16 ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಅಧಿಕ ಪ್ರಮಾಣದಲ್ಲಿ ಲಸಿಕೆ ನೀಡಿವೆ. ಕಲಬುರಗಿ (ಶೇ 60), ರಾಯಚೂರು (ಶೇ 64) ಸೇರಿದಂತೆ 15 ಜಿಲ್ಲೆಗಳು ಹಿಂದೆ ಬಿದ್ದಿವೆ. ಮೊದಲ ಡೋಸ್ ವಿತರಣೆಯಲ್ಲಿ ಗದಗ, ವಿಜಯಪುರ, ಬಾಗಲಕೋಟೆ, ಕೊಡಗು ಜಿಲ್ಲೆಗಳು ಕೂಡ ಶೇ 100 ರಷ್ಟು ಗುರಿ ಸಾಧನೆ ಮಾಡಿವೆ.

2ನೇ ಡೋಸ್ ಮುಂದಿರುವ ಅಗ್ರ 5 ಜಿಲ್ಲೆಗಳು (%)

ಜಿಲ್ಲೆ	%
ಬೆಂಗಳೂರು ನಗರ	100
ಕೊಡಗು	90
ಮಂಡ್ಯ	84
ರಾಮನಗರ	83
ಉಡುಪಿ	82

2ನೇ ಡೋಸ್ ಹಿಂದುಳಿದ ಅಗ್ರ 5 ಜಿಲ್ಲೆಗಳು (%)

ಜಿಲ್ಲೆ	%
ಕಲಬುರಗಿ	60
ರಾಯಚೂರು	64
ಹಾವೇರಿ	68
ಬಳ್ಳಾರಿ	68
ಕೊಪ್ಪಳ	69

ನಿಧನ ವಾರ್ತೆ

ಜಯದೇವಪ್ಪ




ದಾವಣಗೆರೆ: ರಾಜ್ಯಸಭೆ ಮಾಜಿ ಸದಸ್ಯ, ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಕೆ.ಆರ್. ಜಯದೇವಪ್ಪ (86) ಗುರುವಾರ ವಯೋಸಹಜ ಕಾಯಿಲೆಯಿಂದ ಎಸ್.ಎಸ್. ಹೈಟೆಕ್ ಆಸ್ಪತ್ರೆಯಲ್ಲಿ ನಿಧನರಾದರು.

ರಾಜಕೀಯ, ಸಾಮಾಜಿಕ, ಧಾರ್ಮಿಕ, ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವರು ಕೆಲಸ ಮಾಡಿದ್ದರು. ಮೃತರಿಗೆ ಪತ್ನಿ, ಪುತ್ರಿ, ಪುತ್ರ, ಮೊಮ್ಮಕ್ಕಳು ಇದ್ದಾರೆ. ಪಾರ್ಥಿವ ಶರೀರವನ್ನು ದಾವಣಗೆರೆ ವಿದ್ಯಾನಗರದ ಶಿಕ್ಷಕರ ಬಡಾವಣೆಯ ಅವರ ನಿವಾಸದಲ್ಲಿ ಡಿ.24ರ ಮಧ್ಯಾಹ್ನ 1ರ ವರೆಗೆ ಸಾರ್ವಜನಿಕರ ದರ್ಶನಕ್ಕಾಗಿ ಇಡಲಾಗುವುದು. ಮಧ್ಯಾಹ್ನ 2ಕ್ಕೆ ಬಾಡದಿಂದ ಕಂದಗಲ್‌ಗೆ ಹೋಗುವ ರಸ್ತೆಯಲ್ಲಿರುವ ಅವರ ತೋಟದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.

ತೆರಿಗೆ ಸಂಗ್ರಹ ಹೆಚ್ಚಳ: ಬೊಮ್ಮಾಯಿ

ಕಲ್ಯಾಣ ಕರ್ನಾಟಕಕ್ಕೆ ಸದ್ಯವೇ ₹3 ಸಾವಿರ ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಳಗಾವಿ (ಸುವರ್ಣ ವಿಧಾನಸೌಧ): ‘ಕಳೆದ ನಾಲ್ಕೈದು ತಿಂಗಳಲ್ಲಿ ಸಂಪನ್ಮೂಲ ಕ್ರೋಡೀಕರಣ ಗಣನೀಯವಾಗಿ ಹೆಚ್ಚಳವಾಗಿದೆ. ತೆರಿಗೆ ಸಂಗ್ರಹ ಪ್ರಮಾಣ ನವೆಂಬರ್ ಅಂತ್ಯಕ್ಕೆ ಶೇ 67ಕ್ಕೆ ಆಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ನಡೆದ 2021–22ನೇ ಸಾಲಿನ ₹3,577 ಕೋಟಿ ಮೊತ್ತದ ಪೂರಕ ಅಂದಾಜುಗಳ ಎರಡನೇ ಕಂತಿನ ಬೇಡಿಕೆಗಳ ಮೇಲಿನ ಚರ್ಚೆಗೆ ಅವರು ಉತ್ತರ ನೀಡಿದರು.

ಅನೇಕ ಕ್ಷೇತ್ರಗಳಲ್ಲಿ ತೆರಿಗೆ ಸಂಗ್ರಹ ಆಗುತ್ತಿರಲಿಲ್ಲ. ಅಲ್ಲೂ ಸಹ ತೆರಿಗೆ ಸಂಗ್ರಹಕ್ಕೆ ಒತ್ತು ನೀಡುವಂತೆ ಸೂಚಿಸಿದ್ದೇನೆ. ಆ ಸೂಚನೆ ನೀಡಿದ ಬಳಿಕ ಅಡಿಕೆಯಲ್ಲಿ ಜಿಎಸ್‌ಟಿ ರೂಪದಲ್ಲಿ ₹8 ಕೋಟಿ ಸಂಗ್ರಹ ಆಗಿದೆ ಎಂದು ಅವರು ಮಾಹಿತಿ ನೀಡಿದರು.

‘ಕಲ್ಯಾಣ ಕರ್ನಾಟಕ ಭಾಗಕ್ಕೆ ಈ ಸಾಲಿನಲ್ಲಿ ₹1,492 ಕೋಟಿ ಮೀಸಲಿಡಲಾಗಿದೆ. ಮಂಡಳಿಗೆ ₹882 ಕೋಟಿ ನೀಡಲಾಗಿದೆ. ಈ ಪೈಕಿ ₹707 ಕೋಟಿ ಖರ್ಚು ಆಗಿದೆ. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಹೆಚ್ಚುವರಿಯಾಗಿ ₹3 ಸಾವಿರ ಕೋಟಿ ನೀಡುವುದಾಗಿ ಘೋಷಣೆ ಮಾಡಿದ್ದೆ. ಅದರ ಕ್ರಿಯಾಯೋಜನೆ ಸಿದ್ಧವಾಗಿ ನನ್ನ ಬಳಿಗೆ ಬಂದಿದೆ. ಆ ಭಾಗದ ಶಾಸಕರ ಜತೆಗೆ ಸಮಾಲೋಚನೆ ನಡೆಸಿ ಕ್ರಿಯಾಯೋಜನೆಗೆ ಜನವರಿ 15ರೊಳಗೆ ಅನುಮೋದನೆ ನೀಡುತ್ತೇನೆ’ ಎಂದು ಅವರು ಹೇಳಿದರು.

ಎತ್ತಿನಹೊಳೆ ಯೋಜನೆಯ ಎರಡನೇ ಹಂತದಲ್ಲಿ ಅಣೆಕಟ್ಟೆ ನಿರ್ಮಾಣ ಮಾಡಬೇಕಿದೆ. ಭೂಸ್ವಾಧೀನದ ಪರಿಹಾರದ ವಿವಾದದಿಂದ ಸಮಸ್ಯೆ ಉಂಟಾಗಿದೆ. ಕ್ಷೇತ್ರಕ್ಕೆ ಒಂದೊಂದು ರೀತಿ ಪರಿಹಾರ ನೀಡಬೇಕು ಎಂಬ ಬೇಡಿಕೆ ಬಂದಿದೆ. ರಾಜಕೀಯ ಕಾರಣದಿಂದ ಈ ಬೇಡಿಕೆ ಬಂದಿದೆ. ಪರಿಹಾರ ಮೊತ್ತವನ್ನು ಹೆಚ್ಚಿಸಿ ಜನವರಿಯಲ್ಲಿ ಈ ಸಮಸ್ಯೆ ಬಗೆಹರಿಸುವೆ ಎಂದು ಅವರು ಭರವಸೆ ನೀಡಿದರು.

ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, ’ಮುಂದಿನ ದಿನಗಳಲ್ಲಿ ರಾಜ್ಯದ ಹಣಕಾಸಿನ ಪರಿಸ್ಥಿತಿಗೆ ಗಂಡಾಂತರ ಎದುರಾಗಲಿದೆ. ನಾನಾ ಮೂಲದ ಸಂಪನ್ಮೂಲ ಕ್ರೋಡೀಕರಣ ಕಡಿಮೆ ಆಗುತ್ತಿದೆ. ಖರ್ಚು ಜಾಸ್ತಿ ಆಗುತ್ತಿದೆ‘ ಎಂದರು.

’ಅಬಕಾರಿ ಆದಾಯ 2002–03ರಲ್ಲಿ ₹100–₹200 ಕೋಟಿ ಇತ್ತು. ಅಬಕಾರಿ ಕ್ಷೇತ್ರದ ಸುಧಾರಣೆಗೆ ಗಮನ ಹರಿಸಿದ ಬಳಿಕ ಅಬಕಾರಿ ಆದಾಯ ₹1 ಸಾವಿರ ಕೋಟಿಗೆ ಏರಿತು. ಈಗ ಅದು ₹22 ಸಾವಿರ ಕೋಟಿ ಆಗಿದೆ. ಇದರ ಮೇಲಿನ ಅವಲಂಬನೆ ಕ್ರಮೇಣ ಕಡಿಮೆ ಆಗಬೇಕು. ಗ್ರಾಮಗಳಲ್ಲಿ ಮದ್ಯಪಾನ ಹಾವಳಿ ಹೆಚ್ಚುತ್ತಿರುವ ಬಗ್ಗೆ ಅನೇಕ ಸದಸ್ಯರು ಈಗಾಗಲೇ ಕಳವಳ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು‘ ಎಂದು ಸಲಹೆ ನೀಡಿದರು.

’ನಮ್ಮ ರಾಜ್ಯಕ್ಕೆ ಬರುವ ಜಿಎಸ್‌ಟಿ ಪರಿಹಾರ 2020ರ ಮಾರ್ಚ್‌ಗೆ ನಿಲ್ಲಲಿದೆ. ಇದರಿಂದ ಪ್ರತಿವರ್ಷ ₹20 ಸಾವಿರ ಕೋಟಿ ಖೋತಾ ಆಗಲಿದೆ. ಜಿಎಸ್‌ಟಿ ಪರಿಹಾರ ನೀಡುವುದನ್ನು 2025ರ ವರೆಗೆ ವಿಸ್ತರಿಸಬೇಕು ಎಂದು ಹಲವು ಸಲ ಮನವಿ ಸಲ್ಲಿಸಲಾಗಿದೆ. ಆದರೆ, ಕೇಂದ್ರ ಸರ್ಕಾರ ಗಮನ ಹರಿಸಿಲ್ಲ. ಈ ಸಂಬಂಧ ಕೇಂದ್ರ ಸರ್ಕಾದ ಮೇಲೆ ಒತ್ತಡ ಹೇರಬೇಕು‘ ಎಂದು ಅವರು ಆಗ್ರಹಿಸಿದರು.

ಅಂಕಿ–ಅಂಶ

- ಶೇ 71 ವಾಣಿಜ್ಯ ತೆರಿಗೆ
- ಶೇ 67 ಅಬಕಾರಿ ತೆರಿಗೆ
- ಶೇ 66 ನೋಂದಣಿ ಮತ್ತು ಮುದ್ರಾಂಕ ಶುಲ್ಕ
- ಶೇ 54 ಮೋಟಾರು ವಾಹನ ತೆರಿಗೆ

ಹೆಚ್ಚುವರಿ ₹500 ಕೋಟಿ ಬಿಡುಗಡೆ

‘ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿಗಮಗಳ ಅನುದಾನ ಕಡಿತ ಮಾಡಲಾಗಿದೆ ಎಂಬ ಅಭಿಪ್ರಾಯ ಇದೆ. ಆದರೆ, ಆ ನಿಗಮಗಳ ಬ್ಯಾಂಕ್ ಖಾತೆಗಳಲ್ಲಿ ₹950 ಕೋಟಿ ಇದೆ. ಅದನ್ನು ಬಳಸುವಂತೆ ತಿಳಿಸಲಾಗಿದೆ. ಜತೆಗೆ, ಹೆಚ್ಚುವರಿಯಾಗಿ ₹500 ಕೋಟಿ ಬಿಡುಗಡೆ ಮಾಡಿ ಕಾರ್ಯಾದೇಶ ನೀಡಲಾಗುತ್ತಿದೆ’ ಎಂದೂ ಬೊಮ್ಮಾಯಿ ತಿಳಿಸಿದರು.


‘ಕೆಪಿಎಸ್‌ಸಿ: ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ’

ಬೆಳಗಾವಿ : ‘2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಈ ವಿಷಯದಲ್ಲಿ ಮುಖ್ಯಮಂತ್ರಿ ಕೂಡಾ ಸಕಾರಾತ್ಮಕ ನಿಲುವು ಹೊಂದಿದ್ದಾರೆ’ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದವರು, ‘ಈ ಸಾಲಿನಲ್ಲಿ ಆಯ್ಕೆಯಾಗಿ ಹುದ್ದೆ ವಂಚಿತರಾದ ಅಭ್ಯರ್ಥಿಗಳ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ಈಗಾಗಲೇ ಈ ಬಗ್ಗೆ ಚರ್ಚೆ ನಡೆಸಿದ್ದೇವೆ. ಆದರೆ, ಕಾನೂನಾತ್ಮಕವಾಗಿ ಸಂಕೀರ್ಣವಾದ ವಿಷಯ. ಹೀಗಾಗಿ, ಅಂತಿಮ ತೀರ್ಮಾನಕ್ಕೆ ಬರಲು ಕಾಲಾವಕಾಶ ಅಗತ್ಯವಿದೆ’ ಎಂದರು.

‘ನೇಮಕಾತಿಯಲ್ಲಿ ಅಕ್ರಮ ಎಸಗಿದ ಆರೋಪ ಎದುರಿಸುತ್ತಿರುವ ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ವಿಚಾರಣೆ ಕೈ ಬಿಡಲು ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಈ ಕುರಿತ ಮಾಹಿತಿಯನ್ನು ರಾಷ್ಟ್ರಪತಿಗೆ ಕಳುಹಿಸಬೇಕಿದ್ದು, ಆ ಪ್ರಕ್ರಿಯೆ ಇನ್ನೂ ಪೂರ್ಣ ಆಗಿಲ್ಲ. ಅಲ್ಲದೆ, ಅಭ್ಯರ್ಥಿಗಳಿಗೆ ಹುದ್ದೆ ನೀಡುವ ವಿಷಯದಲ್ಲಿ ಈ ಅಧಿವೇಶನದಲ್ಲಿಯೇ ಏನಾದರೂ ಮಾಡಬೇಕು ಎಂದು ತೀರ್ಮಾನಿಸಿದ್ದೆವು. ಮುಖ್ಯಮಂತ್ರಿ ಕೂಡಾ ಈ ಬಗ್ಗೆ ಒಲವು ವ್ಯಕ್ತಪಡಿಸಿದ್ದರು’ ಎಂದರು.

ಹೊಸ ವರ್ಷಾಚರಣೆ ಮಾಡಿದರೆ ಧರಣಿ: ಮುತಾಲಿಕ್ ಎಚ್ಚರಿಕೆ



ಹುಬ್ಬಳ್ಳಿ: ‘ರಾಜ್ಯದ ಧರ್ಮಸ್ಥಳ, ಇಸ್ಕಾನ್ ಹಾಗೂ ಆರ್ಟ್ ಆಫ್ ಲಿವಿಂಗ್‌ನಲ್ಲಿ ಹಿಂದೂ ಧರ್ಮಕ್ಕೆ ವಿರುದ್ಧವಾಗಿ ಜ. 1ರಂದು ಹೊಸ ವರ್ಷಾಚರಣೆ ಮಾಡಿದರೆ ಧರಣಿ ನಡೆಸಲಾಗುವುದು’ ಎಂದು ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಎಚ್ಚರಿಕೆ ನೀಡಿದರು.

‘ಈ ಹಿಂದೂ ಧಾರ್ಮಿಕ ಸ್ಥಳಗಳಲ್ಲಿ ಕ್ರೈಸ್ತರ ಹೊಸ ವರ್ಷವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಸ್ವಾಗತ ಫಲಕ ಅಳವಡಿಕೆ, ದೀಪಾಲಂಕಾರ, ವಿಶೇಷ ಪೂಜೆಯೊಂದಿಗೆ ಸಿಹಿ ವಿತರಿಸಲಾಗುತ್ತಿದೆ. ಇದರಿಂದಾಗಿ ಹಿಂದೂ ಧರ್ಮಕ್ಕೆ ತಪ್ಪು ಸಂದೇಶ ಹೋಗುತ್ತದೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಹಿಂದೂಗಳಿಗೆ ಯುಗಾದಿಯಂದು ಹೊಸ ವರ್ಷ ಆರಂಭವಾಗುತ್ತದೆ. ಕ್ರೈಸ್ತರ ಹೊಸ ವರ್ಷಾಚರಣೆ ಮಾಡದಂತೆ ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ ಗುರೂಜಿ ಹಾಗೂ ಇಸ್ಕಾನ್‌ನ ಮಧುದಾಸ ಪಂಡಿತ ಅವರಿಗೆ ಪತ್ರ ಬರೆದು ಕೋರಲಾಗಿದೆ’ ಎಂದರು.

ಓಲೈಕೆಗಾಗಿ ಮಸೂದೆ: ‘ರಾಜ್ಯದ ಬಿಜೆಪಿ ಸರ್ಕಾರ ಮತಾಂತರ ನಿಷೇಧ ಮಸೂದೆ ಮಂಡಿಸಿರುವುದು ಸ್ವಾಗತಾರ್ಹವಾದರೂ, ಇದರ ಹಿಂದೆ ಹಿಂದೂಗಳ ಓಲೈಸುವ ತಂತ್ರವಿದೆ’ ಎಂದು ಅವರು ಟೀಕಿಸಿದರು.

ಶುಕ್ರವಾರ, ಡಿಸೆಂಬರ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 355 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
‘ರೈಡರ್’ ಆಗಿ ಸಿನಿಪಯಣದಲ್ಲಿ ರೈಡಿಂಗ್‌ಗೆ ನಟ ನಿಖಿಲ್ ಕುಮಾರ್ ಸಜ್ಜಾಗಿದ್ದಾರೆ



ಸಂಖ್ಯೆ-ಸುದ್ದಿ
ಪೋಷಣ ಅಭಿಯಾನ ನಿತ್ರಾಣ

ಗೋವು ತಾಯಿ, ಪವಿತ್ರ: ಮೋದಿ 6
‘ಅಂಬೇಡ್ಕರ್ ಮತಾಂತರವಾಗಿಲ್ಲವೇ’ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,315 ▲	17,072 ▲	₹49,800 (ಬೆಂಗಳೂರು) ▲	₹63,500 (ಬೆಂಗಳೂರು) ▲	75.26 ▲

ಚಿನಕುರಳಿ
ಪ್ರಕಾಶ್ ಶೆಟ್ಟಿ



‘ರಾಜ್ಯದಲ್ಲಿ ಶೀಘ್ರವೇ ಉದ್ಯೋಗ ನೀತಿ’ 10

ಮತಾಂತರ ನಿಷೇಧಕ್ಕೆ ಅಸ್ತು

ಕಾಂಗ್ರೆಸ್ ಸದಸ್ಯರ ಧರಣಿ, ಆಕ್ರೋಶದ ಮಧ್ಯೆ ವಿಧಾನಸಭೆಯಲ್ಲಿ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಮತಾಂತರವನ್ನು ನಿಷೇಧಿಸುವ, ಮತಾಂತರ ಮಾಡುವವರನ್ನು ಗರಿಷ್ಠ 10 ವರ್ಷ ಜೈಲು ಶಿಕ್ಷೆಗೆ ಗುರಿಪಡಿಸಲು ಅವಕಾಶ ಇರುವ ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ 2021’ಕ್ಕೆ ಕಾಂಗ್ರೆಸ್‌ನ ಪ್ರತಿಭಟನಾ ಧರಣಿ ಹಾಗೂ ಜೆಡಿಎಸ್ ವಿರೋಧದ ಮಧ್ಯೆಯೇ ವಿಧಾನಸಭೆಯಲ್ಲಿ ಗುರುವಾರ ಅಂಗೀಕಾರ ದೊರೆಯಿತು.

ವಿಧಾನಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದ ಕಾಂಗ್ರೆಸ್ ಸದಸ್ಯರು ಸರ್ಕಾರ ಮತ್ತು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಮಸೂದೆ ವಿರೋಧಿಸಿದರೂ ಏನು ಮಾಡಬೇಕು ಎಂಬ ಗೊಂದಲಕ್ಕೆ ಒಳಗಾದ ಜೆಡಿಎಸ್‌ನ ಒಂದಿಬ್ಬರು ಸದಸ್ಯರು ಧರಣಿಯಲ್ಲಿ ಭಾಗಿಯಾದರು. ಉಳಿದವರು ತಮಗೆ ಮೀಸಲಾದ ಜಾಗದಲ್ಲಿ ನಿಂತಿದ್ದರು. ಜೈಶ್ರೀರಾಂ ಎಂದು ಘೋಷಣೆ ಕೂಗುತ್ತಿದ್ದ ಆಡಳಿತ ಪಕ್ಷದ ಸದಸ್ಯರು ಮತ್ತು ಬಿಜೆಪಿಗೆ ಧಿಕ್ಕಾರ ಎಂದು ಅಬ್ಬರಿಸುತ್ತಿದ್ದ ವಿರೋಧ ಪಕ್ಷದ ಸದಸ್ಯರ ಗದ್ದಲದ ಮಧ್ಯೆಯೇ ಧ್ವನಿಮತದ ಮೂಲಕ ಮಸೂದೆಗೆ ಅನುಮೋದನೆ ಪಡೆಯಲಾಯಿತು.

ವಿಧಾನಪರಿಷತ್ತಿನಲ್ಲಿ ಮಸೂದೆಗೆ ಒಪ್ಪಿಗೆ ಸಿಕ್ಕಿದ ಬಳಿಕವಷ್ಟೇ ಕಾಯ್ದೆ ಜಾರಿಯಾಗಲಿದೆ. ಪರಿಷತ್ತಿನಲ್ಲಿ ಶುಕ್ರವಾರ ಮಸೂದೆ ಮಂಡಿಸುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಗುರುವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ, ಮಸೂದೆಯ ಕುರಿತು ಪ್ರಾಥಮಿಕ ವಿವರಣೆ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ನೀಡಲಿದ್ದಾರೆ ಎಂದರು.

ಆಗ ಮಾತನಾಡಿದ ಮಾಧುಸ್ವಾಮಿ, ‘ಈ ಮಸೂದೆಯನ್ನು ಸಿದ್ದರಾಮಯ್ಯ ಅವಧಿಯಲ್ಲೇ ರೂಪಿಸಲಾಗಿತ್ತು. ಅಂದಿನ ಕಾನೂನು ಸಚಿವರು ಮಸೂದೆ ಪರಿಶೀಲನೆ ನಡೆಸಿ, ಸಚಿವ ಸಂಪುಟದ ಮುಂದೆ ತರಲು ಹೊರಟಿದ್ದರು. ಮಂಡಿಸುವಂತೆ ಸಿದ್ದರಾಮಯ್ಯ ಅವರೇ ಸಹಿ ಮಾಡಿದ್ದರು. ಅದೇ ಮಸೂದೆಯನ್ನು ನಾವು ಪರಿಷ್ಕರಿಸಿ ಮಂಡಿಸಿದ್ದೇವೆ’ ಎಂದು ಹೇಳಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ತಬ್ಬಿಬ್ಬುಗೊಳಿಸಿದರು.

7ನೇ ಪುಟ ನೋಡಿ

‘ಆರ್‌ಎಸ್‌ಎಸ್ ಕಾರ್ಯಸೂಚಿ’



ಸಿದ್ದರಾಮಯ್ಯ

ಮತಾಂತರ ಮಸೂದೆಯು ಆರ್‌ಎಸ್‌ಎಸ್‌ನ ರಹಸ್ಯ ಕಾರ್ಯಸೂಚಿಯ ಭಾಗ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕುಟುಕಿದರು.

5.11.2009 ರಲ್ಲಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಕೆಲವು ಮುಖಂಡರು ಮನವಿ ನೀಡಿ ಮಧ್ಯಪ್ರದೇಶ ರಾಜ್ಯದ ಮಾದರಿಯಲ್ಲೇ ಮತಾಂತರ ನಿಷೇಧ ಕಾಯ್ದೆ ತರಬೇಕು. ಮಧ್ಯಪ್ರದೇಶ ಹೆಸರು ತೆಗೆದು ಕರ್ನಾಟಕ ಎಂದು ಸೇರಿಸಿದರೆ ಸಾಕು ಎಂದು ಮನವಿ ಮಾಡಿದ್ದರು.

‘ಈ ಮನವಿಯನ್ನು ಸರ್ಕಾರ ಕಾನೂನು ಆಯೋಗಕ್ಕೆ ನೀಡಿತು. ಮತಾಂತರ ನಿಷೇಧ ಕಾಯ್ದೆಗೆ ಕಾಣದ ಕೈಗಳು ಇವರೇ (ಆರ್‌ಎಸ್‌ಎಸ್) ಆಗಿದ್ದಾರೆ. ಈ ಕಾಯ್ದೆ ನಮ್ಮ ಕೂಸು ಎನ್ನುವುದು ಸತ್ಯಕ್ಕೆ ದೂರ. ಅದೇನಿದ್ದರೂ ಬಿಜೆಪಿ ಸರ್ಕಾರ, ಆರೆಸ್ಸೆಸ್ ಕೂಸು’ ಎಂದು ಹೇಳಿದರು.

‘ರಹಸ್ಯ ಕಾರ್ಯಸೂಚಿಯಲ್ಲ’


ಬಸವರಾಜ ಬೊಮ್ಮಾಯಿ

ಮತಾಂತರ ನಿಷೇಧ ಕಾಯ್ದೆ ತರಬೇಕು ಎಂಬುದು ಆರ್‌ಎಸ್‌ಎಸ್‌ನ ರಹಸ್ಯ ಕಾರ್ಯಸೂಚಿಯಲ್ಲ. ಬಹಳ ಹಿಂದಿನಿಂದಲೂ ಸಂಘದ ನಾಯಕರು ಅದನ್ನು ಪ್ರತಿಪಾದಿಸಿಕೊಂಡು ಬಂದಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ನಿಮ್ಮ ಅವಧಿಯಲ್ಲಿ ಮಸೂದೆ ರೂಪಿಸಿದಿರಿ, ಆಗ ನೀವು ಈ ಕಾಯ್ದೆ ಮಾಡಲು ಮುಂದಾಗಿದ್ದು ಏಕೆಂದರೆ, ಆಗ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿ ವೀರಭದ್ರಸಿಂಗ್ ಅವರು ಮತಾಂತರ ನಿಷೇಧ ಕಾಯ್ದೆಯನ್ನು ಜಾರಿ ಮಾಡಿದ್ದರು’ ಎಂದರು.

ಓಮೈಕ್ರಾನ್: ಕೇಂದ್ರ ಆರೋಗ್ಯ ಸಚಿವಾಲಯದ ಸೂಚನೆ

ನಿರ್ಬಂಧ, ನಿಯಂತ್ರಣದ ಅಧಿಕಾರ ರಾಜ್ಯಗಳಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌–19 ನಿಯಂತ್ರಣಕ್ಕಾಗಿ ಈ ಹಿಂದೆ ರೂಪಿಸಿದ್ದ ಕೇಂದ್ರಗಳನ್ನು ಪುನರಾರಂಭಿಸಿ, ಅಗತ್ಯ ಔಷಧಗಳನ್ನು ದಾಸ್ತಾನು ಮಾಡಿಕೊಳ್ಳಿ ಮತ್ತು ಸ್ಥಳೀಯ ಸಾಂಕ್ರಾಮಿಕ ಪ್ರವೃತ್ತಿಗಳ ಬಗ್ಗೆ ಕಣ್ಣಿಟ್ಟಿರಿ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳಿಗೆ ಸೂಚನೆ ನೀಡಿದೆ. ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್‌ನ 300ಕ್ಕೂ ಹೆಚ್ಚು ಪ್ರಕರಣಗಳು ದೇಶದಲ್ಲಿ ದೃಢಪಟ್ಟ ಬಳಿಕ ಕೇಂದ್ರವು ಈ ಸೂಚನೆಗಳನ್ನು ಗುರುವಾರ ನೀಡಿದೆ.

ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 10 ದಾಟುವುದಕ್ಕೆ ಮುನ್ನ ಮತ್ತು ಆಮ್ಲಜನಕ ಲಭ್ಯ ಇರುವ ಹಾಸಿಗೆಗಳ ಭರ್ತಿ ಪ್ರಮಾಣವು ಶೇ 40ಕ್ಕೆ ತಲುಪುವ ಮುನ್ನ ನಿರ್ಬಂಧ ಮತ್ತು ನಿಷೇಧಗಳನ್ನು ಹೇರಲು ರಾಜ್ಯಗಳಿಗೆ ಅವಕಾಶ ಇದೆ. ಜನ ದಟ್ಟಣೆ ಮತ್ತು ಸ್ಥಳೀಯ ಪರಿಸ್ಥಿತಿಯ ಆಧಾರದಲ್ಲಿ ನಿರ್ಧಾರಗಳನ್ನು ಕೈಗೊಳ್ಳಬಹುದು. ಯಾವುದೇ ನಿರ್ಬಂಧಗಳನ್ನು ಹೇರುವುದಾದರೆ, ಕನಿಷ್ಠ 14 ದಿನ ಅದು ಜಾರಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಹೇಳಿದೆ.

‘ಕೋವಿಡ್‌–19 ನಿಯಂತ್ರಣಕ್ಕಾಗಿ ಈ ಹಿಂದೆ ಆರಂಭಿಸಿದ್ದ ಕೇಂದ್ರಗಳನ್ನು ಹಲವು ರಾಜ್ಯಗಳು ಸ್ಥಗಿತಗೊಳಿಸಿವೆ. ಈ ಎಲ್ಲ ಕೇಂದ್ರಗಳನ್ನು ಕಾರ್ಯಾಚರಣೆಗೆ ಸಿದ್ಧಪಡಿಸಲು ಕ್ರಿಯಾಯೋಜನೆ ರೂಪಿಸಿ, ವೈದ್ಯರು, ಆಂಬುಲೆನ್ಸ್ ಇತ್ಯಾದಿ ಲಭ್ಯ ಇರುವಂತೆ ನೋಡಿಕೊಳ್ಳಿ’ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

ಕ್ರಿಸ್ಮಸ್ ಮತ್ತು ಹೊಸ ವರ್ಷದ ಸಂಭ್ರಮಾಚರಣೆ ಹತ್ತಿರ ಬಂದಿದೆ. ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಗುಂಪುಗೂಡುವುದನ್ನು ತಡೆಯಲು ರಾತ್ರಿ ಕರ್ಫ್ಯೂ ಹೇರಬಹುದು. ಹೆಚ್ಚು ಜನರು ಸೇರುವುದನ್ನು ತಡೆಯಬೇಕು. ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳನ್ನು ರೂಪಿಸಬೇಕು. ಹೊಸ ಕ್ಲಸ್ಟರ್‌ಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸೂಚಿಸಿದೆ.

ರಾಜ್ಯದಲ್ಲಿ 12 ಪ್ರಕರಣ ದೃಢ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕಿನ 12 ಪ್ರಕರಣಗಳು ರಾಜ್ಯದಲ್ಲಿ ಗುರುವಾರ ದೃಢಪಟ್ಟಿವೆ. ಹೊಸ ತಳಿಯ ಸೋಂಕಿನ ಒಟ್ಟು ಪ್ರಕರಣಗಳ ಸಂಖ್ಯೆ 31ಕ್ಕೆ ಏರಿಕೆಯಾಗಿದೆ.

ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಿಂದ (ಜೀನೋಮ್ ಸೀಕ್ವೆನ್ಸಿಂಗ್) ಬೆಂಗಳೂರಿನಲ್ಲಿ 10, ಮೈಸೂರು ಹಾಗೂ ಮಂಗಳೂರಿನಲ್ಲಿ ತಲಾ ಒಬ್ಬರಲ್ಲಿ ಓಮೈಕ್ರಾನ್ ದೃಢಪಟ್ಟಿದೆ. ಸೋಂಕಿತ 12 ಮಂದಿಯಲ್ಲಿ 9 ಮಂದಿ ವಿದೇಶ ಪ್ರಯಾಣ ಮಾಡಿದ್ದರು.

ಮುಖ್ಯಾಂಶಗಳು

- ಮಧ್ಯ ಪ್ರದೇಶದಲ್ಲಿ ರಾತ್ರಿ 11ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಹೇರಲು ನಿರ್ಧಾರ
- ಪ್ರಧಾನಿ ಮೋದಿ ಅವರು ಹಿರಿಯ ಅಧಿಕಾರಿಗಳ ಜತೆಗೆ ಸಭೆ ನಡೆಸಿ ಮಾಹಿತಿ ಪಡೆದಿದ್ದಾರೆ

₹60 ಕೋಟಿ ವೇತನ ಹಿಂಬಾಕಿ ಪಾವತಿಯಲ್ಲಿ ಅಕ್ರಮ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿನಗೂಲಿ ನೌಕರರನ್ನು ಕಾಯಂ ಮಾಡುವ ಸುಳ್ಳು ಆಶ್ವಾಸನೆ ನೀಡುವ ಮೂಲಕ ₹60 ಕೋಟಿ ಲೂಟಿ ಮಾಡಲು ಬಿಬಿಎಂಪಿ ಅಧಿಕಾರಿಗಳು ಮುಂದಾಗಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ ವಕ್ತಾರ ಶರತ್ ಖಾದ್ರಿ ಆರೋಪಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2007ರಲ್ಲಿ ಬಿಬಿಎಂಪಿ ಸೇರಿದ 110 ಹಳ್ಳಿಗಳ ವ್ಯಾಪ್ತಿ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿದ್ದ 534 ದಿನಗೂಲಿ ನೌಕರರನ್ನು ಬಿಬಿಎಂಪಿಗೆ ವಿಲೀನಗೊಳಿಸಲಾಗಿತ್ತು. ವೇತನ ಹೆಚ್ಚಳಕ್ಕೆ ನೌಕರರು ನ್ಯಾಯಾಲಯದ ಮೊರೆ ಹೋಗಿದ್ದರಿಂದ ವೇತನ ಪಾವತಿ ಆಗಿರಲಿಲ್ಲ. 2013ರಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ನ್ಯಾಯಾಲಯದ ಆದೇಶ ನೀಡಿತ್ತು. ಈ ತನಕದ ವೇತನ ಪಾವತಿಯೇ ಆಗಿಲ್ಲ' ಎಂದರು.

'ಒಟ್ಟಾರೆ ₹60 ಕೋಟಿ ಹಿಂಬಾಕಿ ಮೊತ್ತವನ್ನು ಬಿಬಿಎಂಪಿ ಈಗ ಬಿಡುಗಡೆಗೊಳಿಸಿದೆ. ದಿನಗೂಲಿ ನೌಕರರ ಖಾತೆಗೆ ₹ 10 ಲಕ್ಷದಿಂದ ₹ 15 ಲಕ್ಷದವರೆಗೆ ಹಣ ವರ್ಗಾವಣೆಯಾಗಿದೆ. ಅಷ್ಟೂ ಹಣ ಲೂಟಿ ಮಾಡಲು ಅಧಿಕಾರಿಗಳು ತಂತ್ರ ಹೆಣೆದಿದ್ದಾರೆ' ಎಂದು ಆರೋಪಿಸಿದರು. 'ಉಮಾದೇವಿ ಪ್ರಕರದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಪ್ರಕಾರ ದಿನಗೂಲಿ ನೌಕರರನ್ನು ಕಾಯಂಗೊಳಿಸಲು ಅವಕಾಶ ಇಲ್ಲ. ಆದರೂ, ಈ ನೌಕರರನ್ನು ಕಾಯಂಗೊಳಿಸುವುದಾಗಿ ಸುಳ್ಳು ಹೇಳಿ ಅಧಿಕಾರಿಗಳು ಲಂಚ ಪಡೆಯುತ್ತಿದ್ದಾರೆ. ಲಂಚ ಕೊಡಲು ಹಣ ಇಲ್ಲ ಎಂದು ಕೈಚೆಲ್ಲಿರುವ ಕಾರ್ಮಿಕರಿಗೆ, ಬಿಡುಗಡೆ ಮಾಡಲಾದ ಹಿಂಬಾಕಿ ಮೊತ್ತವನ್ನೇ ಲಂಚವಾಗಿ ನೀಡುವಂತೆ ಒತ್ತಡ ಹೇರುತ್ತಿದ್ದಾರೆ' ದೂರಿದರು. 'ಈ ಪ್ರಕರಣವನ್ನು ಗಮನಿಸಿದರೆ ಶೇ 40ರಷ್ಟು ಲಂಚ ಪಡೆಯುವ ಸರ್ಕಾರ ಇದಲ್ಲ, ಶೇ 100ರಷ್ಟು ಲಂಚದ ಸರ್ಕಾರ' ಎಂದು ಎಎಪಿ ನಾಯಕ ದಾಸರಿ ಟೀಕಿಸಿದರು.

ಕೋವಿಡ್ ಲಸಿಕೆ: ಎರಡೂ ಡೋಸ್ ವಿತರಣೆ ಪೂರ್ಣಗೊಳಿಸಿದ ಪ್ರಥಮ ಜಿಲ್ಲೆ

ಶೇ 100 ರಷ್ಟು ಗುರಿ ಸಾಧನೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳ ವಿತರಣೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಶೇ 100 ರಷ್ಟು ಗುರಿ ತಲುಪಿದೆ. ಈ ಸಾಧನೆ ಮಾಡಿದ ರಾಜ್ಯದ ಪ್ರಥಮ ಜಿಲ್ಲೆ ಎಂಬ ಹಿರಿಮೆಗೆ ಭಾಜನವಾಗಿದೆ. ಈ ಸಾಧನೆಯ ರೂವಾರಿಗಳಾದ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಆರೋಗ್ಯ ಕಾರ್ಯಕರ್ತರನ್ನು ಗುರುವಾರ ಅಭಿನಂದಿಸಲಾಯಿತು. ಆರೋಗ್ಯ ಸಿಬ್ಬಂದಿ ಕೇಕ್ ಕತ್ತರಿಸುವ ಮೂಲಕ ಈ ಸಾಧನೆಯನ್ನು ಸಂಭ್ರಮಿಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಜಿಲ್ಲಾಧಿಕಾರಿ ಜೆ. ಮಂಜುನಾಥ್, 'ಈ ಸಾಧನೆಯ ಹಿಂದೆ ಆರೋಗ್ಯ ಕಾರ್ಯಕರ್ತರು ಸೇರಿದಂತೆ ಅನೇಕರ ಪರಿಶ್ರಮವಿದೆ. 2021ರ ಜ.16ರಿಂದ ಇಲ್ಲಿ ಲಸಿಕೆ ವಿತರಿಸಲಾಗುತ್ತಿದೆ. ಬಹಳಷ್ಟು ಜಿಲ್ಲೆಗಳಲ್ಲಿ ಮೊದಲನೇ ಡೋಸ್ ನೀಡುವ ಗುರಿ ತಲುಪಲು ಇನ್ನೂ ಸಾಧ್ಯವಾಗಿಲ್ಲ. ಆದರೆ, ನಾವು ಮೊದಲನೇ ಡೋಸ್ ವಿತರಣೆಯಲ್ಲಿ ಗುರಿಗಿಂತಲೂ ಹೆಚ್ಚು ಮಂದಿಗೆ ಲಸಿಕೆ ನೀಡಿ, ಶೇ 129 ರಷ್ಟು ಸಾಧನೆ ಮಾಡಿದ್ದೇವೆ' ಎಂದು ತಿಳಿಸಿದರು.

'ನಗರ ಜಿಲ್ಲೆ ವ್ಯಾಪ್ತಿಗೆ ಮೂರು ತಾಲ್ಲೂಕುಗಳು ಬರುತ್ತವೆ. ಇಲ್ಲಿ 36 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಲಸಿಕೆ ವಿತರಿಸಲು ಆರೋಗ್ಯ ಕಾರ್ಯಕರ್ತರ ಜೊತೆಗೆ ಗುತ್ತಿಗೆ ಆಧಾರದಲ್ಲಿಯೂ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಲಸಿಕೆ ವಿತರಿಸುವ ಮೊದಲು ಆಸ್ಪತ್ರೆ ಹಾಗೂ ಅಲ್ಲಿನ ಸಿಬ್ಬಂದಿ ಬಗ್ಗೆ ಮಾಹಿತಿ ಕಲೆ ಹಾಕಲಾಯಿತು. 18 ವರ್ಷಗಳು ಮೇಲ್ಪಟ್ಟವರ ಸಂಖ್ಯೆಯನ್ನೂ ಗುರುತಿಸಲಾಯಿತು. ವಿವಿಧೆಡೆ ಲಸಿಕಾ ಅಭಿಯಾನ ನಡೆಸಿ, ಫಲಾನುಭವಿಗಳಿಗೆ ಸಮಸ್ಯೆಯಾಗದಂತೆ ಲಸಿಕೆಯನ್ನು ವಿತರಿಸಲಾಯಿತು' ಎಂದು ಹೇಳಿದರು.




ವೈದ್ಯಕೀಯ ಸಿಬ್ಬಂದಿ ಪರಸ್ಪರ ಕೇಕ್ ತಿನ್ನಿಸುವ ಮೂಲಕ ಸಂಭ್ರಮಿಸಿದರು. ಡಾ. ಮದಿನಿ, ಡಾ.ಎಸ್‌ಜಿ. ಶ್ರೀನಿವಾಸ್ ಹಾಗೂ ಜೆ.ಮಂಜುನಾಥ್ ಇದ್ದಾರೆ –ಪ್ರಜಾವಾಣಿ ಚಿತ್ರ

> **ಓಮೈಕ್ರಾನ್ ಸೋಂಕು ಹರಡುತ್ತಿರುವುದರಿಂದ ಲಸಿಕೆ ಪಡೆದರೂ ಎಚ್ಚರಿಕೆಯಿಂದ ಇರಿ. ಹೊಸ ವರ್ಷದ ಸಂದರ್ಭದಲ್ಲಿ ಗುಂಪು ಸೇರಬಾರದು.**
> **ಜೆ. ಮಂಜುನಾಥ್**
> ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿ

ಕಾರ್ಯಯೋಜನೆ ಸಾಕಾರ: 'ಕೆಲ ಔಷಧ ಕಂಪನಿಗಳೂ ಲಸಿಕಾ ಅಭಿಯಾನದಲ್ಲಿ ಕೈಜೋಡಿಸಿದವು. ಇದರಿಂದಾಗಿ ವಲಸೆ ಕಾರ್ಮಿಕರು ಸೇರಿದಂತೆ ಎಲ್ಲರಿಗೂ ಲಸಿಕೆ ನೀಡಲಾಯಿತು. 2021ರ ಆ.29ರಂದು ಮೊದಲ ಡೋಸ್ ವಿತರಣೆಯಲ್ಲಿ ಶೇ 100 ರಷ್ಟು ಸಾಧನೆ ಮಾಡಿದ್ದೆವು. ಕೆಲವರು ನಿಗದಿತ ಅವಧಿ ಮೀರಿದರೂ ಎರಡನೇ ಡೋಸ್ ಪಡೆಯಲು ಬಾರದಿದ್ದಾಗ ಅವರನ್ನು ಸಂಪರ್ಕಿಸಿ, ಲಸಿಕಾ ಕೇಂದ್ರಗಳಿಗೆ ಕರೆತರಲಾಯಿತು' ಎಂದು ಹೇಳಿದರು.

'ಲಸಿಕೆ ಲಭ್ಯತೆ, ವಿತರಣೆಗೆ ಸಂಬಂಧಿಸಿದಂತೆ ಕಾರ್ಯಯೋಜನೆಯನ್ನು ರೂಪಿಸಲಾಯಿತು. ಇದು ಸಾಕಾರವಾಗಲು ಕೋವಿಡ್ ವಾರ್ ರೂಮ್ ತಂಡವು ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಬಿಬಿಎಂಪಿ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಇರುವ ಕೆಲವರು ನಗರ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಆರೋಗ್ಯ ಕೇಂದ್ರಗಳಿಗೆ ಬಂದು, ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ನಾವು ಗುರಿಗಿಂತ ಹೆಚ್ಚಿನ ಮಂದಿಗೆ ಲಸಿಕೆ ನೀಡಿದ್ದೇವೆ' ಎಂದು ತಿಳಿಸಿದರು.

ಆರೋಗ್ಯ ಇಲಾಖೆಯ ಲಸಿಕೆ ವಿಭಾಗದ ಉಪ ನಿರ್ದೇಶಕಿ ಡಾ. ರಜನಿ ನಾಗೇಶ್ ರಾವ್, ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ಡಾ.ಎಸ್.ಜಿ. ಶ್ರೀನಿವಾಸ್, ಆರ್‌ಸಿಎಚ್‌ಒ ಡಾ.ಮದಿನಿ ಇದ್ದರು.



5 ಸಾವಿರಕ್ಕೂ ಹೆಚ್ಚು ಕೈದಿಗಳಿಗೂ ಲಸಿಕೆ

'ಲಸಿಕೆ ಪಡೆಯಲು ಪ್ರಾರಂಭಿಕ ದಿನಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಜನ ಬರುತ್ತಿದ್ದರು. ಭಯವನ್ನು ಹೋಗಲಾಡಿಸಿ, ಲಸಿಕೆಯ ಮಹತ್ವವನ್ನು ತಿಳಿಸಿದ ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರಲಾರಂಭಿಸಿದರು. ಪರಪ್ಪನ ಅಗ್ರಹಾರದಲ್ಲಿಯೂ ಲಸಿಕೆ ಶಿಬಿರ ನಡೆಸಿ, ಅಲ್ಲಿ 5 ಸಾವಿರಕ್ಕೂ ಅಧಿಕ ಕೈದಿಗಳಿಗೆ ಲಸಿಕೆ ನೀಡಲಾಯಿತು. ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಲಸಿಕಾ ಮೇಳವನ್ನೂ ನಡೆಸಿದೆವು. ಕೊಳೆಗೇರಿ ಪ್ರದೇಶಗಳು ಸೇರಿದಂತೆ ವಿವಿಧೆಡೆ ಉಚಿತವಾಗಿ ಲಸಿಕೆ ಒದಗಿಸಲಾಯಿತು. ಕೆಲ ಖಾಸಗಿ ಆಸ್ಪತ್ರೆಗಳೂ ಈ ಕಾರ್ಯಕ್ಕೆ ಸಹಕಾರ ನೀಡಿದವು' ಎಂದು ಜೆ. ಮಂಜುನಾಥ್ ವಿವರಿಸಿದರು.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವ ಕಾರಣದಿಂದ ಹೊಸ ವರ್ಷಾಚರಣೆಗೆ ನಿರ್ಬಂಧ ವಿಧಿಸಲು ರಾಜ್ಯ ಸರ್ಕಾರ ನಿರ್ಧರಿಸಿರುವುದು ಸರಿಯೆ?

ಜನಾಭಿಪ್ರಾಯ:

ಹೌದು	ಇಲ್ಲ
80%	20%

ಓಮೈಕ್ರಾನ್: ನಗರದ 10 ಮಂದಿಗೆ ಸೋಂಕು ದೃಢ

ಬೆಂಗಳೂರು: ನಗರದಲ್ಲಿ ಮತ್ತೆ 10 ಮಂದಿ ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕಿತರಾಗಿರುವುದು ಪತ್ತೆಯಾಗಿದೆ ಎಂದು ಆರೋಗ್ಯ ಇಲಾಖೆಯು ಗುರುವಾರ ತಿಳಿಸಿದೆ. ನಗರದಲ್ಲಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 19ಕ್ಕೆ ಏರಿಕೆಯಾಗಿದೆ.

ವಿದೇಶದಿಂದ ಬಂದು ಕೊರೊನಾ ಸೋಂಕಿತರಾದವರು ಹಾಗೂ ಅವರ ನೇರ ಸಂಪರ್ಕಿತರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಒಳಪಡಿಸಲಾಗಿತ್ತು. ಹೊಸ ಪ್ರಕರಣಗಳಲ್ಲಿ ಏಳು ಮಂದಿ ವಿದೇಶ ಪ್ರಯಾಣ ಮಾಡಿದವರು.

ಬ್ರಿಟನ್‌ನಿಂದ ಡಿ. 12ರಂದು ನಗರಕ್ಕೆ ಮರಳಿದ ಯುವತಿ ಓಮೈಕ್ರಾನ್ ಸೋಂಕು ಹೊಂದಿದ್ದಾರೆ. ಆ ಯುವತಿಯ ನೇರ ಸಂಪರ್ಕಕ್ಕೆ ಬಂದ ಅವರ ಕುಟುಂಬದ ಮೂವರು ಸದಸ್ಯರು ಕೂಡ ಓಮೈಕ್ರಾನ್ ಸೋಂಕಿತರಾಗಿದ್ದಾರೆ. ಯುವತಿಯ ಸಹೋದರಿ (20 ವರ್ಷ), ತಂದೆ (56 ವರ್ಷ) ಹಾಗೂ ತಾಯಿಗೆ (54 ವರ್ಷ) ಸೋಂಕು ತಗುಲಿರುವುದು ದೃಢಪಟ್ಟಿದೆ. ಇವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. .

ಬ್ರಿಟನ್‌ನಿಂದ ಇದೇ 17ರಂದು ಬೆಂಗಳೂರಿಗೆ ಮರಳಿದ 31 ವರ್ಷದ ಪುರುಷ, 18 ವರ್ಷದ ಯುವತಿ, 21 ವರ್ಷದ ಯುವಕ ಹಾಗೂ 42 ವರ್ಷದ ವ್ಯಕ್ತಿಗೆ ಸೋಂಕು ದೃಢಪಟ್ಟಿದೆ. ಡೆನ್ಮಾರ್ಕ್‌ನಿಂದ ಮರಳಿದ 11 ವರ್ಷದ ಬಾಲಕಿ, ನೈಜೀರಿಯಾದಿಂದ ಬಂದ 59 ವರ್ಷದ ಮಹಿಳೆ ಸೋಂಕಿತರಾಗಿದ್ದಾರೆ. ಘಾನಾದಿಂದ ದುಬೈಗೆ ತೆರಳಿ, ಇದೇ 16ರಂದು ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದ 27 ವರ್ಷದ ಬೆಂಗಳೂರಿನ ವ್ಯಕ್ತಿ ಸೋಂಕಿತರಾಗಿದ್ದಾರೆ. ಅವರೊಂದಿಗೆ ಸಂಪರ್ಕ ಹೊಂದಿದ್ದವರಲ್ಲಿ 26 ಮಂದಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಲಾಗಿದೆ.

ಮೈಸೂರಿನಲ್ಲಿ 9 ವರ್ಷದ ಬಾಲಕಿಯಲ್ಲೂ ಸೋಂಕು ಪತ್ತೆಯಾಗಿದೆ. ಬಾಲಕಿ ಹಾಗೂ ಆಕೆಯ ಪೋಷಕರು ಸ್ವಿಟ್ಜರ್ಲೆಂಡ್‌ನಿಂದ ಅಬುಧಾಬಿಗೆ ತೆರಳಿ, ಇದೇ 19ರಂದು ಬೆಂಗಳೂರಿನಿಂದ ಮೈಸೂರಿಗೆ ತೆರಳಿದ್ದರು.

7 ಮಂದಿಗೆ ಸೋಂಕು ದೃಢ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿದೇಶಗಳಿಂದ ಬಂದಿರುವ 7 ಮಂದಿಗೆ ಕೋವಿಡ್ ಸೋಂಕು ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

ಬುಧವಾರ ರಾತ್ರಿ 11.30ಕ್ಕೆ ಇಂಗ್ಲೆಂಡ್‌ನಿಂದ ಬಂದಿರುವ 35 ವರ್ಷದ ಮಹಿಳೆ, 38 ವರ್ಷದ ಪುರುಷನಿಗೆ ಕೋವಿಡ್ ದೃಢಪಟ್ಟಿದೆ. ಗುರುವಾರ ಮುಂಜಾನೆ ಬಂದಿರುವ ಪ್ರಯಾಣಿಕರಲ್ಲಿ 79 ವರ್ಷದ ವೃದ್ಧ, 24 ವರ್ಷದ ಪುರುಷ, 11 ವರ್ಷದ ಬಾಲಕಿ, 61 ವರ್ಷದ ಪುರುಷ ಹಾಗೂ ಶಾರ್ಜಾದಿಂದ ಬಂದಿರುವ 19 ವರ್ಷದ ಯುವತಿಯಲ್ಲಿ ಕೋವಿಡ್ ಸೋಂಕು ದೃಢಪಟ್ಟಿದೆ ಎಂದು ತಿಳಿಸಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,60,902 ▲
ಸಕ್ರಿಯ ಪ್ರಕರಣಗಳು	5,742 ▲
ಗುಣಮುಖರಾದವರು	12,38,780 ▲
ಒಟ್ಟು ಸಾವು	16,379 ▲
ದಿನದ ಏರಿಕೆ	
ಹೊಸ ಪ್ರಕರಣ	210 ▼
ಗುಣಮುಖ	207 ▲
ಸಾವು	1 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಂದಿ ಗಿರಿಧಾಮಕ್ಕೆ ಪ್ರವೇಶ ನಿಷೇಧ

ಚಿಕ್ಕಬಳ್ಳಾಪುರ: ಹೊಸ ವರ್ಷಾಚರಣೆ ಕಾರಣ ಹೆಚ್ಚು ಜನರು ಬರುವ ಸಾಧ್ಯತೆ ಇರುವುದರಿಂದ ನಂದಿಗಿರಿಧಾಮಕ್ಕೆ ಡಿ.30ರ ಸಂಜೆ 6ರಿಂದ ಜ.2ರ ಸಂಜೆ 6ರವರೆಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಹೊಸ ವರ್ಷ ಆಚರಿಸಲು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಓಮೈಕ್ರಾನ್ ಸೋಂಕು ಹರಡುವ ಭೀತಿ ಇರುವುದರಿಂದ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ ಜಿಲ್ಲಾಧಿಕಾರಿ ಆರ್.ಲತಾ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	27.76 ಕೋಟಿ ▲	3.47 ಕೋಟಿ
ಸಕ್ರಿಯ ಪ್ರಕರಣ	2.35 ಕೋಟಿ ▲	78,291 ▲
ಗುಣಮುಖ	24.49 ಕೋಟಿ ▼	3.42 ಕೋಟಿ
ಸಾವು	53.96 ಲಕ್ಷ ▲	4.78 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	9.04 ಲಕ್ಷ ▲	7,495 ▲
ಗುಣಮುಖ	5.57 ಲಕ್ಷ ▼	6,960 ▲
ಸಾವು	7,682 ▲	434 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಫ್ರಾನ್ಸ್
2.32ಲಕ್ಷ ▲	1.06 ಲಕ್ಷ ▲	84,272 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಬ್ರಿಟನ್
1.07 ಕೋಟಿ ▲	10.24 ಲಕ್ಷ ▲	15.77 ಲಕ್ಷ ▲

ಎಲ್ಲಿ ಹೆಚ್ಚು ಸಾವು (ಒಟ್ಟು)


ಮಹಾರಾಷ್ಟ್ರ	1.41 ಲಕ್ಷ
ಕೇರಳ	45,538 ▲
ತಮಿಳುನಾಡು	36,699 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.52 ▲
ಕೇರಳ	52.25 ▲
ತಮಿಳುನಾಡು	27.41

ಪ್ರಜಾವಾಣಿ ಗ್ರಾಫಿಕ್ಸ್







ಕ್ರಿಸ್‌ಮಸ್ ಹಬ್ಬದ ಆಚರಣೆಗೆ ಸಿದ್ಧತೆ

1. ಕ್ರಿಸ್‌ಮಸ್ ಅಂಗವಾಗಿ ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್ ಅನ್ನು ವಿದ್ಯುತ್ ದೀಪಗಳಿಂದ ಗುರುವಾರ ಅಲಂಕರಿಸಲಾಗಿತ್ತು

2. ಕ್ರಿಸ್‌ಮಸ್ ಅಂಗವಾಗಿ ಗುರುವಾರ ನಗರದ ಅಂಗಡಿಯೊಂದರಲ್ಲಿ ಅಲಂಕಾರಿಕ ಸಾಮಗ್ರಿಗಳ ಖರೀದಿಯಲ್ಲಿ ತೊಡಗಿರುವ ಮಹಿಳೆ

3. ಕ್ರಿಸ್‌ಮಸ್ ಅಂಗವಾಗಿ ನಗರದ ಮಹಾತ್ಮ ಗಾಂಧಿ ರಸ್ತೆಯ ಸೇಂಟ್ ಮಾರ್ಕ್ಸ್ ಕ್ಯಾಥಡ್ರಲ್ ಚರ್ಚ್ ಅನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು

ಪ್ರಜಾವಾಣಿ ಚಿತ್ರಗಳು

ಆನ್‌ಲೈನ್ ಸೇವೆಯಿಂದ ವ್ಯಾಪಾರ ಚೇತರಿಕೆ • ಜನರಿಂದ ಉತ್ತಮ ಸ್ಪಂದನೆ • ಸೇವೆ ವಿಸ್ತರಣೆಗೆ ಸಂಸ್ಥೆ ಸಿದ್ಧತೆ

ಹಾಪ್‌ಕಾಮ್ಸ್: ಆನ್‌ಲೈನ್ ಗ್ರಾಹಕರ ಸಂಖ್ಯೆ ಏರಿಕೆ

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ



ಮನೆಬಾಗಿಲಿಗೆ ಹಾಪ್‌ಕಾಮ್ಸ್ ಉತ್ಪನ್ನ ತಲುಪಿಸುವ ಸಿಬ್ಬಂದಿ

ಬೆಂಗಳೂರು: ತರಕಾರಿ, ಹಣ್ಣು, ಸೊಪ್ಪು ಸೇರಿದಂತೆ ಅಗತ್ಯ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸುತ್ತಿರುವ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘದ (ಹಾಪ್‌ಕಾಮ್ಸ್) ಆನ್‌ಲೈನ್ ಸೇವೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಉತ್ಪನ್ನಗಳನ್ನು ಖರೀದಿಸುವರ ಸಂಖ್ಯೆ ಗಣನೀಯವಾಗಿ ಏರಿದೆ.

ಗ್ರಾಹಕರ ಸಂಖ್ಯೆ ಕ್ಷೀಣಿಸಿದ್ದ ಮಳಿಗೆಗಳ ವ್ಯಾಪ್ತಿಯಲ್ಲಿ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಿ ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ ಸಂಸ್ಥೆ ಈ ಆನ್‌ಲೈನ್ ಸೇವೆಯನ್ನು ಉಚಿತವಾಗಿ ನೀಡಲು ಆರಂಭಿಸಿತ್ತು. ಗ್ರಾಹಕರ ಅನುಕೂಲಕ್ಕಾಗಿ ಆನ್‌ಲೈನ್ ಸೇವೆಯನ್ನು ಬೆಂಗಳೂರು ದಕ್ಷಿಣ ಭಾಗದ ಕೋರಮಂಗಲದ ನ್ಯಾಷನಲ್ ಗೇಮ್ಸ್ ವಿಲೇಜ್ (ಎನ್‌ಜಿವಿ) ಸಮೀಪದ ಹಾಪ್‌ಕಾಮ್ಸ್ ಮಳಿಗೆಯಲ್ಲಿ 2021ರ ಸೆಪ್ಟೆಂಬರ್‌ನಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿತ್ತು. ಗ್ರಾಹಕರ ಸ್ಪಂದನೆ ಆಧರಿಸಿ ನಗರದಾದ್ಯಂತ ಇರುವ ಬೇರೆ ಹಾಪ್‌ಕಾಮ್ಸ್ ಮಳಿಗೆಗಳಿಗೂ ಈ ಸೇವೆ ವಿಸ್ತರಿಸುವುದಾಗಿ ಸಂಸ್ಥೆ ತಿಳಿಸಿತ್ತು.

ಇದಕ್ಕಾಗಿ ಸಂಸ್ಥೆ ಹೊರತಂದಿರುವ ನೂತನ 'ಆನ್‌ಲೈನ್ ಸ್ಟೋರ್' ಆ್ಯಪ್ ಹಾಗೂ ಪೋರ್ಟಲ್ ಮೂಲಕ ಗ್ರಾಹಕರು ಮನೆಯಿಂದಲೇ ತಮಗೆ ಬೇಕಾದ ಉತ್ಪನ್ನಗಳನ್ನು ಖರೀದಿಸಲು ಒಲವು ತೋರಿದ್ದಾರೆ. ಇಂತಹ ಗ್ರಾಹಕರ ಸಂಖ್ಯೆಯೂ ಮೂರು ತಿಂಗಳಲ್ಲಿ ಏರಿಕೆ ಕಂಡಿದೆ.

'ಪ್ಯಾಕಿಂಗ್ ಮತ್ತು ಡೆಲಿವರಿ ಸಂಸ್ಥೆಯೊಂದರ ಪಾಲುದಾರಿಕೆಯಲ್ಲಿ ಆನ್‌ಲೈನ್ ಸೇವೆ ಒದಗಿಸುತ್ತಿದ್ದೇವೆ. ಆರಂಭದಲ್ಲಿ 10 ಮಂದಿ ಆನ್‌ಲೈನ್ ಸೇವೆ ಬಳಸುತ್ತಿದ್ದರು. ಈಗ ಸಂಸ್ಥೆಯ ಉತ್ಪನ್ನಗಳನ್ನು ಮನೆಗೆ ತರಿಸಿಕೊಳ್ಳುವವರ ಸಂಖ್ಯೆ ಹೆಚ್ಚಿದೆ' ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ 'ಪ್ರಜಾವಾಣಿ'ಗೆ ತಿಳಿಸಿದರು.

'ಆನ್‌ಲೈನ್ ಸೇವೆ ಆರಂಭಗೊಂಡ ಮೊದಲ ವಾರದಲ್ಲಿ ಸುಮಾರು ₹14 ಸಾವಿರದಷ್ಟು ವಹಿವಾಟು ನಡೆದಿತ್ತು. ಈಗ ದಿನಕ್ಕೆ ₹12 ಸಾವಿರದಷ್ಟು ವ್ಯಾಪಾರ ನಡೆಯುತ್ತಿದೆ. ತಿಂಗಳಿಗೆ ಒಟ್ಟಾರೆ ₹3 ಲಕ್ಷದವರೆಗೆ ವಹಿವಾಟು ಏರಿಕೆ ಕಂಡಿದೆ. ಆನ್‌ಲೈನ್ ಸೇವೆ ಆರಂಭಗೊಂಡ ನಂತರ ಸಂಸ್ಥೆಯ ಮಳಿಗೆಗಳಲ್ಲಿ ವ್ಯಾಪಾರ ವೃದ್ಧಿಯಾಗುತ್ತಿದೆ' ಎಂದರು.

ಹಾಪ್‌ಕಾಮ್ಸ್ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸುತ್ತಿರುವ 'ಕೋಡ್ ಕೆಟಲಿಸ್ಟ್' ಸಂಸ್ಥೆಯ ನಿರ್ದೇಶಕ ಜಿ.ಪ್ರಸಾದ್,'ಬಸವನಗುಡಿ, ಜಯನಗರ, ಜೆ.ಪಿ.ನಗರ, ಬನಶಂಕರಿ, ಕತ್ರಿಗುಪ್ಪೆ ಸೇರಿದಂತೆ ಬೆಂಗಳೂರು ದಕ್ಷಿಣ ಭಾಗದ ಗ್ರಾಹಕರು ಹೆಚ್ಚಾಗಿ ಆನ್‌ಲೈನ್ ಸೇವೆ ಬಳಸುತ್ತಿದ್ದಾರೆ. ಗ್ರಾಹಕರ ಮನವಿ ಮೇರೆಗೆ ಬೇರೆ ಕಡೆಗೂ ಉತ್ಪನ್ನಗಳನ್ನು ತಲುಪಿಸಲಾಗುತ್ತಿದೆ. ನಗರದಾದ್ಯಂತ ಮುಂದಿನ ವಾರದಿಂದ ಆನ್‌ಲೈನ್ ಸೇವೆ ಲಭ್ಯವಾಗಲಿದೆ' ಎಂದರು.



ಆರ್ಟ್ ಆಫ್ ಲಿವಿಂಗ್ ಸೇರಿದಂತೆ ವಿವಿಧ ಸಂಸ್ಥೆಗಳಿಂದ ಸಗಟು ಖರೀದಿ ಕೋರಿಕೆಗಳನ್ನು ಪೂರೈಸುತ್ತಿದ್ದೇವೆ. ಆಸಕ್ತರು ಹಾಪ್‌ಕಾಮ್ಸ್ ಅನ್ನು ಸಂಪರ್ಕಿಸಬಹುದು.

ಎನ್.ದೇವರಾಜು
ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷ

ಅಂಕಿ ಅಂಶ

1,400
ಆನ್‌ಲೈನ್‌ನಲ್ಲಿ ಹಾಪ್‌ಕಾಮ್ಸ್ ಈವರೆಗೆ ಪಡೆದ ಉತ್ಪನ್ನ ಪೂರೈಕೆ ಕೋರಿಕೆಗಳು

7.38 ಲಕ್ಷ
ಸೆಪ್ಟೆಂಬರ್‌ನಿಂದ ಈವರೆಗಿನ ವಹಿವಾಟು

ಆನ್‌ಲೈನ್ ಸೇವೆ ಹೇಗೆ?

'ಗುಣಮಟ್ಟದ ಉತ್ಪನ್ನಗಳನ್ನು ಮನೆಗೆ ತರಿಸಿಕೊಳ್ಳಲು ಇಚ್ಛಿಸುವ ಗ್ರಾಹಕರು https://play.google.com/store/apps/details?id=f2c.hopcoms.online ಅಥವಾ https://hopcomsonline.in/ ಮೂಲಕ ಹಾಪ್‌ಕಾಮ್ಸ್ ಆನ್‌ಲೈನ್ ಸೇವೆ ತಂತ್ರಾಂಶವನ್ನು ಬಳಸಬಹುದು.

ಇದು ಆ್ಯಪ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಗ್ರಾಹಕರಿಗೆ ಈ ಕೊಂಡಿ ಮೂಲಕ ಆನ್‌ಲೈನ್ ಸ್ಟೋರ್ ಸಂಪರ್ಕ ಲಭ್ಯ.

ಸಂಸ್ಥೆಯ ಎಲ್ಲ ಉತ್ಪನ್ನಗಳು ಹಾಗೂ ಅವುಗಳ ದರ ಸಹಿತ ಮಾಹಿತಿ ಅಲ್ಲಿ ಸಿಗಲಿದೆ.

ಬೇಡಿಕೆ ಸಲ್ಲಿಸಿದಷ್ಟು ಉತ್ಪನ್ನಗಳನ್ನು ಸಿಬ್ಬಂದಿ ಗ್ರಾಹಕರ ಮನೆಗೆ ತಲುಪಿಸುತ್ತಾರೆ' ಎಂದು ಜಿ.ಪ್ರಸಾದ್ ವಿವರಿಸಿದರು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 8951395439

ತೆರೆಯಲ್ಲಿ ಮಿಣುಕು ಬೆಳಕು 2021

2021ನೇ ವರ್ಷದ ಅಂತ್ಯದಲ್ಲಿ ನಿಂತು ಹಿನ್ನೋಟ ಬೀರಿದರೆ ಕಹಿ ನೆನಪುಗಳೇ ಹೆಚ್ಚು. ಎಲ್ಲೋ ಅಲ್ಲೊಂದು, ಇಲ್ಲೊಂದು ಸಿಹಿ ನೆನಪುಗಳು ನುಸುಳಿ ಬರುತ್ತವೆ. ಹೇಗಿತ್ತು ಈ ಸಿನಿವರ್ಷ? ಒಂದು ಅವಲೋಕನ

ಶರತ್ ಹೆಗ್ಡೆ

ಊಹೆ ಮಾಡಲಾಗದಷ್ಟು ದೀರ್ಘಾವಧಿಯ 'ಮಧ್ಯಂತರ ವಿರಾಮ' ಜಗತ್ತಿನ ಹಲವಾರು ಕ್ಷೇತ್ರಗಳಿಗಿಂತ ಚಿತ್ರರಂಗಕ್ಕೆ ಸ್ವಲ್ಪ ಹೆಚ್ಚೇ ಎನಿಸುವಷ್ಟು ಕಾಡಿದೆ. ಈ ಮಧ್ಯೆ ಅಲ್ಲೊಂದು ಇಲ್ಲೊಂದು ಎಂಬಂತೆ ಇತಿಮಿತಿಗಳ ನಡುವಿನ ಮಿಣುಕು ದೀಪಗಳು ತೆರೆಯನ್ನು ಬೆಳಗಿ ಮರೆಯಾಗಿವೆ. ಕನ್ನಡ ಚಿತ್ರರಂಗವನ್ನು ತುಂಬಾ ಕಾಡಿದ್ದು ಮಾತ್ರ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ನಿರ್ಗಮನ.

'ರಾಜತಂತ್ರ' ಸಿನಿಮಾ ಈ ಸಿನಿ ವರ್ಷಕ್ಕೊಂದು ಆರಂಭವನ್ನೇನೋ ನೀಡಿತು. ಆದರೆ ಸುಮಾರು ಮೂರು ತಿಂಗಳ ಕಾಲ ಚಿತ್ರರಂಗದ್ದು ತೀರಾ ಆಮೆ ನಡಿಗೆಯೇ. ಐದಾರು ಚಿತ್ರಗಳು ಬಂದವಾದರೂ ಗಳಿಕೆಯಲ್ಲಿ ಮುಂದಿದ್ದಂತಹ ಮನದಲ್ಲಿ ಉಳಿಯುವಂತಹ ಚಿತ್ರಗಳು ಅಷ್ಟಕ್ಕಷ್ಟೆ. ಫೆಬ್ರುವರಿಯಲ್ಲಿ ಬಿಡುಗಡೆಯಾದ 'ಪೊಗರು' ಚಿತ್ರ ಸ್ವಲ್ಪ ಭರವಸೆ ಮೂಡಿಸಿತು. ಮಾರ್ಚ್‌ನಲ್ಲಿ ಬಿಡುಗಡೆಯಾದ 'ರಾಬರ್ಟ್', ಏಪ್ರಿಲ್‌ನಲ್ಲಿ ಬಿಡುಗಡೆಯಾದ 'ಯುವರತ್ನ' ಸದ್ದನ್ನೇನೋ ಮಾಡಿದವು. ಆದರೆ ಪ್ರೇಕ್ಷಕರನ್ನು ಹೆಚ್ಚಾಗಿ ಆನ್‌ಲೈನ್ ವೇದಿಕೆಯಲ್ಲಷ್ಟೇ ತಲುಪಿದವು.

ಏಪ್ರಿಲ್‌ನಲ್ಲಿ ಬಿಡುಗಡೆಗೊಂಡ 'ಕೃಷ್ಣ ಟಾಕೀಸ್' ಚಿತ್ರವೇ ಕೊನೆ. ಆ ಬಳಿಕ ಮೇ ಜೂನ್ ತಿಂಗಳಲ್ಲಿ ಕೋವಿಡ್ ಕಾರಣಕ್ಕೆ ಚಿತ್ರಮಂದಿರಗಳನ್ನು ಪೂರ್ಣ ಬಂದ್ ಮಾಡಬೇಕಾಯಿತು. ಈ ನಡುವೆ 'ಶಿ', 'ಇಕ್ಕಟ್' ಚಿತ್ರಗಳು ಆನ್‌ಲೈನ್‌ನಲ್ಲಿ ಬಿಡುಗಡೆಗೊಂಡವು.

ಜುಲೈ ಅಂತ್ಯದಲ್ಲಿ ಶೇ 50ರ ಆಸನ ಭರ್ತಿ ನಿಯಮದೊಂದಿಗೆ ಮತ್ತೆ ಚಿತ್ರಮಂದಿರಗಳು ತೆರೆದಾಗ ಹೊಸಬರ ಸಿನಿಮಾ ಬಂದವಾದರೂ ಪ್ರೇಕ್ಷಕರು ಚಿತ್ರಮಂದಿರಗಳತ್ತ ಹೆಜ್ಜೆ ಹಾಕಲು ಮನಸ್ಸು ಮಾಡಲಿಲ್ಲ. ಬಹುತೇಕ ಕಡೆ ಚಿತ್ರಮಂದಿರಗಳೇ ತೆರೆಯಲಿಲ್ಲ.

ಅಕ್ಟೋಬರ್‌ನಲ್ಲಿ ಪಿ. ಶೇಷಾದ್ರಿ ನಿರ್ದೇಶನದ 'ಮೋಹನದಾಸ', ಸೂರಜ್ ಗೌಡ ನಟನೆ ನಿರ್ದೇಶನದ, ರಾಮ್‌ಕುಮಾರ್ ಮಗಳು ಧನ್ಯಾ ರಾಮ್‌ಕುಮಾರ್ ನಾಯಕಿಯಾಗಿ ಪರಿಚಿತರಾದ 'ನಿನ್ನ ಸನಿಹಕೆ' ಬೆಳಕು ಕಂಡವು. ಪರವಾಗಿಲ್ಲ ಅನ್ನಬಹುದಾದ ಬೆಳವಣಿಗೆಯಿದು.

ಅಕ್ಟೋಬರ್‌ನಲ್ಲಿ ಚಿತ್ರಮಂದಿರಗಳಲ್ಲಿ 'ಸಲಗ'ವೇನೋ ಸದ್ದು ಮಾಡಿತು. ಅದೇ ತಿಂಗಳು ಬಿಡುಗಡೆಯಾದ 'ಕೋಟಿಗೊಬ್ಬ -3' ಆರ್ಥಿಕ ಕಾರಣಗಳಿಂದಾಗಿ ಎಡವಟ್ಟು ಅನುಭವಿಸಿತು. ಅದೇ ವಾರ ಬಿಡುಗಡೆಯಾಗಿದ್ದ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿದ್ದ 'ಶ್ರೀಕೃಷ್ಣ@ಜಿಮೇಲ್.ಕಾಮ್' ಸಣ್ಣಗೆ ಕಚಗುಳಿಯಿಟ್ಟು ಸಾಗಿಬಿಟ್ಟಿತು.

ಅಕ್ಟೋಬರ್‌ನಲ್ಲಿ ಅಮೆಜಾನ್ ಪ್ರೈಮ್‌ನಲ್ಲಿ 'ರತ್ನನ್ ಪ್ರಪಂಚ' ಸಿನಿಮಾ ಬಿಡುಗಡೆಯಾಗಿ ಆನ್‌ಲೈನ್ ವೇದಿಕೆಯಲ್ಲೂ ಕನ್ನಡದಲ್ಲೊಂದು ಗಟ್ಟಿ ವಸ್ತುವೂ ಬರಲು ಸಾಧ್ಯ ಎಂಬುದನ್ನು ನಿರೂಪಿಸಿತು. ಅದೇ ತಿಂಗಳು ಶಿವರಾಜ್ ಕುಮಾರ್ ಅಭಿನಯದ 'ಭಜರಂಗಿ -2' ಬಿಡುಗಡೆಯಾಯಿತಾದರೂ ಪುನೀತ್ ರಾಜ್‌ಕುಮಾರ್ ಅವರ ನಿಧನ ಈ ಚಿತ್ರ ಹಾಗೂ ಇಡೀ ಉದ್ಯಮದ ಮೇಲೆ ಪರಿಣಾಮ ಬೀರಿತು.

ನವೆಂಬರ್‌ನಲ್ಲಿ ರಮೇಶ್ ಅರವಿಂದ್ ನಟಿಸಿ - ನಿರ್ದೇಶಿಸಿದ್ದ '100', ಮನುರಂಜನ್ ರವಿಚಂದ್ರನ್ ಅಭಿನಯದ 'ಮುಗಿಲ್ ಪೇಟೆ' ಮತ್ತು ರಾಜ್ ಶೆಟ್ಟಿ ಅವರ 'ಗರುಡ ಗಮನ ವೃಷಭ ವಾಹನ' ಬಿಡುಗಡೆಗೊಂಡವು. ಭಿನ್ನವಸ್ತು, ವಿಷಯ, ನಿರೂಪಣೆಯ ಕಾರಣಕ್ಕೆ ಗರುಡಗಮನಕ್ಕೆ ಪ್ರೇಕ್ಷಕರು ಭರ್ಜರಿ ಸ್ವಾಗತ ನೀಡಿದರು.

'ಅಕ್ಷಿ' ಚಿತ್ರಕ್ಕೆ ಮತ್ತು ಸಾಹಸ ಸಂಯೋಜಕ ವಿಕ್ರಂ ಮೋರ್ ಅವರಿಗೆ ರಾಷ್ಟ್ರಪ್ರಶಸ್ತಿ, ಲಾಸ್ ಏಂಜಲೀಸ್ ಚಿತ್ರೋತ್ಸವದಲ್ಲಿ 'ಅಮೃತಮತಿ' ಚಿತ್ರಕ್ಕೆ ಪ್ರಶಸ್ತಿ ಸಿಕ್ಕಿದ್ದು ಈ ವರ್ಷ ನೆನಪಿನಲ್ಲಿ ಉಳಿಯುವ ಬೆಳವಣಿಗೆಗಳು.

ವರ್ಷಾಂತ್ಯದ ಚಳಿಯ ಹಾಗೆ ಚಿತ್ರರಂಗದಲ್ಲೂ ಒಂದಿಷ್ಟು ತಂಗಾಳಿ ಬೀಸಿದೆ. ಗಣೇಶ್ ಅಭಿನಯದ 'ಸಖತ್', ಶ್ರೀಮುರಳಿ ನಟನೆಯ 'ಮದಗಜ', ದೃಶ್ಯ -2 ಬಿಡುಗಡೆಗೊಂಡಿವೆ. ಡಾಲಿ ಧನಂಜಯ ಅಭಿನಯದ ಬಡವ ರಾಸ್ಕಲ್, ನಿಖಿಲ್ ಕುಮಾರಸ್ವಾಮಿ ಅಭಿನಯದ 'ರೈಡರ್' ಚಿತ್ರಗಳ ಸರಣಿ ಬಿಡುಗಡೆ ಒಂದಿಷ್ಟು ಭರವಸೆ ಮೂಡಿಸಿವೆ. ಹಾಗೆಂದು ಪೂರ್ಣ ಚೇತರಿಸಿಕೊಂಡಿದೆ ಎಂದೂ ನಿಟ್ಟುಸಿರುಬಿಡುವಂತಿಲ್ಲ. ಕೋವಿಡ್ ನಂತರ ಓಮೈಕ್ರಾನ್ ಆತಂಕದ ನಡುವೆಯೇ ಚಿತ್ರರಂಗ ದಿನ ತಳ್ಳುತ್ತಿದೆ. ❖



ವಾದ – ವಿವಾದಗಳು

- 'ಪೊಗರು' ಸಿನಿಮಾದಲ್ಲಿ ಬ್ರಾಹ್ಮಣರನ್ನು ಅವಮಾನಿಸುವ ದೃಶ್ಯಗಳಿವೆ ಎಂಬ ಆರೋಪ ಕೇಳಿಬಂದಿತು. ಆಕ್ಷೇಪಾರ್ಹ ಭಾಗಗಳನ್ನು ತೆಗೆದು ಧ್ರುವ ಸರ್ಜಾ ಮತ್ತು ನಂದಕಿಶೋರ್ ಕ್ಷಮೆ ಕೇಳುವುದರೊಂದಿಗೆ ವಿವಾದ ಅಂತ್ಯವಾಯಿತು.
- ದರ್ಶನ್ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವಂಚಿಸಲಾಗಿದೆ ಎಂಬ ಸುದ್ದಿ ಕಿಡಿಹೊತ್ತಿ ನಿರ್ಮಾಪಕ ಉಮಾಪತಿ-ದರ್ಶನ್ ನಡುವಿನ ವೈಮನಸ್ಸಿಗೂ ಕಾರಣವಾಯಿತು.

ತಡವಾದ 'ಕೋಟಿಗೊಬ್ಬ 3'

- ಹಣಕಾಸಿನ ಸಮಸ್ಯೆಯಿಂದ 'ಕೋಟಿಗೊಬ್ಬ -3' ಒಂದು ದಿನ ತಡವಾಗಿ ಬಿಡುಗಡೆಯಾಯಿತು. ಇಲ್ಲೊಂದಿಷ್ಟು ವಿವಾದ, ಕಿತ್ತಾಟಗಳೂ ಸುದ್ದಿಯಾದವು.

ಮಾದೇಶನ ಹಾಡಿಗೆ ಆಕ್ಷೇಪ

- ರಾಜ್ ಶೆಟ್ಟಿ ನಿರ್ದೇಶನದ 'ಗರುಡ ಗಮನ ವೃಷಭ ವಾಹನ'ದಲ್ಲಿ ಮಾದೇಶ್ವರನ ಹಾಡಿನ ಬಳಕೆಗೆ ಆಕ್ಷೇಪ ಕೇಳಿಬಂತು. ಕೊನೆಗೂ ವಿವಾದ ಸೌಹಾರ್ದಯುತವಾಗಿ ತಣ್ಣಗಾಯಿತು.

ಯುವರತ್ನನ ನಿರ್ಗಮನ



ಕನ್ನಡ ಚಿತ್ರರಂಗದ ನಿಜ ಯುವರತ್ನ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ನಿಧನ ಚಂದನವನಕ್ಕೆ ಬಹುದೊಡ್ಡ ಹೊಡೆತ ನೀಡಿತು. ತೆರೆಯಾಚೆಗೂ ನಿಜ ನಾಯಕ ಹೇಗಿರುತ್ತಾನೆ ಎಂಬುದನ್ನು ನಿರೂಪಿಸಿ ಪುನೀತ್ ಅಗಲಿದರು. ಅದ್ಭುತ ವ್ಯಕ್ತಿಯಾಗಿ ನಾಡಿನ ಹೃದಯಗಳಲ್ಲಿ ಉಳಿದರು. ಅವರ ಅಗಲಿಕೆಯ ದುಃಖದಿಂದ ನವೆಂಬರ್‌ನಲ್ಲಂತೂ ಇಡೀ ಉದ್ಯಮವೇ ಸ್ಥಗಿತಗೊಂಡಂತಾಗಿತ್ತು. ಈಗ ಡಾಕ್ಯುಸಿನಿಮಾ 'ಗಂಧದ ಗುಡಿ' ನಿರ್ಮಾಣ ಪೂರ್ಣಗೊಂಡು ಮುಂದಿನ ವರ್ಷ ಬಿಡುಗಡೆಯಾಗಲಿದೆ. ಜೇಮ್ಸ್‌ನ ನಿರ್ಮಾಣದ ಕೊನೆಯ ಹಂತದ ಕೆಲಸಗಳಷ್ಟೇ ಬಾಕಿ ಇವೆ.

ರಾಷ್ಟ್ರಪ್ರಶಸ್ತಿ ಪುರಸ್ಕೃತ ನಟ ಸಂಚಾರಿ ವಿಜಯ್, 'ಅಭಿನಯ ಶಾರದೆ' ನಟಿ ಜಯಂತಿ ಹಿರಿಯ ನಟ ಶಿವರಾಂ ಅವರನ್ನೂ ಚಿತ್ರರಂಗ ಕಳೆದುಕೊಂಡಿತು.

ಸಿನಿಮಾ–ರಾಜಕೀಯ ಸೂರ್ಯ–ಚಂದ್ರ



ನಿಖಿಲ್ ಕುಮಾರ್

'ಜಾಗ್ವಾರ್' ಹತ್ತಿ 'ಸೀತಾರಾಮ ಕಲ್ಯಾಣ' ಮಾಡಿಕೊಂಡು 'ರೈಡರ್' ಆಗಿ ಸಿನಿಪಯಣದಲ್ಲಿ ರೈಡಿಂಗ್ ಮಾಡಲು ನಟ ನಿಖಿಲ್ ಕುಮಾರ್ ಸಜ್ಜಾಗಿದ್ದಾರೆ. ಇಂದು ರೈಡರ್ ಸಿನಿಮಾ ತೆರೆ ಕಾಣುತ್ತಿದ್ದು, ಸಿನಿಮಾ–ರಾಜಕೀಯ ಪಯಣದ ಬಗ್ಗೆ 'ಸಿನಿಮಾ ಪುರವಣಿ' ಜೊತೆಗೆ ಮಾತಿಗಿಳಿದ ನಿಖಿಲ್ ಹೀಗೆನ್ನುತ್ತಾರೆ...

ಅಭಿಲಾಷ್ ಪಿ.ಎಸ್.

- **ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ರೈಡರ್‌ನಲ್ಲಿ ನಿಖಿಲ್ ರೈಡಿಂಗ್ ಹೇಗಿದೆ?**

ನಾನು ಇಲ್ಲಿಯವರೆಗೂ ಪ್ರತಿಯೊಬ್ಬರಿಗೂ ಹಿಡಿಸುವ ಸಿನಿಮಾ ಮಾಡಿಕೊಂಡು ಬಂದಿದ್ದೇನೆ. ಪ್ರೇಕ್ಷಕರೂ ನನ್ನನ್ನು ಬೆಳೆಸಿದ್ದಾರೆ. ರೈಡರ್ ಪ್ರತಿ ವರ್ಗಕ್ಕೂ ಹಿಡಿಸುವ ಸಿನಿಮಾ. ಇಡೀ ತಂಡ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದೆ. ಊಟಿಯಲ್ಲಿ 'ಸೀತಾರಾಮ ಕಲ್ಯಾಣ' ಚಿತ್ರೀಕರಣದ ವೇಳೆಯೇ ರೈಡರ್ ಸಿನಿಮಾದ ಎಳೆ ಹುಟ್ಟಿಕೊಂಡಿತ್ತು. ಚಿತ್ರದ ನಿರ್ಮಾಪಕರಾದ ಚಂದ್ರು ಹಾಗೂ ಸುನಿಲ್ ಅವರು ವಿಜಯ್ ಕುಮಾರ್ ಕೊಂಡ ಎನ್ನುವ ನಿರ್ದೇಶಕರ ಹೆಸರು ಪ್ರಸ್ತಾಪ ಮಾಡಿದ್ದರು. ಅಲ್ಲಿಂದ ಶುರುವಾದ ಈ ಪಯಣ ಇಲ್ಲಿಯವರೆಗೆ ಬಂದು ನಿಂತಿದೆ. ಚಿತ್ರ ಬಿಡುಗಡೆಗಾಗಿ ಸುಮಾರು ಎರಡು ವರ್ಷ ಕಾದಿದ್ದೇವೆ. ಇದೀಗ ರೈಡಿಂಗ್ ಹೊರಡಲು ನಮ್ಮ ಸರದಿ ಬಂದಿದೆ. ಈ ಸಿನಿಮಾ ಬಗ್ಗೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೇನೆ. ಚಿತ್ರ ಅದ್ಭುತವಾಗಿ ಮೂಡಿಬಂದಿದೆ. ಈ ಬಗ್ಗೆ ನಾನು ಹೇಳಬಾರದು. ಪ್ರೇಕ್ಷಕರೇ ವೀಕ್ಷಿಸಿ ಅಭಿಪ್ರಾಯ ನೀಡಬೇಕು.

- **ಮೊನ್ನೆ ಮೊನ್ನೆ ಮಚ್ಚು, ಲಾಂಗು ಹಿಡಿಸ್ತಿಲ್ಲ ಎಂದು ಬೇಜಾರ್ ಮಾಡ್ಕೊಂಡಿದ್ರಲ್ಲ?**

(ನಗುತ್ತಾ..) ಬೇಜಾರಲ್ಲ. ತಮಾಷೆಗೆ ಹೇಳಿದ್ದೆ. ಒಬ್ಬ ಕಲಾವಿದನಿಗೆ ಅನೇಕ ಪಾತ್ರಗಳನ್ನು ಮಾಡಬೇಕು ಎನ್ನುವ ಕನಸು ಇರುತ್ತದೆ. ಇದೂ ನನ್ನ ಒಂದು ಕನಸು ಅಷ್ಟೆ. ನಾನು ಯಾವತ್ತೂ ಸಿನಿಮಾ ಮಾಡಿದರೂ ಒಂದೇ ವರ್ಗಕ್ಕೆ ಸೀಮಿತವಾದ ಸಿನಿಮಾ ಮಾಡುವುದಿಲ್ಲ. 'ಸೀತಾರಾಮ ಕಲ್ಯಾಣ'ದಂಥ ಕೌಟುಂಬಿಕ ಚಿತ್ರಗಳಲ್ಲಿ ಪ್ರೇಕ್ಷಕರು ನನ್ನನ್ನು ಮೆಚ್ಚಿಕೊಳ್ಳುತ್ತಾರೆ. ಇದರ ಜೊತೆಗೆ ಮಾಸ್ ಎಲಿಮೆಂಟ್ಸ್ ಇರುವ, ಇಡೀ ಕುಟುಂಬ ಕುಳಿತು ನೋಡುವ ಸಿನಿಮಾಗಳನ್ನು ಮಾಡುತ್ತೇನೆ. ಜನರು ಯಾವ ಪಾತ್ರಗಳಲ್ಲಿ ನನ್ನನ್ನು ನೋಡಲು ಬಯಸುತ್ತಾರೆ ಎನ್ನುವ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡು, ಸಿನಿಮಾ ಮಾಡಿಕೊಂಡು ಬಂದಿದ್ದೇನೆ.

- **ರೈಡರ್‌ನಲ್ಲಿ ಆ್ಯಕ್ಷನ್, ಡ್ಯಾನ್ಸಿಂಗ್‌ನಲ್ಲಿ ಪಿ.ಯು ಪಾಸ್ ಆಗಿ ಡಿಗ್ರಿ ಪಡೆದಿರೋ ಹಾಗಿದೆ?**

ಪ್ರತಿ ಚಿತ್ರವೂ ಹೊಸ ಅನುಭವ. ವಿಶೇಷವಾಗಿ ರೈಡರ್ ಚಿತ್ರದಲ್ಲಿರುವ ನನ್ನ ಪಾತ್ರವೂ ನನಗೆ ಹೊಸ ಅನುಭವ. ಇಲ್ಲಿಯವರೆಗೂ ಮಾಡಿರುವ ಸಿನಿಮಾಗಳ ಪಾತ್ರಕ್ಕೆ ಹೋಲಿಸಿದರೆ, ಇದು ಮನಸ್ಸಿಗೆ, ಹೃದಯಕ್ಕೆ ಬಹಳ ಹತ್ತಿರವಾಗಿರುವ ಪಾತ್ರ. ವಿಜಯ್ ಕುಮಾರ್ ಕೊಂಡ ಇಂಥ ಜಾನರ್ ಸಿನಿಮಾಗಳಲ್ಲಿ ಅದ್ಭುತ ಹಿಡಿತ ಸಾಧಿಸಿದ್ದಾರೆ. ಅರ್ಜುನ್ ಜನ್ಯ ಕನ್ನಡ ಚಿತ್ರರಂಗಕ್ಕೆ ಒಂದು ಕೊಡುಗೆ. ನಮ್ಮ ಚಿತ್ರಕ್ಕೆ ಅವರು 'ಡವ್ವಾ ಡವ್ವಾ' ಮತ್ತು 'ಮೆಲ್ಲನೆ' ಎಂಬ ಎರಡು ಉಡುಗೊರೆ ನೀಡಿದ್ದಾರೆ. 'ಡವ್ವಾ ಡವ್ವಾ' ಹಾಡು ಹಿಟ್ ಆಗಲು ಆ ಹುಕ್ ಲೈನ್ ಕಾರಣ.

- **ಪರ ಭಾಷೆಗಳ ಚಿತ್ರಗಳು ಕನ್ನಡದಲ್ಲಿ ಡಬ್ ಆದರೂ ಕರ್ನಾಟಕದಲ್ಲಿ ಪರ ಭಾಷೆಗಳಲ್ಲೇ ಸಿನಿಮಾ ಪ್ರದರ್ಶನ ಕಾಣುತ್ತಿರುವುದರ ಬಗ್ಗೆ ನಿಮ್ಮ ಅಭಿಪ್ರಾಯ?**

ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ದೊಡ್ಡ ಸಿನಿಮಾಗಳು ಬಂದಾಗ ಕನ್ನಡ ಸಿನಿಮಾಗಳಿಗೆ ಆದ್ಯತೆ ಕೊಡುವುದು ತಪ್ಪುತ್ತಿದೆ. ಹೀಗೆ ಆಗಬಾರದು. ಕನ್ನಡ ಭಾಷೆ ಎಂದು ಬಂದಾಗ ಕನ್ನಡಿಗರು ಪರವಾಗಿ ನಿಂತುಕೊಳ್ಳುತ್ತಾರೆ. ಈ ರೀತಿ ನಿಂತ ಸನ್ನಿವೇಶಗಳನ್ನು ನೋಡಿದ್ದೇವೆ. ಡಬ್ಬಿಂಗ್ ವಿಚಾರದಲ್ಲಿ ನಾನು ಹೆಚ್ಚು ಮಾತನಾಡುವುದು ಸೂಕ್ತವಲ್ಲ ಎನಿಸುತ್ತದೆ. ಈ ಬಗ್ಗೆ ಚರ್ಚಿಸಲು ಇನ್ನೂ ಹಿರಿಯ ಕಲಾವಿದರು ಇದ್ದಾರೆ.

ಕರ್ನಾಟಕ ಎಲ್ಲ ಭಾಷೆಯ ಚಿತ್ರಗಳಿಗೆ ದೊಡ್ಡ ಮಾರುಕಟ್ಟೆ. ಅಕ್ಕಪಕ್ಕದ ರಾಜ್ಯದಲ್ಲಿ ಸಿನಿಮಾ ಮಾಡುವವರಿಗೆ ಇದು ತಿಳಿದಿದೆ. ಅವರು ಇಂದು 250-300 ಕೋಟಿ ರೂಪಾಯಿ ಬಂಡವಾಳ ಹಾಕಿ ಸಿನಿಮಾ ಮಾಡುತ್ತಾರೆ. ಕನ್ನಡದಲ್ಲಿ ಅಷ್ಟು ಬಜೆಟ್ ಹಾಕಿ ಸಿನಿಮಾ ಮಾಡುವ ಸಾಧ್ಯತೆಗಳು ಬಹಳ ಕಡಿಮೆ. ಕೆಲವೇ ಹೀರೊಗಳಿಗೆ ಈ ಅವಕಾಶ ಸಿಗುತ್ತದೆ. ಹೀಗೆಂದ ಮಾತ್ರಕ್ಕೆ ₹ 500 ಕೋಟಿ ಬಜೆಟ್ ಸಿನಿಮಾ ಚೆನ್ನಾಗಿರುತ್ತದೆ, ₹ 50 ಲಕ್ಷದಲ್ಲಿ ಮಾಡಿದ ಸಿನಿಮಾ ಚೆನ್ನಾಗಿರುವುದಿಲ್ಲ ಎಂದಲ್ಲ. ಸಿನಿಮಾದ ವಿಷಯ ಚೆನ್ನಾಗಿದ್ದರೆ ಪ್ರೇಕ್ಷಕರು ಒಪ್ಪಿಕೊಳ್ಳುತ್ತಾರೆ. ಚಿತ್ರತಂಡದ ಪ್ರಯತ್ನವನ್ನೂ ಅವರು ಪ್ರೋತ್ಸಾಹಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಇಂಥ ಸಿನಿಮಾಗಳನ್ನು ಮಾಡುತ್ತಿದ್ದಾರೆ. ದುಡ್ಡು ಹಾಕಿದ ಮಾತ್ರಕ್ಕೆ ಸಿನಿಮಾ ನೋಡುವುದಿಲ್ಲ.

- **ಕುಮಾರಸ್ವಾಮಿ ಅವರಿಗೆ ಸಿನಿಮಾ ಹಿನ್ನೆಲೆಯೂ ಇದೆ. ರಾಜಕೀಯ ಬಿಟ್ಟು ಈ ಸಂದರ್ಭದಲ್ಲಿ ಅವರ ಜೊತೆ ಸಿನಿಮಾ ಚರ್ಚೆ ಮಾಡ್ತೀರಾ?**

ಅಪ್ಪ, ರೈಡರ್ ಸಿನಿಮಾ ನೋಡಿದರು. ಬಹಳ ಒಳ್ಳೆಯ ಪ್ರತಿಕ್ರಿಯೆ ನೀಡಿದ್ದಾರೆ. ಅವರಿಗೆ ಸಿನಿಮಾ ಇಷ್ಟವಾಯಿತು. ನಾನು ಅವರನ್ನು ಹೆಚ್ಚು ಸಿನಿಮಾ ಕಡೆಗೆ ಎಳೆಯಲು ಇಷ್ಟಪಡುವುದಿಲ್ಲ. ರಾಜಕಾರಣದಲ್ಲಿ ಅವರು ಬಹಳ ಸಕ್ರಿಯರಾಗಿದ್ದಾರೆ. ಇದನ್ನು ಹೊರತುಪಡಿಸಿ ಕೆಲವೊಮ್ಮೆ ಸಿನಿಮಾ ಬಗ್ಗೆಯೂ ಚರ್ಚೆ ಮಾಡುತ್ತಿರುತ್ತೇನೆ. ಸಿನಿಮಾ ವಿಚಾರದಲ್ಲೂ ಅವರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತಿರುತ್ತೇನೆ.

- **ತಂದೆಯವರ ಸಿನಿಮಾ ಅನುಭವವನ್ನು ಬಳಸಿಕೊಂಡು ನಿರ್ಮಾಣ ಸಂಸ್ಥೆ ತೆರೆಯುವ ಚಿಂತನೆ ಏನಾದರೂ ಇದೆಯೇ?**

ಇಲ್ಲಿಯವರೆಗೂ ಆರೇಳು ಸಿನಿಮಾಗಳನ್ನು ನಮ್ಮ ಸಂಸ್ಥೆ ನಿರ್ಮಾಣ ಮಾಡಿದೆ. ತಂದೆಯವರು ರಾಜಕೀಯದಲ್ಲಿ ಹೆಚ್ಚು ಸಕ್ರಿಯರಾದ ಬಳಿಕ ಹೆಚ್ಚು ಸಿನಿಮಾಗಳನ್ನು ನಿರ್ಮಾಣ ಮಾಡಲು ಸಾಧ್ಯವಾಗಲಿಲ್ಲ. ಹೊಸ ಸಂಸ್ಥೆಯೊಂದನ್ನು ಹುಟ್ಟು ಹಾಕಲು ನಾನು ಈಗಾಗಲೇ ತೀರ್ಮಾನಿಸಿದ್ದೇನೆ. ನನ್ನ ಹೊಸ ಸಿನಿಮಾ ಮುಂದಿನ ತಿಂಗಳು ಸೆಟ್ಟೇರಲಿದೆ. ಹೀಗಾಗಿ ಸಂಸ್ಥೆ ಆರಂಭಕ್ಕೆ ಕೊಂಚ ಸಮಯ ತೆಗೆದುಕೊಳ್ಳುತ್ತಿದ್ದೇನೆ. ಯಾವುದೇ ಕೆಲಸ ಮಾಡಿದರೂ ಅಚ್ಚುಕಟ್ಟಾಗಿ ಮಾಡಬೇಕು. ಪ್ರೊಡಕ್ಷನ್ ಎನ್ನುವುದು ಅಷ್ಟು ಸುಲಭವಾದ ವಿಚಾರವಲ್ಲ. ತುಂಬಾ ಗಮನಹರಿಸಬೇಕು. ಇದನ್ನು ನಿಭಾಯಿಸಲು ಸೂಕ್ತವಾದ ಜನರು ಬೇಕು. ಅಂಥವರನ್ನು ಆಯ್ಕೆ ಮಾಡಬೇಕು, ನಮ್ಮ ಪಾಲ್ಗೊಳ್ಳುವಿಕೆಯೂ ಅಷ್ಟೇ ಇರಬೇಕು. ವಿಷಯಾಧಾರಿತ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಾ, ಒಂದಷ್ಟು ಜನರಿಗೆ ಕೆಲಸ ಸಿಗುವ ಸಂಸ್ಥೆಯನ್ನು ಹುಟ್ಟುಹಾಕುವ ಕನಸಿನಲ್ಲಿ ನಾನಿದ್ದೇನೆ.

- **ತಮಿಳುನಾಡಿನಲ್ಲಿ ರಾಜಕೀಯ–ಸಿನಿಮಾ ಎರಡರಲ್ಲೂ ಹಿಟ್ ಆದವರ ಪಟ್ಟಿಯೇ ಇದೆ. ನಿಖಿಲ್ ಹೀಗಾಗುತ್ತಾರಾ?**

ಕರ್ನಾಟಕದ ಜನರು ಬಹಳ ಪ್ರಾಕ್ಟಿಕಲ್. ಅವರು ಈ ರೀತಿ ಇರುವುದೂ ಒಳ್ಳೆಯದು. ಸಿನಿಮಾ ಮತ್ತು ರಾಜಕೀಯ ಸೂರ್ಯ ಚಂದ್ರ ಇದ್ದ ರೀತಿ. ಎರಡನ್ನೂ ಒಟ್ಟಿಗೆ ಮಾಡುವುದು ಸೂಕ್ತವಲ್ಲ. ಈ ರೀತಿಯ ಆಲೋಚನೆಗಳೂ ನನ್ನ ತಲೆಯಲ್ಲಿಲ್ಲ. ಅಂಥ ಭ್ರಮೆಯಲ್ಲೂ ಬದುಕುತ್ತಿಲ್ಲ. ಸಿನಿಮಾಗೆ ಬಂದಾಗ ಸಿನಿಮಾಗೆ ಸೀಮಿತವಾಗಿರುತ್ತೇನೆ. ರಾಜಕೀಯದಲ್ಲೂ ಹಾಗೇ. ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಇದರಲ್ಲಿ ನಾನು ನಂಬಿಕೆ ಇಟ್ಟಿದ್ದೇನೆ. ಪಕ್ಷ ಎಂದು ಬಂದಾಗ ಒಬ್ಬ ಕಾರ್ಯಕರ್ತನಾಗಿ ದುಡಿಯುತ್ತೇನೆ. ❖

'ರಾಮಾಚಾರಿ 2.0' ಬೆನ್ನುಹತ್ತಿದ ತೇಜ್

'ರಿವೈಂಡ್' ಚಿತ್ರದ ಬಳಿಕ ರಾಮಾಚಾರಿಯ ಬೆನ್ನು ಹತ್ತಿದ್ದಾರೆ ನಟ ನಿರ್ದೇಶಕ ತೇಜ್. ಅಂದಹಾಗೆ 'ರಾಮಾಚಾರಿ 2.0' ಇದು ತೇಜ್ ನಿರ್ಮಾಣ, ನಿರ್ದೇಶನ ಹಾಗೂ ನಾಯಕನಾಗಿ ನಟನೆಯ ಎರಡನೇ ಚಿತ್ರ.



ತೇಜ್

ಅದೇ 'ನಾಗರಹಾವಿ'ನ ರಾಮಾಚಾರಿಯೇ ಇಲ್ಲಿ ಎರಡನೇ ಬಾರಿಗೆ ಅವತಾರ ಎತ್ತಿದ್ದಾನೆ. 'ನಾಗರಹಾವು' ಚಿತ್ರದಲ್ಲಿ ವಿಷ್ಣುವರ್ಧನ್ ರಾಮಾಚಾರಿ ಆಗಿ ಕಾಣಿಸಿಕೊಂಡಿದ್ದರು. ಈಗ ರಾಮಾಚಾರಿ, ಜಲೀಲ, ಮಾರ್ಗರೆಟ್ ಮತ್ತು ನಂದಿನಿ (ರವಿಚಂದ್ರನ್ ಅಭಿನಯದ ರಾಮಾಚಾರಿಯ ನಂದಿನಿ ಪಾತ್ರ) ಮತ್ತೆ ಒಟ್ಟಾಗಿದ್ದಾರೆ.


'ಇಲ್ಲಿ ರಾಮಾಚಾರಿ ತುಂಬಾ ಬುದ್ಧಿವಂತ, ಆಧುನಿಕವಾಗಿ ಯೋಚಿಸಬಲ್ಲವನು. ಪ್ರಸ್ತುತ ಕಾಲದ ಕೃತಕ ಬುದ್ಧಿಮತ್ತೆ, ಹ್ಯಾಕಿಂಗ್, ಕ್ರಿಪ್ಟೋಕರೆನ್ಸಿ ಸುತ್ತ ಕಥೆ ಹೆಣೆಯಲಾಗಿದೆ' ಎಂದರು ತೇಜಸ್.

ಮಾರ್ಗರೆಟ್ ಆಗಿ 'ನನ್ನರಸಿ ರಾಧೆ' ಖ್ಯಾತಿಯ ಕೌಸ್ತುಭಮಣಿ ಕಾಣಿಸಿಕೊಂಡಿದ್ದಾರೆ. ಜಲೀಲನಾಗಿ ವಿಜಯ್ ಚೆಂಡೂರು ಇದ್ದಾರೆ. ಉಳಿದಂತೆ ಸ್ಪರ್ಶರೇಖಾ, ಅಶ್ವಿನ್ ಹಾಸನ್, ದಿವ್ಯಾ ಸುಂದರರಾಜ್, ಚಿಲ್ಲರ್ ಮಂಜು ತಾರಾಗಣದಲ್ಲಿದ್ದಾರೆ. ಈಗಾಗಲೇ ಚಿತ್ರೀಕರಣ ಆರಂಭವಾಗಿದೆ. ಮಂಡ್ಯ, ಮೈಸೂರು, ಚಿಕ್ಕಬಳ್ಳಾಪುರಗಳಲ್ಲಿ ಚಿತ್ರೀಕರಣ ನಡೆಯಲಿದೆ. 40 ದಿನಗಳ ಕಾಲ ಚಿತ್ರೀಕರಣದ ಯೋಜನೆ ಇದೆ. ಮುಂದಿನ ಜುಲೈ ವೇಳೆಗೆ ರಾಮಾಚಾರಿ 2.0 ತೆರೆ ಮೇಲೆ ಕಾಣಿಸಲಿದ್ದಾನೆ ಎಂದರು ತೇಜ್.

ಅಂದಹಾಗೆ ತೇಜ್ ಅವರು ಸೈಕೋ ವಿಜ್ಞಾನಿಯ ಕಥೆ ಆಧರಿಸಿದ ಚಿತ್ರ 'ಗಾಡ್'ನ ಸಿದ್ಧತೆಯಲ್ಲಿದ್ದಾರೆ. 'ಶೀಘ್ರ ದುಬೈನಲ್ಲಿ ಮುಹೂರ್ತ ನಡೆಯಲಿದೆ' ಎಂದರು ಅವರು. ❖

ಕಬ್ಜ ಕೋಟೆಯಲ್ಲಿ 'ಭಾರ್ಗವ್ ಭಕ್ಷಿ'

ನಟ ಉಪೇಂದ್ರ ಅಭಿನಯಿಸುತ್ತಿರುವ ಪ್ಯಾನ್ ಇಂಡಿಯಾ ಸಿನಿಮಾ 'ಕಬ್ಜ' ಕೋಟೆಗೆ ಇದೀಗ ನಟ ಕಿಚ್ಚ ಸುದೀಪ್ ಪ್ರವೇಶಿಸಿದ್ದಾರೆ. ಚಿತ್ರದಲ್ಲಿ 'ಭಾರ್ಗವ್ ಭಕ್ಷಿ' ಎಂಬ ಪಾತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿದ್ದಾರೆ.



ಚಿತ್ರದ ಐದನೇ ಹಂತದ ಚಿತ್ರೀಕರಣವು ಬೆಂಗಳೂರಿನಲ್ಲಿ ನಡೆಯುತ್ತಿದ್ದು, ಚಿತ್ರದ ನಿರ್ದೇಶಕ ಆರ್.ಚಂದ್ರು, ಸುದೀಪ್ ಅವರನ್ನು ಸೆಟ್‌ಗೆ ಸ್ವಾಗತಿಸಿದ್ದಾರೆ. ಚಿತ್ರತಂಡಕ್ಕೆ ಇತ್ತೀಚೆಗಷ್ಟೇ ಬಾಲಿವುಡ್‌ನ ಖ್ಯಾತ ನಟ ನವಾಬ್ ಶಾ ಹಾಗೂ ಕೆ.ಜಿ.ಎಫ್ ಸಿನಿಮಾದಲ್ಲಿ ರಾಜೇಂದ್ರ ದೇಸಾಯಿ ಪಾತ್ರ ನಿರ್ವಹಿಸಿದ್ದ ಲಕ್ಷ್ಮೀಶ ಲಕ್ಷ್ಮಣ್, ತಮಿಳಿನ 'ಐ' ಚಿತ್ರದ ಖ್ಯಾತಿಯ ಕಾಮರಾಜನ್, ಜಗಪತಿ ಬಾಬು, ರಾಹುಲ್ ದೇವ್ ಪ್ರವೇಶಿಸಿದ್ದರು. ❖

ಉಡಾಳ್ ಬಾಬು 'ಅಲಂಕಾರ್ ವಿದ್ಯಾರ್ಥಿ'

ಕಿರುತೆರೆಯ ಮೂಲಕ ಚಂದನವನಕ್ಕೆ ಪ್ರವೇಶಿಸಿದವರು ನಟ ಪ್ರಮೋದ್. 'ಗೀತಾ ಬ್ಯಾಂಗಲ್ ಸ್ಟೋರ್' ಸಿನಿಮಾ ಮುಖಾಂತರ ನಾಯಕ ನಟನಾಗಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ ಅವರು, ನಂತರ 'ಪ್ರೀಮಿಯರ್ ಪದ್ಮಿನಿ', 'ಮತ್ತೆ ಉದ್ಭವ', 'ರತ್ನನ್ ಪ್ರಪಂಚ' ಸೇರಿದಂತೆ ಸಾಕಷ್ಟು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

'ರತ್ನನ್ ಪ್ರಪಂಚ'ದಲ್ಲಿ 'ಉಡಾಳ್ ಬಾಬು ರಾವ್' ಆಗಿ ಮಿಂಚಿದ್ದ ಪ್ರಮೋದ್ ಇದೀಗ 'ಅಲಂಕಾರ್ ವಿದ್ಯಾರ್ಥಿ' ಎನ್ನುವ ವಿಭಿನ್ನ ಶೀರ್ಷಿಕೆಯ ಸಿನಿಮಾದ ಹೀರೊ. ಈ ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು. ನಟ 'ಡಾಲಿ' ಧನಂಜಯ್ ಕ್ಲ್ಯಾಪ್ ಮಾಡುವ ಮುಖಾಂತರ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

'ಅಲಂಕಾರ್ ವಿದ್ಯಾರ್ಥಿ- ಇದು ಎಪ್ಪತ್ತು ಎಂಭತ್ತರ ದಶಕದಲ್ಲಿ ಕೊನೆಯ ಬೆಂಚ್‌ನ ವಿದ್ಯಾರ್ಥಿಗಳನ್ನು ಕರೆಯುತ್ತಿದ್ದ ರೀತಿ. ನಮ್ಮ ಸಿನಿಮಾದಲ್ಲಿ ಹೀರೊ ಕೂಡಾ ಹಾಗೇ. ಓದು ತಲೆಗೆ ಹತ್ತದಿದ್ದರೂ ಅಲಂಕಾರಕ್ಕಾಗಿ ಕಾಲೇಜಿಗೆ ಬರುತ್ತಿರುತ್ತಾನೆ. ಆದರೂ ಕಾಲೇಜಿನಲ್ಲಿ ಪಾಠ ಮಾಡುವ ಗುರುಗಳಿಂದ ಹಿಡಿದು ಎಲ್ಲರಿಗೂ ಇವನೆಂದರೆ ಮುದ್ದು. ಉತ್ತೀರ್ಣನಾಗುವ ವಿದ್ಯಾರ್ಥಿಗೆ ಬೇಸಿಗೆ ಕಾಲದಲ್ಲಿ ಮಾತ್ರ ರಜೆ ಸಿಗುತ್ತದೆ. ಅದೇ ಫೇಲಾಗಿ ಎರಡು ವರ್ಷ ಕಾಲ ಕಳೆದವನು ಬೇಸಿಗೆ, ಮಳೆ, ಚಳಿ ಮೂರೂ ಋತುವಿನಲ್ಲೂ ಮನೆಯಲ್ಲೇ ಇರುತ್ತಾನೆ. ಇಂಥಾ ಹುಡುಗ ಮ್ಯಾನೇಜ್‌ಮೆಂಟ್ ಸೀಟು ತೆಗೆದುಕೊಂಡು ಕಾಲೇಜಿಗೆ ಬರುತ್ತಾನೆ. ಈತನ ಬದುಕು ಹೇಗಿರುತ್ತದೆ ಅನ್ನುವುದೇ ಚಿತ್ರದ ತಿರುಳು' ಎನ್ನುತ್ತಾರೆ ನಿರ್ದೇಶಕ ಕೇಶವ್ ಎಸ್ ಇಂಡಲವಾಡಿ. ಇದು ಅವರ ಚೊಚ್ಚಲ ನಿರ್ದೇಶನದ ಚಿತ್ರ.

'ನಮ್ಮ ನಿರ್ದೇಶಕರು ಬಹಳ ಹಿಂದೆಯೇ ಕತೆ ಹೇಳಿದ್ದರು. 'ರತ್ನನ್ ಪ್ರಪಂಚ' ಸಿನಿಮಾದ ನಂತರ ನನಗೆ ಬಹುತೇಕ ಮಾಸ್ ಮತ್ತು ಆ್ಯಕ್ಷನ್ ವಿಷಯಗಳೇ ಇರುವ ಸಿನಿಮಾಗಳು ಬರುತ್ತಿವೆ. ಈ ನಡುವೆ ಇಂಥದ್ದೊಂದು ಜಾನರ್‌ನ ಸಿನಿಮಾ ಇರಲಿ ಅಂತ ತುಂಬಾ ಇಷ್ಟ ಪಟ್ಟು ಒಪ್ಪಿದ್ದೇನಿ' ಎಂದರು ಪ್ರಮೋದ್.



ಅರ್ಚನಾ ಕೊಟ್ಟಿಗೆ, ಪ್ರಮೋದ್

ಪ್ರಮೋದ್‌ಗೆ ಜೋಡಿಯಾಗಿ ಅರ್ಚನಾ ಕೊಟ್ಟಿಗೆ ಬಣ್ಣಹಚ್ಚಲಿದ್ದಾರೆ. ಬೆಂಗಳೂರಿನಲ್ಲಿ 45 ದಿನಗಳ ಚಿತ್ರೀಕರಣ ನಡೆಯಲಿದೆ. ❖

ಆದಿತ್ಯ ಠಾಕ್ರೆಗೆ ಬೆದರಿಕೆ ಸಂದೇಶ: ಬೆಂಗಳೂರಿನ ವ್ಯಕ್ತಿ ಬಂಧನ

ಬೆಂಗಳೂರು: ಮಹಾರಾಷ್ಟ್ರದ ಸಚಿವ ಆದಿತ್ಯ ಠಾಕ್ರೆಗೆ ಬೆದರಿಕೆ ಸಂದೇಶ ಕಳುಹಿಸಿದ್ದ ಆರೋಪದಡಿ ಜೈಸಿಂಗ್ ರಜಪೂತ್ ಎಂಬಾತನನ್ನು ಮುಂಬೈ ಅಪರಾಧ ವಿಭಾಗದ ಪೊಲೀಸರು ನಗರದಲ್ಲಿ ಬಂಧಿಸಿ ವಿಚಾರಣೆಗಾಗಿ ಮುಂಬೈಗೆ ಕರೆದೊಯ್ದಿದ್ದಾರೆ.

'ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಮಗ ಆದಿತ್ಯ ಠಾಕ್ರೆ ಅವರಿಗೆ ಆರೋಪಿಯು ಇದೇ 8ರಂದು ದೂರವಾಣಿ ಕರೆ ಮಾಡಿದ್ದ. ಅದನ್ನು ಅವರು ಸ್ವೀಕರಿಸಿರಲಿಲ್ಲ. ಇದರಿಂದ ಕೆರಳಿದ್ದ ಆತ ಅವರ ಮೊಬೈಲ್‌ಗೆ ಬೆದರಿಕೆ ಸಂದೇಶಗಳನ್ನು ರವಾನಿಸಿದ್ದ. ಮೊಬೈಲ್ ನೆಟ್‌ವರ್ಕ್ ಪರಿಶೀಲಿಸಿದಾಗ ಆರೋಪಿಯು ಬೆಂಗಳೂರಿನಲ್ಲಿ ನೆಲೆಸಿರುವುದು ಗೊತ್ತಾಗಿತ್ತು. ಹೀಗಾಗಿ ಮುಂಬೈ ಪೊಲೀಸರ ತಂಡವೊಂದು ನಗರಕ್ಕೆ ಬಂದು ಆತನನ್ನು ಬಂಧಿಸಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯು ದಿವಂಗತ ನಟ ಸುಶಾಂತ್ ಸಿಂಗ್ ರಜಪೂತ್ ಅಭಿಮಾನಿ ಎಂಬುದು ವಿಚಾರಣೆಯಿಂದ ತಿಳಿದು ಬಂದಿದೆ' ಎಂದೂ ಮೂಲಗಳು ಹೇಳಿವೆ.

ಲುಧಿಯಾನ ಜಿಲ್ಲಾ ಕೋರ್ಟ್‌ನಲ್ಲಿ ಸ್ಫೋಟ: ಒಬ್ಬರ ಸಾವು

ಲುಧಿಯಾನ (ಪಿಟಿಐ): ಲುಧಿಯಾನ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಗುರುವಾರ ಸ್ಫೋಟ ಸಂಭವಿಸಿದ್ದು, ಒಬ್ಬರು ಮೃತಪಟ್ಟು, ಆರು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡನೇ ಮಹಡಿಯ ಶೌಚಗೃಹದಲ್ಲಿ ಸ್ಫೋಟ ಸಂಭವಿಸಿದೆ. ಆಗ ಕಲಾಪ ನಡೆಯುತ್ತಿತ್ತು. ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕೆಲ ರಾಷ್ಟ್ರ ವಿರೋಧಿ ಶಕ್ತಿಗಳು ಈ ರೀತಿಯ ಕೃತ್ಯಗಳಿಗೆ ಕೈ ಹಾಕಿವೆ ಎಂದು ದೂರಿದ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು, ಪೊಲೀಸರು ಮತ್ತು ಜನರು ಎಚ್ಚರದಿಂದ ಇರಬೇಕು ಎಂದು ಹೇಳಿದ್ದಾರೆ. ಘಟನೆಯ ಬಗ್ಗೆ ಕೇಂದ್ರವು ರಾಜ್ಯದಿಂದ ವರದಿ ಕೇಳಿದೆ.

ಎರಡನೇ ಬಾರಿಯೂ 'ಪ್ರಳಯ' ಕ್ಷಿಪಣಿಯ ಯಶಸ್ವಿ ಪ್ರಯೋಗ

ಬಾಲಾಸೋರ್ (ಒಡಿಶಾ) (ಪಿಟಿಐ): ಸ್ವದೇಶಿ ನಿರ್ಮಿತ, ಗರಿಷ್ಠ 500 ಕಿ.ಮೀ ಅಂತರದ ಗುರಿಯನ್ನು ತಲುಪಬಲ್ಲ, ನೆಲದಿಂದ ಉಡಾವಣೆಗೊಂಡು ಶತ್ರು ನೆಲೆ ಧ್ವಂಸ ಮಾಡಬಲ್ಲ 'ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಸತತ ಎರಡನೇ ದಿನವಾದ ಗುರುವಾರವೂ ಯಶಸ್ವಿಯಾಗಿ ನಡೆಸಲಾಯಿತು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಇದನ್ನು ಅಭಿವೃದ್ಧಿಪಡಿಸಿದ್ದು, ದೃಢ ಮತ್ತು ಹೆಚ್ಚು ಸಾಮರ್ಥ್ಯದ ಮೋಟರ್, ಹೊಸ ತಂತ್ರಜ್ಞಾನ ಅಳವಡಿಸಲಾಗಿದೆ. ಅತ್ಯಾಧುನಿಕ ದಿಕ್ಸೂಚಿ ಮತ್ತು ಇತರ ಸೌಲಭ್ಯಗಳನ್ನು ಈ ಕ್ಷಿಪಣೆ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಚಿಕ್ಕಬಳ್ಳಾಪುರ: ಮತ್ತೆ ಭೂಕಂಪನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾದೇನಹಳ್ಳಿ, ಬೀರಗಾನಹಳ್ಳಿ ಮತ್ತು ಶೆಟ್ಟಿಗೆರೆಯಲ್ಲಿ ಗುರುವಾರ ಮತ್ತೆ ಭೂಕಂಪನ ಸಂಭವಿಸಿದೆ.

ಮಧ್ಯಾಹ್ನ 2.16 ಗಂಟೆಗೆ ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.6ರಷ್ಟು ತೀವ್ರತೆ ದಾಖಲಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎ-ಸ್‌ಎನ್‌ಡಿಎಂಸಿ) ತಿಳಿಸಿದೆ.

ಭೂಮಿ ನಡುಗಿದ ಅನುಭವ ಈ ಗ್ರಾಮಗಳ ಜನರಿಗೆ ಆಗಿದೆ. ತಕ್ಷಣ ಅವರು ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಅಡ್ಡಗಲ್ ಮತ್ತು ಮಂಡಿಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಬುಧವಾರ ಬೆಳಿಗ್ಗೆಯಷ್ಟೇ ಭೂಕಂಪನ ಸಂಭವಿಸಿತ್ತು. ಈಗ ಮತ್ತೆ ಆ ಹಳ್ಳಿಗಳ ಸಮೀಪದಲ್ಲಿಯೇ ಕಂಪನ ಸಂಭವಿಸಿದೆ.

ಎಡ–ಬಲ ಸಮುದಾಯಗಳ ಸಮನ್ವಯ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯ ಒಳಗಿರುವ ಉಪಜಾತಿಗಳ ನಡುವೆ ಸಮನ್ವಯ ಸಾಧಿಸಲು ಕರ್ನಾಟಕ ರಾಜ್ಯ ಎಡ-ಬಲ ಸಮುದಾಯಗಳ ಸಮನ್ವಯ ಸಮಿತಿಯನ್ನು ನೂತನವಾಗಿ ರಚಿಸಲಾಗಿದೆ' ಎಂದು ಸಮಿತಿಯ ಅಧ್ಯಕ್ಷ ರಾಮಯ್ಯ ಪಿ.ಎಸ್ ಹೇಳಿದರು.

ಸಮನ್ವಯ ಸಮಿತಿಯು ನಗರದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿ-ಯಲ್ಲಿ ಗುರುವಾರ ಮಾತನಾಡಿದ ಅವರು, 'ಪರಿಶಿಷ್ಟ ಜಾತಿಯಲ್ಲಿ ಎಡ–ಬಲಗಳೆಂದು ಗುರುತಿಸಿಕೊಂಡ ಸಮು-ದಾಯಗಳನ್ನು ಒಗ್ಗೂಡಿಸಿ ಜಾಗೃತಿ ಮೂಡಿಸಲು ಸಮಿತಿ ಶ್ರಮಿಸಲಿದೆ. ಪರಿಶಿಷ್ಟ ಜಾತಿಯವರ ಸ್ಮಶಾನಕ್ಕೆ ಭೂಮಿ ದೊರಕಿಸುವುದು, ಸಂವಿಧಾನ ಆಶಯಗಳ ಈಡೇರಿಕೆ, ಬುದ್ಧ, ಬಸವಣ್ಣ, ಡಾ.ಅಂಬೇಡ್ಕರ್ ವಿಚಾರ ಧಾರೆಗಳ ಪ್ರಚಾರ ಮತ್ತು ಈ ಸಾಧಕರ ಪುತ್ಥಳಿ ನಿರ್ಮಾಣ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆ ಮಾಡುವುದೂ ಸಮಿತಿಯ ಉದ್ದೇಶ' ಎಂದರು.

'ತಳ ಸಮುದಾಯಗಳ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸುವುದು, ಚುನಾವಣೆ ಮತ್ತು ಮತದಾನದ ಬಗ್ಗೆ ಅರಿವು ಮೂಡಿಸುವುದು, ರಾಜಕೀಯ ಕ್ಷೇತ್ರದಲ್ಲಿ ಪ್ರಮುಖ ಹಾಗೂ ಉನ್ನತ ಹುದ್ದೆ ದೊರಕಿಸಿಕೊಡಲು ಹೋರಾಟ ನಡೆಸುವುದು ಮತ್ತು ತಾಲ್ಲೂಕು–ಜಿಲ್ಲಾ ಮಟ್ಟದಲ್ಲಿ ಹಕ್ಕುಗಳು–ಕಾನೂನುಗಳ ಬಗ್ಗೆ ಜಾಗೃತಿ ಮೂಡಿಸುವುದು, ಪ್ರತಿ ಗ್ರಾಮಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಉದ್ದೇಶಗಳನ್ನೂ ಸಮಿತಿ ಹೊಂದಿದೆ' ಎಂದು ಅವರು ಹೇಳಿದರು.

'ರಾಜಕೀಯ ಮುಖಂಡರು, ಸರ್ಕಾರಿ ಅಧಿಕಾರಿಗಳು, ಉದ್ಯೋಗಿಗಳು, ಸಮಾಜವಾದಿಗಳು ಮತ್ತು ಚಿಂತಕರನ್ನು ಸಮಿತಿಯಲ್ಲಿ ಇರಲಿದ್ದಾರೆ' ಎಂದೂ ಅವರು ತಿಳಿಸಿದರು.

ಅತಿಥಿ ಉಪನ್ಯಾಸಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: ಪಟ್ಟಣದ ಬಾಳೇಬೈಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಣಕ ವಿಜ್ಞಾನ ವಿಭಾಗದ ಅತಿಥಿ ಉಪನ್ಯಾಸಕ ಶ್ರೀಹರ್ಷ ಶಾನುಭೋಗ್ (40) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಶ್ರೀಹರ್ಷ ಶಾನುಭೋಗ್

ಹೊಸನಗರ ತಾಲ್ಲೂಕು ಯಡೂರು ಸಮೀಪದ ಹೆಬ್ಬಳಬೈಲು ಗ್ರಾಮದವರು. ಉಡುಪಿ ಜಿಲ್ಲೆಯ ಕುಂಜಿಬೆಟ್ಟುವಿನಲ್ಲಿ ವಾಸವಾಗಿದ್ದ ಅವರ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರಿಗೆ ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಅತಿಥಿ ಉಪನ್ಯಾಸಕರಿಗೆ ನೀಡುವ ₹ 11 ಸಾವಿರ ಸಂಬಳದಲ್ಲಿ ಜೀವನ ನಿರ್ವಹಣೆ ಸಾಧ್ಯವಾಗದೆ ತೀವ್ರ ಖಿನ್ನತೆಗೀಡಾಗಿದ್ದರು ಎಂದು ಹೇಳಲಾಗಿದೆ.

			500 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.30	500 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.80
			ಬೇಡಿಕೆ ಆಧಾರಿತ ದರ(ಐಚ್ಛಿಕ)		**ಬೇಡಿಕೆ ಆಧಾರಿತ ದರ(ಐಚ್ಛಿಕ)**	
			ನಿಗದಿತ ಶುಲ್ಕ: (ಬಿಲ್ಲಿಂಗ್ ಡಿಮ್ಯಾಂಡ್ ಮೇಲೆ)		**ನಿಗದಿತ ಶುಲ್ಕ:** (ಬಿಲ್ಲಿಂಗ್ ಡಿಮ್ಯಾಂಡ್ ಮೇಲೆ)	
			5 ಅಶ್ವ ಶಕ್ತಿಗಿಂತ ಮೇಲ್ಪಟ್ಟು, ಆದರೆ 40 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	105	5 ಅಶ್ವ ಶಕ್ತಿಗಿಂತ ಮೇಲ್ಪಟ್ಟು, ಆದರೆ 40 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	165
			40 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 67 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	135	40 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 67 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	185
			67 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 100 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	220	67 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 100 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	250
			100 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು,	230	100 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು,	280
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ: ಮೇಲೆ ತಿಳಿಸಿರುವಂತೆ		ವಿದ್ಯುತ್ ಬಳಕೆ ಶುಲ್ಕ: ಮೇಲೆ ತಿಳಿಸಿರುವಂತೆ	
		ಎಲ್.ಟಿ–5(ಬಿ): ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಡದ ಇತರ ಪ್ರದೇಶಗಳಿಗೆ ಅನ್ವಯಿಸುತ್ತದೆ	**ನಿಗದಿತ ಶುಲ್ಕ:** 5 ಅಶ್ವ ಶಕ್ತಿಯನ್ನು ಒಳಗೊಂಡು,5 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	65	**ನಿಗದಿತ ಶುಲ್ಕ:** 5 ಅಶ್ವ ಶಕ್ತಿಯನ್ನು ಒಳಗೊಂಡು, 5ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	145
			5 ಅಶ್ವ ಶಕ್ತಿಗಿಂತ ಮೇಲ್ಪಟ್ಟು, ಆದರೆ 40 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	80	5 ಅಶ್ವ ಶಕ್ತಿಗಿಂತ ಮೇಲ್ಪಟ್ಟು, ಆದರೆ 40 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	160
			40 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 67 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	100	40 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 67 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	180
			67 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 100 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	155	67 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 100 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	235
			100 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು,	185	100 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು,	265
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ		ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಬಳಸಿದ ಮೊದಲ 500 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	5.70	ಬಳಸಿದ ಮೊದಲ 500 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	6.20
			501 ಯೂನಿಟ್ಟುಗಳಿಂದ 1000ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	6.65	501 ಯೂನಿಟ್ಟುಗಳಿಂದ 1000 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	7.15
			1000 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	6.95	1000 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.45
			ಬೇಡಿಕೆ ಆಧಾರಿತ ದರ(ಐಚ್ಛಿಕ)		**ಬೇಡಿಕೆ ಆಧಾರಿತ ದರ(ಐಚ್ಛಿಕ)**	
			ನಿಗದಿತ ಶುಲ್ಕ: (ಬಿಲ್ಲಿಂಗ್ ಡಿಮ್ಯಾಂಡ್ ಮೇಲೆ)		**ನಿಗದಿತ ಶುಲ್ಕ:** (ಬಿಲ್ಲಿಂಗ್ ಡಿಮ್ಯಾಂಡ್ ಮೇಲೆ)	
			5 ಅಶ್ವ ಶಕ್ತಿಗಿಂತ ಮೇಲ್ಪಟ್ಟು, ಆದರೆ 40 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	95	5 ಅಶ್ವ ಶಕ್ತಿಗಿಂತ ಮೇಲ್ಪಟ್ಟು, ಆದರೆ 40 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	160
			40 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 67 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	125	40 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 67 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	180
			67 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 100 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	210	67 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು, ಆದರೆ 100 ಅಶ್ವ ಶಕ್ತಿಗಿಂತ ಕಡಿಮೆ ಹೊರೆ ಇರುವ ಸ್ಥಾಪನಗಳಿಗೆ	235
			100 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು,	220	100 ಅಶ್ವ ಶಕ್ತಿ ಮತ್ತು ಮೇಲ್ಪಟ್ಟು,	265
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ: ಮೇಲೆ ತಿಳಿಸಿರುವಂತೆ		ವಿದ್ಯುತ್ ಬಳಕೆ ಶುಲ್ಕ: ಮೇಲೆ ತಿಳಿಸಿರುವಂತೆ	
			ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)– ಎಲ್.ಟಿ.5(ಎ) (ಬಿ)ಗೆ ಅನ್ವಯಿಸುತ್ತದೆ		**ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)– ಎಲ್.ಟಿ.5(ಎ) (ಬಿ)ಗೆ ಅನ್ವಯಿಸುತ್ತದೆ**	
			ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)		ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)	
			ಸಮಯಾಧಾರಿತ ಅವಧಿ	**ಯೂನಿಟ್ ಒಂದಕ್ಕೆ**	**ಸಮಯಾಧಾರಿತ ಅವಧಿ**	**ಯೂನಿಟ್ ಒಂದಕ್ಕೆ**
			06.00 ರಿಂದ 10.00 ರವರೆಗೆ	0.00	06.00 ರಿಂದ 10.00 ರವರೆಗೆ	0.00
			10.00 ರಿಂದ 18.00 ರವರೆಗೆ	0.00	10.00 ರಿಂದ 18.00 ರವರೆಗೆ	0.00
			18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ	18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ
			22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ	22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ
6	**ಎಲ್.ಟಿ–6**	**ಎಲ್.ಟಿ–6 (ಎ):** ನೀರು ಸರಬರಾಜು:	ನಿಗದಿತ ಶುಲ್ಕ: 67 ಎಚ್.ಪಿ.ವರೆಗೆ ಪ್ರತಿ ಎಚ್.ಪಿ.ಗೆ ಮಾಸಿಕ	95	ನಿಗದಿತ ಶುಲ್ಕ: 67 ಎಚ್.ಪಿ.ವರೆಗೆ ಪ್ರತಿ ಎಚ್.ಪಿ.ಗೆ ಮಾಸಿಕ	195
		ನಿವಾಸಿ ಬಡಾವಣೆಗಳು ನೀರು ಸರಬರಾಜು ಸ್ಥಾಪನಗಳು	67 ಎಚ್.ಪಿ.ಗಿಂತ ಅಧಿಕ ಪ್ರತಿ ಕಿಲೋವ್ಯಾಟ್‌ಗೆ ಮಾಸಿಕ	195	67 ಎಚ್.ಪಿ.ಗಿಂತ ಅಧಿಕ ಪ್ರತಿ ಕಿಲೋವ್ಯಾಟ್‌ಗೆ ಮಾಸಿಕ	295
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	4.95	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.75
		ಎಲ್.ಟಿ–6 (ಬಿ): ಬೀದಿ ದೀಪ: ಸಾರ್ವಜನಿಕ ದೀಪ, ಸಂಚಾರ ನಿಯಂತ್ರಣ ದೀಪ, ಸಬ್–ವೇಗಳಿಗೆ ಅನ್ವಯಿಸುತ್ತದೆ	**ನಿಗದಿತ ಶುಲ್ಕ:** ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	110	**ನಿಗದಿತ ಶುಲ್ಕ:** ಮಂಜೂರಾದ ವಿದ್ಯುತ್ ಪ್ರಮಾಣದ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	210
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.65	**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	7.45
		ಎಲ್.ಇ.ಡಿ ದೀಪ	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.60	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.60
		ಎಲ್.ಟಿ–6(ಸಿ): ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಅನ್ವಯಿಸುತ್ತದೆ	ನಿಗದಿತ ಶುಲ್ಕ: 50 ಕಿ.ವಾಟ್ ವರೆಗೆ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ–ಎಲ್.ಟಿ.	70	ನಿಗದಿತ ಶುಲ್ಕ: 50 ಕಿ.ವಾಟ್ ವರೆಗೆ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ–ಎಲ್.ಟಿ.	70
			ನಿಗದಿತ ಶುಲ್ಕ: 50 ಕಿ.ವಾಟ್‌ಗಿಂತ ಮೇಲ್ಪಟ್ಟು ಪ್ರತಿ ಹೆಚ್ಚುವರಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ–ಎಲ್.ಟಿ.	170	ನಿಗದಿತ ಶುಲ್ಕ: 50 ಕಿ.ವಾಟ್‌ಗಿಂತ ಮೇಲ್ಪಟ್ಟು ಪ್ರತಿ ಹೆಚ್ಚುವರಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಎಲ್.ಟಿ.	170
			ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಹೆಚ್.ಟಿ.	200	ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಹೆಚ್.ಟಿ.	200
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ–ಹೆಚ್.ಟಿ ಮತ್ತು ಎಲ್.ಟಿ.	5.00	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ–ಹೆಚ್.ಟಿ ಮತ್ತು ಎಲ್.ಟಿ.	5.00
			ಸಮಯಾಧಾರಿತ ವಿದ್ಯುತ್ ದರ		**ಸಮಯಾಧಾರಿತ ವಿದ್ಯುತ್ ದರ**	
			ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)		ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)	
			ಸಮಯಾಧಾರಿತ ಅವಧಿ	**ಯೂನಿಟ್ ಒಂದಕ್ಕೆ**	**ಸಮಯಾಧಾರಿತ ಅವಧಿ**	**ಯೂನಿಟ್ ಒಂದಕ್ಕೆ**
			06.00 ರಿಂದ 10.00 ರವರೆಗೆ	0.00	06.00 ರಿಂದ 10.00 ರವರೆಗೆ	0.00
			10.00 ರಿಂದ 18.00 ರವರೆಗೆ	0.00	10.00 ರಿಂದ 18.00 ರವರೆಗೆ	0.00
			18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ	18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ
			22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ	22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ
7	**ಎಲ್.ಟಿ–7** ಜಾಹೀರಾತು ಫಲಕಗಳ ಖಾಯಂ ವಿದ್ಯುತ್ ಸರಬರಾಜು ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು	**ಎಲ್.ಟಿ–7 (ಎ)–** ತಾತ್ಕಾಲಿಕ ವಿದ್ಯುತ್ ಸರಬರಾಜು	ಮಂಜೂರಾದ ಹೊರೆಯು 67 ಹೆಚ್.ಪಿ.ಗಿಂತ ಕಡಿಮೆ ಇದ್ದರೆ, ಮಂಜೂರಾದ ಹೊರೆಯ ಪ್ರತಿ ಕಿ.ವ್ಯಾ.ಗೆ ಪ್ರತಿ ವಾರಕ್ಕೆ ಕನಿಷ್ಠ ರೂ. 250.00 ಮಿತಿಯೊಂದಿಗೆ ವಿದ್ಯುತ್ ಬಳಕೆ ಶುಲ್ಕ, ಪ್ರತಿ ಯೂನಿಟ್‌ಗೆ	11.10	ಮಂಜೂರಾದ ಹೊರೆಯು 67 ಹೆಚ್.ಪಿ.ಗಿಂತ ಕಡಿಮೆ ಇದ್ದರೆ, ಮಂಜೂರಾದ ಹೊರೆಯ ಪ್ರತಿ ಕಿ.ವ್ಯಾ.ಗೆ ಪ್ರತಿ ವಾರಕ್ಕೆ ಕನಿಷ್ಠ ರೂ. 330.00 ಮಿತಿಯೊಂದಿಗೆ ವಿದ್ಯುತ್ ಬಳಕೆ ಶುಲ್ಕ, ಪ್ರತಿ ಯೂನಿಟ್‌ಗೆ	11.60
		ಎಲ್.ಟಿ–7 (ಬಿ): ತಾತ್ಕಾಲಿಕ ಸಂಪರ್ಕಗಳು	ಮಂಜೂರಾದ ಹೊರೆಯು 67 ಹೆಚ್.ಪಿ.ಗಿಂತ ಕಡಿಮೆ ಇದ್ದರೆ, ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ ಕನಿಷ್ಠ ರೂ. 125.00	125	ಮಂಜೂರಾದ ಹೊರೆಯು 67 ಹೆಚ್.ಪಿ.ಗಿಂತ ಕಡಿಮೆ ಇದ್ದರೆ, ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ ಕನಿಷ್ಠ ರೂ. 300.00	300
			ವಿದ್ಯುತ್ ಬಳಕೆ ಶುಲ್ಕ, ಪ್ರತಿ ಯೂನಿಟ್ಟಿಗೆ	11.10	ವಿದ್ಯುತ್ ಬಳಕೆ ಶುಲ್ಕ, ಪ್ರತಿ ಯೂನಿಟ್ಟಿಗೆ	11.60
			ಹೆಚ್.ಟಿ.ಸರಬರಾಜು – 11ಕೆವಿ ಮತ್ತು ಅದಕ್ಕೂ ಮೇಲ್ಪಟ್ಟು		**ಹೆಚ್.ಟಿ.ಸರಬರಾಜು – 11ಕೆವಿ ಮತ್ತು ಅದಕ್ಕೂ ಮೇಲ್ಪಟ್ಟು**	
8	**ಹೆಚ್.ಟಿ–1**	ಸಾರ್ವಜನಿಕ ನೀರು ಸರಬರಾಜು, ಒಳಚರಂಡಿ ಮತ್ತು ಮಲಿನ ನೀರು ಶುದ್ಧೀಕರಣ ಹಾಗೂ ಪಂಪ್ ಮಾಡುವ ಸ್ಥಾಪನಗಳು	ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	230	ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	630
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.55	ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.55
			ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–		**ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–**	
			ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)		ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)	
			ಸಮಯಾಧಾರಿತ ಅವಧಿ	**ಯೂನಿಟ್ ಒಂದಕ್ಕೆ**	**ಸಮಯಾಧಾರಿತ ಅವಧಿ**	**ಯೂನಿಟ್ ಒಂದಕ್ಕೆ**
			06.00 ರಿಂದ 10.00 ರವರೆಗೆ	0.00	06.00 ರಿಂದ 10.00 ರವರೆಗೆ	0.00
			10.00 ರಿಂದ 18.00 ರವರೆಗೆ	0.00	10.00 ರಿಂದ 18.00 ರವರೆಗೆ	0.00
			18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ	18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ
			22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ	22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ
9	**ಹೆಚ್.ಟಿ–2(ಎ)** ಕೈಗಾರಿಕೆ, ಕೈಗಾರಿಕೇತರ, ವಾಣಿಜ್ಯೇತರ ಉದ್ದೇಶ	**ಹೆಚ್.ಟಿ.2(ಎ)(i):** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನ್ವಯಿಸುತ್ತದೆ.	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	250	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	425
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ		ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	7.45	ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	7.45
			1 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	7.75	1 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	7.75
		ಹೆಚ್.ಟಿ.2(ಎ)(ii): ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಡದ ಇತರೆ ಪ್ರದೇಶಗಳಿಗೆ ಅನ್ವಯಿಸುತ್ತದೆ	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	240	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	415
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ		ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	7.35	ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	7.35
			1 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	7.55	1 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	7.55
		ರೈಲ್ವೆ ಕರ್ಷಣ ಸ್ಥಾವರಗಳು (ಹೆಚ್.ಟಿ.2(ಎ)(i) ಮತ್ತು ಹೆಚ್.ಟಿ.2(ಎ)(ii) ಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	250	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	250
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.55	ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.55
		ಮಲಿನ ನೀರು ಶುದ್ಧೀಕರಣ ಸ್ಥಾವರಗಳು	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	250	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	250
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.95	ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.95
		ಬೆಂಗಳೂರು ಮೆಟ್ರೋ ಸ್ಥಾವರಗಳು	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	220	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	220
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.20	ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.20
10	**ಹೆಚ್.ಟಿ–2(ಬಿ):** ವಾಣಿಜ್ಯ ಸ್ಥಾಪನಗಳು, ಹೋಟೆಲ್‌ಗಳು, ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆಗಳು, ಪೆಟ್ರೋಲ್/ ಡೀಸೆಲ್ ಶೇಖರಣ ಸ್ಥಾವರಗಳು	**ಹೆಚ್.ಟಿ.2(ಬಿ)(i):** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	270	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	420
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ		ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಮೊದಲ 2 ಲಕ್ಷ ಯೂನಿಟ್ಟುಗಳವರೆಗೆ	9.25	ಮೊದಲ 2 ಲಕ್ಷ ಯೂನಿಟ್ಟುಗಳವರೆಗೆ	8.25
			2 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	9.35	2 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	8.35
		ಹೆಚ್.ಟಿ.2(ಬಿ)(ii): ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಡದ ಇತರೆ ಪ್ರದೇಶಗಳಿಗೆ ಅನ್ವಯಿಸುತ್ತದೆ	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	260	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	410
			ಮೊದಲ 2 ಲಕ್ಷ ಯೂನಿಟ್ಟುಗಳವರೆಗೆ	9.05	ಮೊದಲ 2 ಲಕ್ಷ ಯೂನಿಟ್ಟುಗಳವರೆಗೆ	8.05
			2 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	9.15	2 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	8.15
11	**ಹೆಚ್.ಟಿ–2(ಸಿ)**	**ಹೆಚ್.ಟಿ–2(ಸಿ)(i):** ಸರ್ಕಾರಿ ಆಸ್ಪತ್ರೆಗಳು,ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾಸಂಸ್ಥೆಗಳು	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	240	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	440
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ		ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	7.20	ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	7.20
			ಉಳಿದ ಯೂನಿಟ್ಟುಗಳಿಗೆ	7.60	ಉಳಿದ ಯೂನಿಟ್ಟುಗಳಿಗೆ	7.60
		ಹೆಚ್.ಟಿ–2(ಸಿ)(ii): ಹೆಚ್.ಟಿ–2(ಸಿ)(1) ನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	240	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	440
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ		ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	8.20	ಮೊದಲ 1 ಲಕ್ಷ ಯೂನಿಟ್ಟುಗಳವರೆಗೆ	8.20
			1 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	8.60	1 ಲಕ್ಷ ಯೂನಿಟ್ಟುಗಳನ್ನು ಮೀರಿ ಬಳಸಿದ ಬಳಕೆಗೆ	8.60
			ಹೆಚ್.ಟಿ–2(ಎ)ಹೆಚ್.ಟಿ–2(ಬಿ) ಮತ್ತು		ಹೆಚ್.ಟಿ–2(ಎ)ಹೆಚ್.ಟಿ–2(ಬಿ) ಮತ್ತು	
			ಹೆಚ್.ಟಿ–2(ಸಿ) ಸ್ಥಾಪನಗಳಿಗೆ ಅನ್ವಯಿಸುತ್ತದೆ		ಹೆಚ್.ಟಿ–2(ಸಿ) ಸ್ಥಾಪನಗಳಿಗೆ ಅನ್ವಯಿಸುತ್ತದೆ	
			ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–		**ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–**	
			ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)		ಅನ್ವಯಿತ ಸಾಮಾನ್ಯ ದರಕ್ಕಿಂತ ಸಮಯಾಧಾರಿತ ವಿದ್ಯುತ್ ದರದ ಹೆಚ್ಚಳ(+)/ಇಳಿತ(–)	
			ಸಮಯಾಧಾರಿತ ಅವಧಿ	**ಯೂನಿಟ್ ಒಂದಕ್ಕೆ**	**ಸಮಯಾಧಾರಿತ ಅವಧಿ**	**ಯೂನಿಟ್ ಒಂದಕ್ಕೆ**
			06.00 ರಿಂದ 10.00 ರವರೆಗೆ	0.00	06.00 ರಿಂದ 10.00 ರವರೆಗೆ	0.00
			10.00 ರಿಂದ 18.00 ರವರೆಗೆ	0.00	10.00 ರಿಂದ 18.00 ರವರೆಗೆ	0.00
			18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ	18.00 ರಿಂದ 22.00 ರವರೆಗೆ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (+)100 ಪೈಸೆ
			22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ	22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ–ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್–ಜೂನ್ (–)100 ಪೈಸೆ
12	**ಹೆಚ್.ಟಿ–3(ಎ)** ಏತ ನೀರಾವರಿ ಯೋಜನೆಗಳು/ ಸಂಘಗಳು:	**ಹೆಚ್.ಟಿ.3(ಎ)(i):** ಸರ್ಕಾರಿ ಇಲಾಖೆಗಳು/ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ನಿಗಮಗಳ ಏತ ನೀರಾವರಿ ಯೋಜನೆಗಳಿಗೆ ಅನ್ವಯಿಸುತ್ತದೆ.	ವಿದ್ಯುತ್ ಬಳಕೆ ಶುಲ್ಕ/ಕನಿಷ್ಠ ಶುಲ್ಕ: ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ ವಾರ್ಷಿಕ ಕನಿಷ್ಠ ರೂ. 1720.00 ದ ಮಿತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ	3.10	ವಿದ್ಯುತ್ ಬಳಕೆ ಶುಲ್ಕ/ಕನಿಷ್ಠ ಶುಲ್ಕ: ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ ವಾರ್ಷಿಕ ಕನಿಷ್ಠ ರೂ. 2120.00 ದ ಮಿತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ	4.10

ಕಾರ್ಮಿಕ ಕಲ್ಯಾಣ ನಿಧಿ ವಂತಿಗೆ ಪಾವತಿ ಜ.15 ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಯ ವಂತಿಗೆಯನ್ನು 2022ರ ಜ.15ರ ಒಳಗೆ ಪಾವತಿಸಬೇಕು ಎಂದು ಕಾರ್ಮಿಕ ಕಲ್ಯಾಣ ಮಂಡಳಿ ತಿಳಿಸಿದೆ.

1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಖಾನೆಗಳು, ತೋಟಗಳು, ಕಾರ್ಯಗಾರಗಳು, ಮೋಟಾರು ಸಂಸ್ಥೆಗಳು, 50ಕ್ಕಿಂತ ಹೆಚ್ಚು ಕಾರ್ಮಿಕರಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು 2020ನೇ ವರ್ಷಕ್ಕೆ ಸಂಬಂಧಿಸಿದ ವಂತಿಗೆಯನ್ನು ಆನ್‌ಲೈನ್ ಮೂಲಕ ಕಡ್ಡಾಯವಾಗಿ ಸಲ್ಲಿಸಬೇಕು. ಪ್ರತಿಯೊಬ್ಬ ಕಾರ್ಮಿಕನಿಂದ ₹ 20, ಮಾಲೀಕರಿಂದ ಅಥವಾ ಸಂಸ್ಥೆಯಿಂದ ₹ 40 ಸೇರಿಸಿ ಒಟ್ಟು ₹ 60ನ್ನು ಕಾರ್ಖಾನೆಯಲ್ಲಿ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ಒಟ್ಟು ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಪಾವತಿಸಬೇಕು. ಕಲ್ಯಾಣ ಆಯುಕ್ತರು ಈ ಬಗ್ಗೆ ತಪಾಸಣೆ ಕೈಗೊಳ್ಳಲಿದ್ದಾರೆ. ನಿಯಮ ಪಾಲಿಸದ ಸಂಸ್ಥೆಗಳಿಗೆ ಮೊದಲ 3 ತಿಂಗಳಿಗೆ ಶೇ 12ರಂತೆ ಹಾಗೂ ಅನಂತರ ತಿಂಗಳಿಗೆ ಶೇ 18ರಂತೆ ಬಡ್ಡಿ ವಿಧಿಸಲಾಗುತ್ತದೆ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ ಮಂಡಳಿಯ ವೆಬ್‌ಸೈಟ್ (www.klwb.karnataka.gov.in) ನೋಡಬಹುದು.

ಸಂಪರ್ಕ: 8277291175/ 080-23475188

ಕಂಪ್ಯೂಟರ್ ಉಚಿತ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಕಂಪ್ಯೂಟರ್ ಉಚಿತ ತರಬೇತಿ ನೀಡಲಿದೆ.

ಡಿಸೆಂಬರ್ ಕೊನೆಯ ವಾರದಲ್ಲಿ ತರಬೇತಿ ಪ್ರಾರಂಭವಾಗಲಿದೆ. ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರು ತರಬೇತಿ ಪಡೆದುಕೊಳ್ಳಬಹುದು. ಆಸಕ್ತರು ಸಂಸ್ಥೆಯಲ್ಲಿ ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ

ಸಂಪರ್ಕ: 9448538107

ರಾಮವ್ವ ಜೋಗತಿಗೆ ಎಚ್.ಹನುಮಂತಯ್ಯ ಪ್ರಶಸ್ತಿ



ರಾಮವ್ವ ಜೋಗತಿ

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ನೀಡುವ ರಾಜ್ಯ ಮಟ್ಟದ ಎಚ್.ಹನುಮಂತಯ್ಯ (ಎಚ್.ಎನ್.ಪ್ರಶಸ್ತಿ) ಪ್ರಶಸ್ತಿಗೆ ಪಟ್ಟಣ ಸಮೀಪದ ಗೊಲ್ಲರಹಳ್ಳಿಯ ರಾಮವ್ವ ಜೋಗತಿ ಆಯ್ಕೆಯಾಗಿದ್ದಾರೆ.

ಡಿ.29ರಂದು ಪರಿಷತ್ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಪ್ರಥಮ ವೈಜ್ಞಾನಿಕ ಸಮ್ಮೇಳನ-2021ದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಚೌಡ್ಕಿ ಪ್ರವೀಣೆ ಎಂದು ಹೆಸರು ಮಾಡಿದ ರಾಮವ್ವ ಜೋಗತಿ, ಕರ್ನಾಟಕ ರಾಜ್ಯ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಅವರ ರೇಣುಕಾ ಯಲ್ಲಮ್ಮ ಜೋಗತಿಯ ತಂಡದ ಮುಖ್ಯ ಸದಸ್ಯೆಯಾಗಿದ್ದಾರೆ. ಜೋಗತಿ ನೃತ್ಯದಲ್ಲಿ ಚೌಡ್ಕಿ ಬಾರಿಸುವುದರ ಜೊತೆಗೆ ಜೋಗತಿ ಪದಗಳನ್ನು ಹಾಡುವುದರಲ್ಲಿ ನಿಸ್ಸೀಮರಾಗಿದ್ದಾರೆ.

‘ವಿವಿಧ ರಂಗಗಳಲ್ಲಿ ಸಾಧನೆ ಮಾಡಿದವರಿಗೆ ನೀಡಲಾಗುವ ಈ ಪ್ರಶಸ್ತಿಗೆ ನನ್ನನ್ನು ಗುರುತಿಸಿ ಆಯ್ಕೆ ಮಾಡಿರುವುದು ಸಂತಸ ತಂದಿದೆ. ಇದು ಇಡೀ ಜಾನಪದ ಲೋಕಕ್ಕೆ ಸಂದ ಪ್ರಶಸ್ತಿಯಾಗಿದೆ’ ಎಂದು ರಾಮವ್ವ ಜೋಗತಿ ಅವರು ‘ಪ್ರಜಾವಾಣಿ’ಯೊಂದಿಗೆ ಸಂತಸ ಹಂಚಿಕೊಂಡರು.

		ಹೆಚ್.ಟಿ.3(ಎ)(ii): ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆ ರೂ.	95	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆರೂ.	215
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.10	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.40
		ಹೆಚ್.ಟಿ. 3(ಎ)(iii): ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.	ನಿಗದಿತ ಶುಲ್ಕ ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆ ರೂ.	75	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆರೂ.	215
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.10	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.40
	ಹೆಚ್.ಟಿ.3(ಬಿ)	ನೀರಾವರಿ ಹಾಗೂ ಕೃಷಿ ಫಾರಂಗಳು, ಸರ್ಕಾರಿ ತೋಟಗಾರಿಕೆ ಫಾರಂಗಳು, ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಫಿ, ಟೀ, ತೆಂಗು ಹಾಗೂ ಅಡಿಕೆ ಬೆಳೆಗಳು	**ವಿದ್ಯುತ್ ಬಳಕೆ ಶುಲ್ಕ :** ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಹೆಚ್.ಪಿ.ಗೆ ವಾರ್ಷಿಕ ಕನಿಷ್ಠ ರೂ. 1780/– ಕ್ಕೆ ಒಳಪಟ್ಟು	5.10	**ವಿದ್ಯುತ್ ಬಳಕೆ ಶುಲ್ಕ :** ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಹೆಚ್.ಪಿ. ಗೆ ವಾರ್ಷಿಕ ಕನಿಷ್ಠ ರೂ. 2280/– ಕ್ಕೆ ಒಳಪಟ್ಟು	5.10
13	**ಹೆಚ್.ಟಿ–4**	ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು, ಕಾಲೋನಿಗಳು.	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಕೆವಿಎಗೆ	155	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಕೆವಿಎಗೆ	605
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ	7.05	ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ	7.55
14	**ಹೆಚ್.ಟಿ–5**	ತಾತ್ಕಾಲಿಕ ದೀಪ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ತಿಂಗಳು	300	ನಿಗದಿತ ಶುಲ್ಕ: ಪ್ರತಿ ತಿಂಗಳು	600
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.10	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.30
		ಹೆಚ್.ಟಿ–5(ಎ): ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರ (67 ಹೆಚ್.ಪಿಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನೆಗಳಿಗೆ ಅನ್ವಯಿಸುತ್ತದೆ)	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	12.20	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	12.78

ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯ ಸರ್ಕಾರವು ವಿಧಿಸಿದ/ ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ಸಿದ್ಧ ಮಾಹಿತಿ

ಅನುಬಂಧ – 2

ಪ್ರವರ್ಗ	ಸ್ಥಾಪನದ ಮಾದರಿ	ಮಾಸಿಕ ಬಳಕೆ ಮಟ್ಟ (ಕೆ.ಡಬ್ಲ್ಯೂ.ಎಚ್) (ಯೂನಿಟ್)	ಹಾಲಿ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್ (ರೂ.)	ಪ್ರಸ್ತಾಪಿಸಿದ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್ (ರೂ.)	ತೆರಿಗೆ ಹೊರತುಪಡಿಸಿ ಶೇ. ಹೆಚ್ಚಳ
ಎಲ್.ಟಿ–1	ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ(ರಾಜ್ಯ ಸರ್ಕಾರದ ಸಹಾಯಧನದಿಂದ ಭರಿಸಲಾಗುವುದು)				
	100 ವಾಟ್	20	168	192	14.29
		40	337	385	14.24
ಎಲ್.ಟಿ–2 ಎ(i)	ಎ.ಇ.ಎಚ್ (ಬೆಂ.ಮ.ನ.ಪಾಲಿಕೆ, ಸಿಟಿ ಮುನಿಸಿಪಲ್ ಕೌನ್ಸಿಲ್ ವ್ಯಾಪ್ತಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	319	334	4.70
		100	597	662	10.89
	3 ಕಿ.ವಾಟ್	200	1497	1722	15.03
		300	2312	2687	16.22
		400	3127	3652	16.79
ಎಲ್.ಟಿ–2 ಎ(ii)	ಎ.ಇ.ಎಚ್ (ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	295	310	5.08
		100	558	623	11.65
	3 ಕಿ.ವಾಟ್	200	1408	1633	15.98
		300	2173	2548	17.26
		400	2938	3463	17.87
ಎಲ್.ಟಿ–2 ಬಿ(i)	ಖಾಸಗಿ ಶಿಕ್ಷಣ ಸಂಸ್ಥೆಗಳು/ ನಗರ ಪಾಲಿಕೆಗಳೂ ಸೇರಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ				
	1ಕಿ.ವಾಟ್ ವರೆಗೆ	100	855	945	10.53
	3 ಕಿ.ವಾಟ್	200	1760	1990	13.07
		300	2615	2885	10.33
		400	3470	3780	8.93
ಎಲ್.ಟಿ–2 ಬಿ(ii)	ಖಾಸಗಿ ಶಿಕ್ಷಣ ಸಂಸ್ಥೆಗಳು/ ಗ್ರಾಮಪಂಚಾಯಿತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ				
	1ಕಿ.ವಾಟ್ ವರೆಗೆ	100	785	865	10.19
	3 ಕಿ.ವಾಟ್	200	1620	1830	12.96
		300	2420	2660	9.92
		400	3220	3490	8.39
ಎಲ್.ಟಿ–3(i)	ವಾಣಿಜ್ಯ ದೀಪ: (ಬೆಂ.ಮ.ನ.ಪಾಲಿಕೆ, ಸಿಟಿ ಮುನಿಸಿಪಲ್ ಕಾರ್ಪೊರೇಶನ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	523	558	6.69
		100	990	1030	4.04
	5 ಕಿ.ವಾಟ್‌ಗೆ	100	1410	1570	11.35
		300	3280	3460	5.49
		500	5150	5350	3.88
	10 ಕಿ.ವಾಟ್‌ಗೆ	100	1935	2245	16.02
		300	3805	4135	8.67
		500	5675	6025	6.17
ಎಲ್.ಟಿ–3(ii)	ವಾಣಿಜ್ಯ ದೀಪ: ಗ್ರಾಮಪಂಚಾಯಿತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.				
	1ಕಿ.ವಾಟ್ ವರೆಗೆ	50	488	523	7.17
		100	930	970	4.30
	5 ಕಿ.ವಾಟ್‌ಗೆ	100	1310	1470	12.21
		300	3080	3260	5.84
		500	4850	5050	4.12
	10 ಕಿ.ವಾಟ್‌ಗೆ	100	1785	2095	17.37
		300	3555	3885	9.28
		500	5325	5675	6.57
ಎಲ್.ಟಿ–4ಎ	ನೀರಾವರಿ ಪಂಪುಸೆಟ್				
	10ಹೆಚ್.ಪಿ ವರೆಗಿನ	600	2580	3126	21.16
	(10ಹೆಚ್.ಪಿ ವರೆಗಿನ ನೀರಾವರಿ ಪಂಪುಸೆಟ್‌ಗಳಿಗೆ ರಾಜ್ಯ ಸರ್ಕಾರದ ಸಹಾಯಧನದಿಂದ ಭರಿಸಲಾಗುವುದು)				
ಎಲ್.ಟಿ–4ಬಿ	11 ಹೆಚ್‌ಪಿ ವರೆಗಿನ	375	2434	3909	60.60
ಎಲ್.ಟಿ–4ಸಿ(i)	10 ಹೆಚ್‌ಪಿ ವರೆಗಿನ	284	1893	3177	67.83
ಎಲ್.ಟಿ–5ಎ	ಕೈಗಾರಿಕೆ, ಕೈಗಾರಿಕೇತರ ತಾಪನ, ದೀಪವನ್ನು ಒಳಗೊಂಡಂತೆ ಮೋಟೀವ್ ಪವರ್ : ಬೆಂಗಳೂರು ಮಹಾನಗರ ಕ್ಷೇತ್ರ ವಲಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ				
	5 ಎಚ್.ಪಿ	200	1575	2075	31.75
		300	2175	2725	25.29
		500	3375	4025	19.26
	10 ಎಚ್.ಪಿ	600	4580	5680	24.02
		800	6040	7240	19.87
		1000	7500	8800	17.33
	20 ಎಚ್.ಪಿ	1500	12000	14350	19.58
		2000	15650	18250	16.61
		3000	22950	26050	13.51
	50 ಎಚ್.ಪಿ	3000	26500	32000	20.75
		4000	33800	39800	17.75
		7000	55700	63200	13.46
	65 ಎಚ್.ಪಿ	4000	35375	42575	20.35
		5000	42675	50375	18.04
		10000	79175	89375	12.88
	75 ಎಚ್.ಪಿ	7000	63200	72700	15.03
		9000	77800	88300	13.50
		11000	92400	103900	12.45
ಎಲ್.ಟಿ–5ಬಿ	ಬೆಂಗಳೂರು ಮಹಾನಗರ ಕ್ಷೇತ್ರ ವಲಯ ವ್ಯಾಪ್ತಿಯನ್ನು ಹೊರತುಪಡಿಸಿದ ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ.				
	5 ಎಚ್.ಪಿ	200	1465	1965	34.13
		300	2035	2585	27.03
		500	3175	3825	20.47
	10 ಎಚ್.ಪಿ	600	4315	5415	25.49
		800	5645	6845	21.26
		1000	6975	8275	18.64
	20 ಎಚ್.ಪಿ	1500	11250	13600	20.89
		2000	14725	17325	17.66
		3000	21675	24775	14.30
	50 ಎಚ್.ಪಿ	3000	25075	30575	21.93
		4000	32025	38025	18.74
		7000	52875	60375	14.18
	65 ಎಚ್.ಪಿ	4000	33525	40725	21.48
		5000	40475	48175	19.02
		10000	75225	85425	13.56
	75 ಎಚ್.ಪಿ	7000	59500	69000	15.97
		9000	73400	83900	14.31
		11000	87300	98800	13.17
ಎಲ್.ಟಿ–6(b)	ಬೀದಿ ದೀಪ/ ಸಾರ್ವಜನಿಕ ದೀಪ ಸ್ಥಾಪನಗಳು				
	3 ಕಿ.ವಾಟ್	200	1660	2120	27.71
	5 ಕಿ.ವಾಟ್	300	2545	3285	29.08
	10 ಕಿ.ವಾಟ್	500	4425	5825	31.64
ಎಲ್.ಟಿ–6(a)	ನೀರು ಸರಬರಾಜು ಮತ್ತು ಒಳಚರಂಡಿ ಪಂಪಿಂಗ್ ಸ್ಥಾಪನಗಳು				
	3 ಎಚ್.ಪಿ	500	2760	3460	25.36
	5 ಎಚ್.ಪಿ	1000	5425	6725	23.96
	10 ಎಚ್.ಪಿ	2000	10850	13450	23.96
ಎಲ್.ಟಿ–6(c)	ವಿದ್ಯುತ್ ಚಾಲಿತ ವಾಹನ–ಎಲ್.ಟಿ				
	1ಕಿ.ವಾಟ್‌ಗೆ	50	320	320	0.00
		100	570	570	0.00
	5 ಕಿ.ವಾಟ್‌ಗೆ	100	850	850	0.00
		300	1850	1850	0.00
		500	2850	2850	0.00
ಎಲ್.ಟಿ–6(c)	ವಿದ್ಯುತ್ ಚಾಲಿತ ವಾಹನ – ಹೆಚ್.ಟಿ				
	100 ಕೆವಿಎ	6000	47000	47000	0.00
		10000	67000	67000	0.00
		14000	87000	87000	0.00
	1000 ಕೆವಿಎ	60000	470000	470000	0.00
		100000	670000	670000	0.00
		210000	1220000	1220000	0.00
ಎಚ್.ಟಿ – 1	ನೀರು ಸರಬರಾಜು ಮತ್ತು ಒಳಚರಂಡಿ ಸ್ಥಾಪನಗಳು				
	100 ಕೆವಿಎ	9000	69500	103500	48.92
		10000	75050	109050	45.30
		11000	80600	114600	42.18
	300 ಕೆವಿಎ	10000	114150	216150	89.36
		14000	136350	238350	74.81
		20000	169650	271650	60.12
	1000 ಕೆವಿಎ	110000	806000	1146000	42.18
		130000	917000	1257000	37.08
		150000	1028000	1368000	33.07
	6000 ಕೆವಿಎ	400000	3393000	5433000	60.12
		500000	3948000	5988000	51.67
		600000	4503000	6543000	45.30
ಎಚ್.ಟಿ–2(ಎ)(i)	ಕೈಗಾರಿಕೆ : ಬೆಂಗಳೂರು ಮಹಾನಗರ ಪಾಲಿಕೆಯ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಹಾಗೂ ನಗರ ಮುನಿಸಿಪಾಲಿಟಿ ಕೌನ್ಸಿಲ್				
	300 ಕೆವಿಎ	12000	153150	197775	29.14
		15000	175500	220125	25.43
		20000	212750	257375	20.98
		110000	886250	930875	5.04
	ರೈಲ್ವೆ ಕರ್ಷಣ				
	9000 ಕೆವಿಎ	1000000	8462500	8462500	0.00
		2000000	15012500	15012500	0.00
	ಬಿ.ಎಂ.ಆರ್.ಸಿ.ಎಲ್				
	9000 ಕೆವಿಎ	1000000	6883000	6883000	0.00
		2000000	12083000	12083000	0.00
ಎಚ್.ಟಿ–2(ಎ)(ii)	ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಹೊರತುಪಡಿಸಿದ ಇತರ ಪ್ರದೇಶಗಳಿಗೆ ಅನ್ವಯಿಸುತ್ತದೆ				
	300 ಕೆವಿಎ	12000	149400	194025	29.87
		15000	171450	216075	26.03
		20000	208200	252825	21.43
		110000	871700	916325	5.12
	ರೈಲ್ವೆ ಕರ್ಷಣ				
	9000 ಕೆವಿಎ	1000000	8462500	8462500	0.00
		2000000	15012500	15012500	0.00
ಎಚ್.ಟಿ–2(ಬಿ)(i)	ವಾಣಿಜ್ಯ : ಬೆಂಗಳೂರು ಮಹಾನಗರ ಪಾಲಿಕೆಯ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಹಾಗೂ ನಗರ ಮುನಿಸಿಪಾಲಿಟಿ ಕೌನ್ಸಿಲ್				
	100 ಕೆವಿಎ	6000	78450	85200	8.60
		10000	115450	118200	2.38
		14000	152450	151200	–0.82
	1000 ಕೆವಿಎ	60000	784500	852000	8.60
		100000	1154500	1182000	2.38
		210000	2173000	2090500	–3.80
ಎಚ್.ಟಿ–2(ಬಿ)(ii)	ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಹೊರತುಪಡಿಸಿದ ಇತರ ಪ್ರದೇಶಗಳಿಗೆ ಅನ್ವಯಿಸುತ್ತದೆ				
	100 ಕೆವಿಎ	6000	76400	83150	8.84
		10000	112600	115350	2.44
		14000	148800	147550	–0.84
	1000 ಕೆವಿಎ	60000	764000	831500	8.84
		100000	1126000	1153500	2.44
		210000	2122500	2040000	–3.89
ಎಚ್.ಟಿ–2(ಸಿ)(i)	ಸರ್ಕಾರಿ ಅಸ್ಪತ್ರೆಗಳು, ಇಎಸ್‌ಐ, ವಿಶ್ವವಿದ್ಯಾಲಯಗಳು, ರಾಜ್ಯ ಸರ್ಕಾರದ, ರಾಜ್ಯ ಸರ್ಕಾರದ ಧನಸಹಾಯದಿಂದ ನಡೆಯುವ ವಿದ್ಯಾಸಂಸ್ಥೆಗಳು				
	100 ಕೆವಿಎ	6000	63600	80600	26.73
		10000	92400	109400	18.40
		14000	121200	138200	14.03
	1000 ಕೆವಿಎ	60000	636000	806000	26.73
		100000	924000	1094000	18.40
		210000	1760000	1930000	9.66
ಎಚ್.ಟಿ–2(ಸಿ)(ii)	ಎಚ್.ಟಿ–2(ಸಿ)(i) ನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ವಿದ್ಯಾಸಂಸ್ಥೆಗಳು				
	100 ಕೆವಿಎ	6000	69600	86600	24.43
		10000	102400	119400	16.60
		14000	135200	152200	12.57
	1000 ಕೆವಿಎ	60000	696000	866000	24.43
		100000	1024000	1194000	16.60
		210000	1970000	2140000	8.63
ಎಚ್.ಟಿ–4(ಎ)	ಗೃಹ ನಿವಾಸಿ ಅಪಾರ್ಟ್‌ಮೆಂಟುಗಳು : ಬೆಂ.ಮ.ನ.ಪಾಲಿಕೆ ಹಾಗೂ ಸಿಟಿ ಮುನಿಸಿಪಲ್ ಕಾರ್ಪೊರೇಶನ್ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ				
	100 ಕೆವಿಎ	6000	55475	96725	74.36
		10000	83675	126925	51.69
		12000	97775	142025	45.26
	1000 ಕೆವಿಎ	60000	554750	967250	74.36
		100000	836750	1269250	51.69
		120000	977750	1420250	45.26

ಟಿಪ್ಪಣಿ: ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯಸರ್ಕಾರವು ವಿಧಿಸಿದ / ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ಮಲಿನವಾಗುತ್ತಿದೆ ಜಲಕಾಯ ● ನಿಲ್ಲದ ಒತ್ತುವರಿ–ಕಿರಿದಾಗುತ್ತಿದೆ ಕೆರೆಯಂಗಳ

ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ ಕುತ್ತು ತಂದ ಕಸ

● ಸಚ್ಚಿದಾನಂದ ಕುರಗುಂದ



508 ಎಕರೆ **11** ಗುಂಟೆಗಳು – ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ಒಟ್ಟು ಪ್ರದೇಶ

21 ಎಕರೆ **4** ಗುಂಟೆ – ಸರ್ಕಾರ ಮತ್ತು ಖಾಸಗಿಯವರಿಂದ ಒತ್ತುವರಿಯಾಗಿರುವ ಕೆರೆ ಜಾಗ

11 ಎಕರೆ **5** ಗುಂಟೆ – ರಾಷ್ಟ್ರೀಯ ಹೆದ್ದಾರಿಗೆ, ಎಸ್‌ಟಿಪಿಗೆ, ನೌಕಾಪಡೆ ತರಬೇತಿ ಕೇಂದ್ರಕ್ಕೆ ಬಳಸಲಾದ ಜಾಗ

9 ಎಕರೆ **39** ಗುಂಟೆ – ಖಾಸಗಿ ವ್ಯಕ್ತಿಗಳಿಂದ ಒತ್ತುವರಿಯಾದ ಜಾಗ

(ಆಧಾರ: ಎನ್‌ಜಿಟಿಗೆ ಜಂಟಿ ಸಮಿತಿ ಸಲ್ಲಿಸಿರುವ ವರದಿ)



ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಅಂಗಳದಲ್ಲಿ ಕಟ್ಟಡ ತ್ಯಾಜ್ಯ ಸುರಿದಿರುವುದು

ಬೆಂಗಳೂರು: ಜನರ ಜೀವನಾಡಿಯಾಗಿರುವ ಈ ಜಲಕಾಯದ ಒಡಲು ಈಗ ಕಲುಷಿತಗೊಂಡಿದೆ. ಪ್ರಶಾಂತ ವಾತಾವರಣ, ಹಕ್ಕಿಗಳ ಕಲರವದೊಂದಿಗೆ ಆಹ್ಲಾದಕರವಾಗಿದ್ದ ಇಲ್ಲಿನ ಪರಿಸರಕ್ಕೆ ಧಕ್ಕೆ ತರುವ ಪ್ರಯತ್ನಗಳು ಅವ್ಯಾಹತವಾಗಿ ನಡೆಯುತ್ತಿವೆ. ಕಲುಷಿತ ನೀರಿನ ಸೇರ್ಪಡೆಯಿಂದ ಈ ಕೆರೆಯ ನೀರು ಕಪ್ಪು ಬಣ್ಣಕ್ಕೆ ತಿರುಗುತ್ತಿದ್ದು, ದುರ್ವಾಸನೆಯನ್ನೂ ಬೀರುತ್ತಿದೆ.

ಕೆ.ಆರ್.ಪುರ ಸಮೀಪದ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ದುಃಸ್ಥಿತಿ ಇದು. ಐತಿಹಾಸಿಕವಾಗಿ ಮಹತ್ವ ಪಡೆದಿರುವ ಈ ವಿಶಾಲವಾದ ಕೆರೆಯಂಗಳವೂ ದಿನೇ ದಿನೇ ಕಿರಿದಾಗುತ್ತಿದೆ. ಒಳಚರಂಡಿಯ ಕೊಳಚೆ ನೀರು ಕೆರೆಯ ಒಡಲು ಸೇರುತ್ತಿದೆ. ಕಟ್ಟಡ ತ್ಯಾಜ್ಯ ಮತ್ತು ವೈದ್ಯಕೀಯ ತ್ಯಾಜ್ಯಗಳು ಹಾಗೂ ರಾಸಾಯನಿಕಗಳು ಈ ಕೆರೆಯಂಗಳವನ್ನು ಹಾಳುಗೆಡಹುತ್ತಿದ್ದರೆ, ಇನ್ನೊಂದೆಡೆ ಒತ್ತುವರಿಯಿಂದಾಗಿ ಈ ಜಲಕಾಯದ ಅಸ್ತಿತ್ವವೇ ಅಪಾಯಕ್ಕೆ ಸಿಲುಕಿದೆ.

ತಿಳಿ ನೀರಿನಿಂದ ನಳನಳಿಸುತ್ತಿದ್ದ ಈ ಕೆರೆ ಒಳಚರಂಡಿ ನೀರು ಸೇರಿ ಮೂಲ ಸ್ವರೂಪವನ್ನೇ ಕಳೆದುಕೊಳ್ಳುತ್ತಿದೆ. ಇದರ ಪುನರುಜ್ಜೀವನಕ್ಕೆ ಸಾಮಾಜಿಕ ಕಾರ್ಯಕರ್ತರು, ಸ್ಥಳೀಯರು ಅವಿರತ ಪ್ರಯತ್ನ ನಡೆಸುತ್ತಿದ್ದಾರೆ. ಒತ್ತುವರಿಯನ್ನೂ ತೆರವುಗೊಳಿಸಿ ಕೆರೆಯನ್ನು ಅಭಿವೃದ್ಧಿಪಡಿಸಬೇಕು ಎಂಬುದು ಸ್ಥಳೀಯರ ಒತ್ತಾಯ.

ಎಲೆ ಮಲ್ಲಪ್ಪ ಚೆಟ್ಟಿ ಕೆರೆ ಎಂದೂ ಇದನ್ನು ಕರೆಯಲಾಗುತ್ತಿದೆ. ಎಲೆ ವ್ಯಾಪಾರಿಯಾಗಿದ್ದ ರಾಯ್ ಬಹಾದ್ದೂರ್ ಮಲ್ಲಪ್ಪ ಶೆಟ್ಟಿ ಕೊಡುಗೈ ದಾನಿಯಾಗಿದ್ದರು. 1900ರಲ್ಲಿ ಬರ ಪರಿಸ್ಥಿತಿ ತಲೆದೋರಿದಾಗ ಜನರ ಸಂಕಷ್ಟ ನಿವಾರಿಸಲು ಅವರು ಸ್ವತಃ ದೇಣಿಗೆ ನೀಡಿ ಈ ಕೆರೆ ನಿರ್ಮಿಸಿದರು ಎಂದು ಇತಿಹಾಸಕಾರರು ಹೇಳುತ್ತಾರೆ.

‘ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿರುವ ಈ ಕೆರೆಯಲ್ಲಿ ಇತ್ತೀಚೆಗೆ ಮೀನುಗಳು ಸತ್ತಿದ್ದವು. ಕಟ್ಟಡದ ತ್ಯಾಜ್ಯವನ್ನು ಕೆರೆ ಅಂಗಳದಲ್ಲಿ ಸುರಿಯಲಾಗುತ್ತಿದೆ. ಸಮೀಪದಲ್ಲೇ ಕಸ ಸಂಸ್ಕರಣಾ ಘಟಕವೂ ಇದೆ. ಅಲ್ಲಿನ ತ್ಯಾಜ್ಯ ನೀರೂ ಈ ಕೆರೆಗೆ ಹರಿದು ಬರುತ್ತಿದೆ’ ಎಂದು ಕೆರೆ ಉಳಿಸಲು ಹೋರಾಡುತ್ತಿರುವ ಬಾಲಾಜಿ ರಘೋತ್ತಮ್ ಬಾಲಿ ದೂರಿದರು.

‘ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಈ ಕೆರೆಗೆ ಭೇಟಿ ನೀಡಿ, ಇದರ ಅಭಿವೃದ್ಧಿಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ, ಈ ಪ್ರಸ್ತಾವ ಮೂಲೆಗೆ ಸೇರಿದೆ’ ಎಂದು ಅವರು ಒತ್ತಾಯಿಸಿದರು.

ಈ ಕೆರೆಯ ಸಂರಕ್ಷಣೆಗೆ ಕ್ರಮಕೈಗೊಳ್ಳಬೇಕು ಎಂದು ಕೋರಿ ಸಾಮಾಜಿಕ ಹೋರಾಟಗಾರ ಜೆ. ಜಗನ್ ಕುಮಾರ್ ಅವರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ದೂರು ಸಲ್ಲಿಸಿದ್ದರು.

ಒತ್ತುವರಿ, ತ್ಯಾಜ್ಯ ಸುರಿಯುತ್ತಿರುವುದು ಹಾಗೂ ಸಣ್ಣ ನೀರಾವರಿ ಇಲಾಖೆಯೇ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆಯೇ ಕೆರೆ ಪ್ರದೇಶದಲ್ಲಿ ಜಾಕ್‌ವೆಲ್ ಹಾಗೂ ಪಂಪ್‌ಹೌಸ್ ನಿರ್ಮಿಸುತ್ತಿರುವ ಅಂಶಗಳನ್ನು ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

ಜಗನ್ ಕುಮಾರ್ ದೂರಿನ ಮೇರೆಗೆ, ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿ, ಪರಿಸರ ಮತ್ತು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಅಧಿಕಾರಿಗಳನ್ನು ಒಳಗೊಂಡ ಜಂಟಿ ಸಮಿತಿಯನ್ನು ಎನ್‌ಜಿಟಿ ರಚಿಸಿತ್ತು. ಈ ಸಮಿತಿಯು ಅಕ್ಟೋಬರ್ 22ರಂದು ಎನ್‌ಜಿಟಿಗೆ ವರದಿ ಸಲ್ಲಿಸಿದೆ. ಸಮಿತಿ ನಿರ್ದೇಶನ ಮೇರೆಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರು ಸರ್ವೆ ಕೈಗೊಂಡಿದ್ದರು. ಕೆರೆ ಒಟ್ಟು 508 ಎಕರೆ 16 ಗುಂಟೆಗಳಷ್ಟು ಪ್ರದೇಶ ಹೊಂದಿದೆ ಎಂದು ವಿವರ ನೀಡಿದ್ದರು.

ಸಂಸ್ಕರಣಾ ಘಟಕಗಳಿಂದ ಕೆರೆಗೆ ಹರಿದು ಬರುತ್ತಿರುವ ತ್ಯಾಜ್ಯ ನೀರನ್ನು ತಾತ್ಕಾಲಿಕವಾಗಿ ತಡೆಯಲು 2022ರ ಡಿಸೆಂಬರ್‌ವರೆಗೆ ಹಾಗೂ ಶಾಶ್ವತ ಕ್ರಮ ಕೈಗೊಳ್ಳಲು 2027ರ ಡಿಸೆಂಬರ್‌ವರೆಗೆ ಕಾಲಾವಕಾಶ ಬೇಕು ಎಂದು ಜಲಮಂಡಳಿ ಕೋರಿರುವುದನ್ನು ಹಾಗೂ ಕೆರೆ ಸುತ್ತ ₹5 ಕೋಟಿ ವೆಚ್ಚದಲ್ಲಿ ಬೇಲಿ ನಿರ್ಮಿಸುವ ಪ್ರಸ್ತಾವವನ್ನು ಸಣ್ಣ ನೀರಾವರಿ ಇಲಾಖೆ ಸರ್ಕಾರಕ್ಕೆ ಕಳುಹಿಸಿರುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಕಡಿಮೆಯಾಗುತ್ತಿದೆ ಆಮ್ಲಜನಕ ಪ್ರಮಾಣ’

ಕೆರೆಯ ನೀರು ಕಲುಷಿತವಾಗಿರುವುದರಿಂದ ಇಲ್ಲಿನ ಜಲಚರಗಳ ಜೀವಕ್ಕೂ ಕುತ್ತು ಬಂದಿದೆ. ಕೆರೆಯ ನೀರಿನಲ್ಲಿ ಆಮ್ಲಜನಕ ಪ್ರಮಾಣ ಕಡಿಮೆಯಾಗಿ ಮೀನುಗಳು ಇತ್ತೀಚೆಗೆ ಸತ್ತಿವೆ.

‘ಪ್ರತಿ ಲೀಟರ್ ನೀರಿನಲ್ಲಿ ಕರಗಿರುವ ಆಮ್ಲಜನಕ ಪ್ರಮಾಣ 4 ಮಿಲಿ ಗ್ರಾಂ ಇರಬೇಕು. ಆದರೆ, ಈ ಕೆರೆಯಲ್ಲಿ 1.4 ಮಿಲಿ ಗ್ರಾಂ ಮಾತ್ರ ಇದೆ. ಇದರಿಂದ, ಮೀನುಗಳಿಗೆ ಅಗತ್ಯವಿರುವಷ್ಟು ಆಮ್ಲಜನಕ ಸಿಗುತ್ತಿಲ್ಲ. ಹಾಗಾಗಿ ಮೀನುಗಳು ಸಾವಿಗೀಡಾಗಿವೆ’ ಎಂದು ಕೆಎಸ್‌ಪಿಸಿಬಿ ಅಧಿಕಾರಿಯೊಬ್ಬರು ತಿಳಿಸಿದರು.

‘ಈ ಕೆರೆಯ ಸಂರಕ್ಷಣೆಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ರೂಪಿಸಿರುವ ಕೆಎಸ್‌ಪಿಸಿಬಿಯು ಈ ಬಗ್ಗೆ ಎನ್‌ಜಿಟಿಗೆ ವರದಿ ಸಲ್ಲಿಸಿದೆ’ ಎಂದೂ ತಿಳಿಸಿದ್ದಾರೆ.

ಜಂಟಿ ಸಮಿತಿಯ ಶಿಫಾರಸುಗಳು

- ಒತ್ತುವರಿ ತೆರವುಗೊಳಿಸಬೇಕು
- ಕೆರೆಯಂಗಳದಲ್ಲಿ ಕಟ್ಟಡ ತ್ಯಾಜ್ಯ ಸುರಿಯುವುದನ್ನು ತಡೆಯುವುದು
- ಕೆರೆಗೆ ಬೇಲಿ ಹಾಕುವುದು
- ಸಂಸ್ಕರಣೆಯಾಗದ ತ್ಯಾಜ್ಯ ನೀರು ಹರಿದು ಬರದಂತೆ ತಡೆಯುವುದು

ಹೊರ ವಲಯ ಒಳ ಬೇಗುದಿ



ವೈದ್ಯಕೀಯ ತ್ಯಾಜ್ಯ



ಕಲುಷಿತ ನೀರಿನಲ್ಲಿ ಸತ್ತಿರುವ ಮೀನು



ನಮ್ಮ ಕಣ್ಮುಂದೆಯೇ ಕೆರೆ ಹಾಳಾಗುತ್ತಿದೆ. ಕೆರೆಯನ್ನಾದರೂ ಉಳಿಸಿಕೊಳ್ಳಬೇಕು ಎಂದು ಹೋರಾಟ ಮಾಡುತ್ತಿದ್ದೇವೆ. ಸರ್ಕಾರ ಸಂರಕ್ಷಣೆ ಕಾರ್ಯ ನಡೆಸಬೇಕು

ಜೆ. ಜಗನ್ ಕುಮಾರ್
ಸಾಮಾಜಿಕ ಹೋರಾಟಗಾರ



ಸ್ವಚ್ಛವಾಗಿದ್ದ ಕೆರೆ ಈಗ ಗಬ್ಬೆದ್ದು ಹೋಗಿದೆ. ಕಸ ಸುರಿಯುವ ಮೂಲಕ ಇಲ್ಲಿನ ಪರಿಸರವನ್ನೇ ಹಾಳು ಮಾಡಲಾಗುತ್ತಿದೆ. ಕೆರೆಯ ಸ್ವಚ್ಛತೆ ಕಾಪಾಡಲು ಕ್ರಮಕೈಗೊಳ್ಳಬೇಕು

ಬಾಲಾಜಿ ರಘೋತ್ತಮ್
ಕೆರೆ ಸಂರಕ್ಷಣೆ ಕಾರ್ಯಕರ್ತ



ಬೊಮ್ಮನಹಳ್ಳಿ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ಸಿಪಿಎಂ ಕಾರ್ಯಕರ್ತರು

ಮತಾಂತರ ನಿಷೇಧ ಮಸೂದೆ ವಿರುದ್ಧ ಸಿಪಿಎಂ ಪ್ರತಿಭಟನೆ

ಬೊಮ್ಮನಹಳ್ಳಿ: ವ್ಯಕ್ತಿಯ ಮೂಲಭೂತ ಹಕ್ಕು ಕಸಿಯಲಿರುವ ಮತಾಂತರ ನಿಷೇಧ ಮಸೂದೆ ವಾಪಸ್ ಪಡೆಯಲು ಆಗ್ರಹಿಸಿ ಸಿಪಿಎಂ ಕಾರ್ಯಕರ್ತರು ಈಚೆಗೆ ಬೊಮ್ಮನಹಳ್ಳಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

‘ಬಲತ್ಕಾರ ಮತ್ತು ಆಮಿಷದ ಮತಾಂತರವನ್ನು ತಡೆಯುವ ಉದ್ದೇಶದಿಂದ ಕಾಯ್ದೆ ತರಲಾಗಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆಯಾದರೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಕರಾಳ ಕಟ್ಟಳೆಗಳನ್ನು ರೂಪಿಸಲಾಗಿದೆ. ಸಂಘ ಪರಿವಾರದ ಗೂಂಡಾಪಡೆಗೆ ಕಾನೂನಿನ ಕುಣಿಕೆಯನ್ನು ನೀಡಿ, ಸಮಾಜದಲ್ಲಿ ಭಯದ ವಾತಾವರಣ ನಿರ್ಮಿಸುವುದೇ ಈ ಕಾಯ್ದೆ ಜಾರಿಯ ಉದ್ದೇಶ’ ಎಂದು ಪ್ರತಿಭಟನಾಕಾರರು ದೂರಿದರು.

ಸಿಪಿಎಂ ರಾಜ್ಯ ಮುಖಂಡ ಡಾ.ಕೆ. ಪ್ರಕಾಶ್ ಮಾತನಾಡಿ, ‘ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿರುವ ಈ ಮಸೂದೆಯು, ಸಂವಿಧಾನ ಬದಲಿಸುವ ಬಿಜೆಪಿಯ ರಹಸ್ಯ ಕಾರ್ಯಸೂಚಿಯ ಭಾಗವಾಗಿದೆ’ ಎಂದರು. ‘ಅಂತರ್ಜಾತಿ ಹಾಗೂ ಅಂತರ್ ಧರ್ಮೀಯ ವಿವಾಹಗಳನ್ನು ತಡೆಯುವ ದುರುದ್ದೇಶ ಹೊಂದಲಾಗಿದ್ದು, ಮಸೂದೆಯು ಮಾನವ ಹಕ್ಕುಗಳನ್ನು ನಿರಾಕರಿಸುವ ಅಪಾಯಕಾರಿ ಅಂಶಗಳನ್ನು ಒಳಗೊಂಡಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಎಂ ಬೊಮ್ಮನಹಳ್ಳಿ ವಲಯದ ಮುಖಂಡರಾದ ಎನ್.ದಯಾನಂದ್, ಪಿ.ಕೆ.ನಿತಿನ್, ಮಾಧು, ಸಂತೋಷ್, ಸುಬ್ರಮಣಿ ಇದ್ದರು.

ಮೊಬೈಲ್ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಕದ್ದ ಸ್ಕೂಟರ್‌ನಲ್ಲಿ ನಗರದ ವಿವಿಧೆಡೆ ಸುತ್ತಾಡಿ ರಸ್ತೆಯಲ್ಲಿ ಏಕಾಂಗಿಯಾಗಿ ಓಡಾಡುವವರನ್ನು ಗುರಿಯಾಗಿಟ್ಟುಕೊಂಡು ಮೊಬೈಲ್ ಕಳ್ಳತನ ಮಾಡುತ್ತಿದ್ದ ಮೊಹಮ್ಮದ್ ಯಾಸಿನ್ (22) ಎಂಬಾತನನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿಯಿಂದ ಸ್ಕೂಟರ್ ಹಾಗೂ ಎರಡು ಮೊಬೈಲ್‌ಗಳು ಸೇರಿ ₹1.26 ಲಕ್ಷ ಮೌಲ್ಯದ ಸ್ವತ್ತುಗಳನ್ನು ಜಪ್ತಿ ಮಾಡಲಾಗಿದೆ. ಜೆ.ಜೆ.ನಗರ ನಿವಾಸಿಯಾಗಿರುವ ಆರೋಪಿ, ತನ್ನ ಸ್ನೇಹಿತನ ಜೊತೆಗೂಡಿ ಹೈಗ್ರೌಂಡ್ಸ್, ಶೇಷಾದ್ರಿಪುರ, ಮಲ್ಲೇಶ್ವರ, ಉಪ್ಪಾರಪೇಟೆ ಸೇರಿದಂತೆ ವಿವಿಧೆಡೆ ಮೊಬೈಲ್ ಕಳ್ಳತನ ಮಾಡುತ್ತಿದ್ದ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ. ಈತನ ಕೃತ್ಯಕ್ಕೆ ಸಹಕರಿಸಿದ್ದ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಇದೇ 17ರಂದು ರಾತ್ರಿ 9.30ರ ಸುಮಾರಿಗೆ ವ್ಯಕ್ತಿಯೊಬ್ಬರು ಠಾಣೆ ವ್ಯಾಪ್ತಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ಮಾತನಾಡಿಸುವ ನೆಪದಲ್ಲಿ ವ್ಯಕ್ತಿಯ ಮೊಬೈಲ್ ಕದ್ದು ಪರಾರಿಯಾಗಿದ್ದರು. ಈ ಸಂಬಂಧ ವ್ಯಕ್ತಿಯು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಸಿಬ್ಬಂದಿ, ಆರೋಪಿಯನ್ನು ಬಂಧಿಸಿ ವಿಚಾರಿಸಿದಾಗ ಕಳ್ಳತನ ಮಾಡಿರುವ ವಿಷಯ ಒಪ್ಪಿಕೊಂಡಿದ್ದ. ತನ್ನ ಸ್ನೇಹಿತನ ಜೊತೆಗೂಡಿ ಬ್ಯಾಟರಾಯಪುರ ಠಾಣೆ ವ್ಯಾಪ್ತಿಯಲ್ಲಿ ಸ್ಕೂಟರ್ ಕದ್ದಿರುವ ವಿಚಾರವನ್ನೂ ಬಾಯ್ಬಿಟ್ಟಿದ್ದ’ ಎಂದು ಹೇಳಿದ್ದಾರೆ.

30 ರಂದು ರಾಜಭವನ ಮುತ್ತಿಗೆಗೆ ನಿರ್ಧಾರ

ಬೆಂಗಳೂರು: ‘ಬೆಳಗಾವಿ ಮತ್ತು ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಖಂಡಿಸಿ ಇದೇ 30ರಂದು ರಾಜಭವನಕ್ಕೆ ಮುತ್ತಿಗೆ ಹಾಕಲು ತೀರ್ಮಾನಿಸಿದ್ದೇವೆ’ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣ ಗೌಡ ತಿಳಿಸಿದರು.

ಕ.ರ.ವೇ ರಾಜ್ಯ ಪದಾಧಿಕಾರಿಗಳ ಸಭೆಯ ಬಳಿಕ ಅವರು ಮಾತನಾಡಿದರು.

‘ಎಂಇಎಸ್ ಹಾಗೂ ಶಿವಸೇನಾ ಕಾರ್ಯಕರ್ತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಈ ಸಂಘಟನೆಗಳನ್ನು ರಾಜ್ಯದಲ್ಲಿ ನಿಷೇಧಿಸಬೇಕು. ಕೇಂದ್ರದ ಗಮನ ಸೆಳೆಯುವ ಉದ್ದೇಶದಿಂದ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ಬಿಬಿಎಂಪಿ ಕೇಂದ್ರ ಕಚೇರಿಯಿಂದ ರಾಜಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಿದ್ದೇವೆ’ ಎಂದು ಹೇಳಿದರು.

‘ಇದೇ 28ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಗುವುದು’ ಎಂದು ತಿಳಿಸಿದರು.

‘ಇದೇ 31ರ ‘ಕರ್ನಾಟಕ ಬಂದ್’ಗೆ ನಮ್ಮ ಬೆಂಬಲ ಇಲ್ಲ. ಜನಸಾಮಾನ್ಯರಿಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಬಂದ್‌ನಿಂದ ದೂರ ಉಳಿಯಲು ತೀರ್ಮಾನಿಸಿದ್ದೇನೆ. ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ಮಸಿ ಬಳಿದಿದ್ದಾರೆ ಎಂಬ ಕಾರಣಕ್ಕೆ ನಮ್ಮ ಸರ್ಕಾರವು ಕನ್ನಡಪರ ಸಂಘಟನೆಯೊಂದರ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಿದೆ. ಯುವಕರನ್ನು ಕೂಡಲೇ ಬಿಡುಗಡೆಗೊಳಿಸಿ ಅವರ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಬೇಕು’ ಎಂದರು.



ನಟ ಪುನೀತ್ ರಾಜ್‌ಕುಮಾರ್ ಅವರಿಗೆ ರೋಟರಿ ಕ್ಲಬ್ ವತಿಯಿಂದ ಮರಣೋತ್ತರವಾಗಿ ನೀಡಲಾದ ‘ರೋಟರಿ ವೃತ್ತಿ ಸೇವಾ ಪರಿಣಿತ’ ಪ್ರಶಸ್ತಿಯನ್ನು ಚಲನಚಿತ್ರ ನಿರ್ಮಾಪಕ ಎ.ಚಿನ್ನೇಗೌಡ ಅವರು ಸ್ವೀಕರಿಸಿದರು. ಎ.ವಿ.ಸತ್ಯನಾರಾಯಣ, ಎಸ್.ರಂಗಪ್ಪ ಮತ್ತು ರೋಟರಿ ಬೆಂಗಳೂರು ಸಂಸ್ಥೆಯ ಹನುಮಂತನಗರ ಘಟಕದ ಪದಾಧಿಕಾರಿಗಳು ಹಾಗೂ ಕಲಾವಿದರು ಇದ್ದಾರೆ – ಪ್ರಜಾವಾಣಿ ಚಿತ್ರ

ನಟ ಪುನೀತ್‌ಗೆ ಮರಣೋತ್ತರ ‘ರೋಟರಿ ವೃತ್ತಿ ಸೇವಾ ಪರಿಣಿತ’ ಪ್ರಶಸ್ತಿ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ರೋಟರಿ ಕ್ಲಬ್ ವತಿಯಿಂದ ನೀಡಲಾದ ಮರಣೋತ್ತರವಾಗಿ ‘ರೋಟರಿ ವೃತ್ತಿ ಸೇವಾ ಪರಿಣಿತ’ ಪ್ರಶಸ್ತಿಯನ್ನು ಚಲನಚಿತ್ರ ನಿರ್ಮಾಪಕ ಎ.ಚಿನ್ನೇಗೌಡ ಅವರು ಸ್ವೀಕರಿಸಿದರು.

ರಾಜ್ಯದ 3190 ಜಿಲ್ಲೆಗಳ ರೋಟರಿ ಕ್ಲಬ್‌ಗಳ ಮತ್ತು ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದ ವತಿಯಿಂದ ನಗರದ ರವೀಂದ್ರ ಕಲಾ ಕ್ಷೇತ್ರದಲ್ಲಿ ಗುರುವಾರ ‘ನಿತ್ಯ ಸತ್ಯ ನೃತ್ಯ ಪುನೀತ’ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್.ರಂಗಪ್ಪ, ‘ವ್ಯಕ್ತಿಯೊಬ್ಬ ಆದರ್ಶವಾಗಿ ಹೇಗೆ ಬದುಕಬೇಕೆಂದು ಪುನೀತ್ ತೋರಿಸಿಕೊಟ್ಟಿದ್ದಾರೆ. ಬಲಗೈಯಿಂದ ದಾನ ಮಾಡಿದರೆ ಎಡಗೈಗೆ ತಿಳಿಯಬಾರದು ಎನ್ನುವ ನಿಯಮವನ್ನು ಪಾಲಿಸಿದವರು ಅವರು. ಅವರ ಸಿನಿಮಾಗಳು ಮನರಂಜನೆ ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ’ ಎಂದರು.

ಬೆಂಗಳೂರು ಹನುಮಂತನಗರದ ರೋಟರಿ ಅಧ್ಯಕ್ಷ ಎ.ವಿ.ಸತ್ಯನಾರಾಯಣ ಉಪಸ್ಥಿತರಿದ್ದರು. ಸೃಷ್ಟಿ ಸೆಂಟರ್ ಮತ್ತು ಪುನೀತ್ ಅಭಿಮಾನಿಗಳು ನಟನಿಗೆ ನೃತ್ಯದ ಮೂಲಕ ಗೌರವ ಸಲ್ಲಿಸಿದರು.

ಸಂಕ್ಷಿಪ್ತ ಸುದ್ದಿ

ಮನೆಯವರ ಕೈಕಾಲು ಕಟ್ಟಿ ಕಳ್ಳತನ

ಬೆಂಗಳೂರು: ದುಷ್ಕರ್ಮಿಗಳ ಗುಂಪೊಂದು ಮನೆಯೊಂದಕ್ಕೆ ನುಗ್ಗಿ ಅಲ್ಲಿದ್ದವರ ಕೈ ಕಾಲು ಕಟ್ಟಿಹಾಕಿ ನಗದು ಹಾಗೂ ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದೆ. ಈ ಸಂಬಂಧ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಯಲ್ಲಮ್ಮ ಶರಾಬ್ ಮುನಿಶಾಮಯ್ಯ ಬಡಾವಣೆಯ ಕಣ್ಣೂರಹಳ್ಳಿ ರಸ್ತೆಯ ನಿವಾಸಿಯಾಗಿರುವ ವಿನೋದ್ ಎಂಬುವರು ಗುರುವಾರ ಕೆಲಸಕ್ಕೆ ಹೋಗಿದ್ದರು. ಈ ವೇಳೆ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು ವಿನೋದ್ ಪತ್ನಿ ಸೌಂದರ್ಯ ಹಾಗೂ ತಾಯಿ ಬಸಮ್ಮ ಎಂಬುವರ ಕೈ ಕಾಲು ಕಟ್ಟಿಹಾಕಿದ್ದರು. ಬಳಿಕ ಮನೆಯ ಬೀರುವಿನಲ್ಲಿ ಇಟ್ಟಿದ್ದ 200 ಗ್ರಾಂ ಚಿನ್ನದ ಆಭರಣ ಹಾಗೂ ₹2 ಲಕ್ಷ ನಗದು ದೋಚಿಕೊಂಡು ಪರಾರಿಯಾಗಿದ್ದಾರೆ. ಪೊಲೀಸರಿಗೆ ವಿಷಯ ತಿಳಿಸಿದರೆ ಕೊಲೆ ಮಾಡುವುದಾಗಿಯೂ ಹೆದರಿಸಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

ತಮಿಳುನಾಡಿನಿಂದ ಗಾಂಜಾ ತಂದು ಮಾರಾಟ: ಇಬ್ಬರ ಸೆರೆ

ಬೆಂಗಳೂರು: ಬಸ್, ರೈಲು ಮೊದಲಾದ ಸಾರ್ವಜನಿಕ ಸಾರಿಗೆ ಮೂಲಕ ತಮಿಳುನಾಡಿನಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇರ್ಫಾನ್ (24) ಹಾಗೂ ಉಲ್ಮಾಜ್ ಪಾಷಾ (27) ಎಂಬುವರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇವರಿಂದ 7 ಕೆ.ಜಿ. ಗಾಂಜಾ ಹಾಗೂ ಒಂದು ಆಟೊ ಜಪ್ತಿ ಮಾಡಲಾಗಿದೆ.

‘ಕೆಂಗೇರಿ ನಿವಾಸಿಗಳಾಗಿರುವ ಆರೋಪಿಗಳು ಆಟೊದಲ್ಲಿ ಗಾಂಜಾ ಇಟ್ಟುಕೊಂಡು ಕಾಲೇಜು ವಿದ್ಯಾರ್ಥಿಗಳು, ಯುವಕರು ಹಾಗೂ ಐ.ಟಿ.ಕಂಪನಿಗಳ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದರು. ಕೆಂಗೇರಿ ಮೆಟ್ರೊ ನಿಲ್ದಾಣದ ಬಳಿ ಅಪರಿಚಿತರು ಗಾಂಜಾ ಮಾರುತ್ತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ದಾಳಿ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಈ ಜಾಲದಲ್ಲಿ ಮತ್ತಿಬ್ಬರು ಭಾಗಿಯಾಗಿದ್ದು, ಅವರಿಗಾಗಿ ಹುಡುಕುತ್ತಿದ್ದೇವೆ’ ಎಂದಿದ್ದಾರೆ.



ಜಪ್ತಿ ಮಾಡಿರುವ ಗಾಂಜಾ ಹಾಗೂ ಆಟೊ

ಚಿನ್ನ ಅಕ್ರಮ ಸಾಗಣೆ: ಸೂಡಾನ್ ಮಹಿಳೆ ಬಂಧನ

ಬೆಂಗಳೂರು: ಗುದನಾಳದಲ್ಲಿ ಪೇಸ್ಟ್ ರೂಪದಲ್ಲಿ ಚಿನ್ನ ಅಡಗಿಸಿಟ್ಟುಕೊಂಡು ಅಕ್ರಮವಾಗಿ ಸಾಗಿಸುತ್ತಿದ್ದ ಸೂಡಾನ್ ದೇಶದ ಮಹಿಳೆಯನ್ನು ಕಸ್ಟಮ್ಸ್ ಅಧಿಕಾರಿಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬಂಧಿಸಿದ್ದಾರೆ.

ಬಂಧಿತ 38 ವರ್ಷದ ಮಹಿಳೆಯಿಂದ ₹26.11 ಲಕ್ಷ ಮೌಲ್ಯದ 535 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ.

‘ಆರೋಪಿತ ಮಹಿಳೆಯು ಶಾರ್ಜಾದಿಂದ ‘ಏರ್ ಅರೇಬಿಯಾ ಜಿ 9–498’ ವಿಮಾನದ ಮೂಲಕ ಮಂಗಳವಾರ ರಾತ್ರಿ 9.30ಕ್ಕೆ ನಗರಕ್ಕೆ ಬಂದಿದ್ದಳು. ನಿಲ್ದಾಣದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಆಕೆಯನ್ನು ತಡೆದಿದ್ದ ಕಸ್ಟಮ್ಸ್ ಸಿಬ್ಬಂದಿ, ಪಾಸ್‌ಪೋರ್ಟ್ ಮತ್ತು ವೀಸಾ ಪರಿಶೀಲಿಸಿದ್ದರು. ಅನುಮಾನ ಮೂಡಿದ್ದರಿಂದ ಕಚೇರಿಗೆ ಕರೆದುಕೊಂಡು ಹೋಗಿ ತೀವ್ರ ವಿಚಾರಣೆಗೆ ಒಳಪಡಿಸಿದ್ದರು. ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ (ಯುಎಇ) ಬೆಂಗಳೂರಿಗೆ ಚಿನ್ನ ಕಳ್ಳಸಾಗಣೆ ಮಾಡಿದ್ದನ್ನು ಮಹಿಳೆ ಒಪ್ಪಿಕೊಂಡಿದ್ದಳು’ ಎಂದು ಕಸ್ಟಮ್ಸ್ ಇಲಾಖೆಯ ಮೂಲಗಳು ತಿಳಿಸಿವೆ.

‘ಅಂತರರಾಷ್ಟ್ರೀಯ ಕಳ್ಳಸಾಗಣೆದಾರರ ಜೊತೆ ಮಹಿಳೆಯು ಒಡನಾಟ ಹೊಂದಿರುವ ಅನುಮಾನವಿದೆ. ಹೀಗಾಗಿ ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಪಾದಚಾರಿಗಳಿಂದ ಮೊಬೈಲ್, ಹಣ ಕಿತ್ತೊಯ್ದ ಕಳ್ಳರು

ಬೆಂಗಳೂರು: ಮಧ್ಯರಾತ್ರಿ ಸಂಬಂಧಿಕರೊಬ್ಬರ ಮನೆಗೆ ನಡೆದುಕೊಂಡು ಹೋಗುತ್ತಿದ್ದ ಇಬ್ಬರು ಪಾದಚಾರಿಗಳನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು ಅವರಿಂದ ₹10 ಸಾವಿರ ನಗದು ಹಾಗೂ ಎರಡು ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಅಂಜನಾಮೂರ್ತಿ ಹಾಗೂ ನರಸಿಂಹಮೂರ್ತಿ ಎಂಬುವರು ರಾತ್ರಿ 2.15ರ ಸುಮಾರಿಗೆ ನೆಲಗದರನಹಳ್ಳಿಯ ರುಕ್ಮಿಣಿ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಅವರನ್ನು ಹೆದರಿಸಿ ಹಣ ಮತ್ತು ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಅವರು ಠಾಣೆಗೆ ಬಂದು ದೂರು ನೀಡಿದ್ದು, ಆರೋಪಿಗಳಿಗಾಗಿ ಹುಡುಕುತ್ತಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ.

ಬೈಕ್‌ಗೆ ಕ್ಯಾಂಟರ್ ಡಿಕ್ಕಿ: ಇಬ್ಬರು ವಿದ್ಯಾರ್ಥಿಗಳ ಸಾವು

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ಬೈಕ್‌ಗೆ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದಿದ್ದರಿಂದ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಬನ್ನೇರುಘಟ್ಟ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾರಕ್ಕಿ ನಿವಾಸಿಗಳಾದ ಕೌಶಿಕ್ ಮತ್ತು ಸುಷ್ಮಾ ಮೃತರು.

‘ನಗರದ ಕಾಲೇಜೊಂದರಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ ಕೌಶಿಕ್, ಊಟಕ್ಕೆಂದು ಸುಷ್ಮಾ ಜೊತೆ ಬೈಕ್‌ನಲ್ಲಿ ಬನ್ನೇರುಘಟ್ಟಕ್ಕೆ ಹೊರಟಿದ್ದರು. ಊಟ ಮುಗಿಸಿಕೊಂಡು ಕೆಂಪನಾಯಕನಹಳ್ಳಿಯ ಅಕ್ವೇರಲ್ ಗಾರ್ಮೆಂಟ್ಸ್ ಬಳಿ ಸಾಗುತ್ತಿದ್ದಾಗ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನೂ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತರಾಗಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಚಾಲಕ ಸ್ಥಳದಲ್ಲಿಯೇ ಕ್ಯಾಂಟರ್ ಬಿಟ್ಟು ಪರಾರಿಯಾಗಿದ್ದಾನೆ. ಆತನಿಗಾಗಿ ಹುಡುಕುತ್ತಿದ್ದೇವೆ’ ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರೀಯ ವಿಚಾರ ಸಂಕಿರಣ ಸರಣಿ: ಉದ್ಘಾಟನೆ: ಮಂಜುನಾಥ ಅಜ್ಜಂಪುರ, ಅತಿಥಿಗಳು: ತೇಜಸ್ವಿನಿ ಬಿ.ವೈ., ಶಶಿಧರ್ ಭಾರೀಘಾಟ್, ಬಿ. ಟಾಕಪ್ಪ ಕಣ್ಣೂರು, ಪ್ರಾಸ್ತಾವಿಕ ನುಡಿ: ಪ್ರೊ.ಎಂ.ಎನ್. ವೆಂಕಟೇಶ್, ವಿಷಯ: ‘ಕನ್ನಡ ರಂಗಭೂಮಿ, ಜನಪದ ಪ್ರದರ್ಶನಕಲೆ ಮತ್ತು ಸಂಸ್ಕೃತಿಯ ಪ್ರತಿಫಲನ’, ಸಂಯೋಜನೆ: ಡಾ.ಟಿ. ಎಸ್. ನರಸಿಂಹ ಪ್ರಸಾದ, ಆಯೋಜನೆ: ರಂಗಮಂಚ ಕಾಗೋಡು, ಮಲೆನಾಡು ವಿಜ್ಞಾನ–ಜಾನಪದ ಜ್ಞಾನ ಪರಂಪರೆ ಸಂಶೋಧನಾ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಗೀತಾ ಜಯಂತಿ ಮಹೋತ್ಸವ: ಶಿವಾನಂದ ಸ್ವಾಮೀಜಿ, ಉಪನ್ಯಾಸ: ‘ಭಗವದ್ಗೀತೆಯ 9ನೇ ಅಧ್ಯಾಯದ ರಾಜವಿದ್ಯಾರಾಜಗುಹ್ಯ ಯೋಗ’, ಆಯೋಜನೆ ಮತ್ತು ಸ್ಥಳ: ಶ್ರೀ ಕಬೀರನಾಥ ಸ್ವಾಮೀಜಿ ಬ್ರಹ್ಮವಿದ್ಯಾಶ್ರಮ ಟ್ರಸ್ಟ್, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ, ಬೆಳಿಗ್ಗೆ 10.30

ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ: ವಿಷಯ: ‘ಗಾಂಧೀಜಿ ಮತ್ತು ಉದ್ಯಮಶೀಲತೆ’, ಉಪನ್ಯಾಸಕರು: ಶ್ಯಾಮಸುಂದರ ಬಿದರಕುಂದಿ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಜೀರಿಗೆ ಲೋಕೇಶ್, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.15

ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆಯ 22ನೇ ವಾರ್ಷಿಕೋತ್ಸವ: ಉದ್ಘಾಟನೆ: ವಿದ್ವಾನ್ ಎಂ. ವಾಸುದೇವರಾವ್, ‘ಸ್ವರಲಯರತ್ನ’ ಬಿರುದು ಪ್ರದಾನ: ಟಿ.ಎಸ್. ಸತ್ಯವತಿ, ಬಿರುದು ಪಡೆವವರು: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ‘ಸ್ವರಲಯ ಶೃಂಗ’ ಬಿರುದು ಪ್ರದಾನ: ಶ್ರೀಮುಷ್ಣಂ ವಿ. ರಾಜಾರಾಮ್, ಬಿರುದು ಪಡೆವವರು: ತಿರುಮಲೈ ಶ್ರೀನಿವಾಸ್, ಆಯೋಜನೆ: ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆ, ಸ್ಥಳ: ಶ್ರೀ ರಾಮಲಲಿತ ಕಲಾ ಮಂದಿರ, ಬನಶಂಕರಿ 2ನೇ ಹಂತ, ಸಂಜೆ 4.15

ರಂಗವಿಜಯ 50ರ ಸಂಭ್ರಮ: ಉದ್ಘಾಟನೆ: ಕಾಗೋಡು ತಿಮ್ಮಪ್ಪ, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ವಿಶ್ವೇಶ್ವರಯ್ಯ ಎಂ.ಜಿ. ಗುಣಿ ಮತ್ತು ಅಮರನಾಥ್ ಅವರ ಪುಸ್ತಕ ಬಿಡುಗಡೆ: ಕುಂ. ವೀರಭದ್ರಪ್ಪ, ರಂಗಜೀವಿ ಪುರಸ್ಕಾರ: ಟಿ.ಎಸ್. ನರಸಿಂಹಪ್ರಸಾದ್ (ಪ್ರಸಾದಿ), ರಂಗಕರ್ಮಿ ಪುರಸ್ಕಾರ: ಚಂದ್ರು ವೀರ ಸಾಗರ, ಪುರಸ್ಕಾರ ವಿತರಣೆ: ಎಸ್. ರಂಗಪ್ಪ, ಆಯೋಜನೆ: ರಂಗವಿಜಯ, ರಂಗಮಂಚ ಕಾಗೋಡು, ಮಲೆನಾಡು ವಿಜ್ಞಾನ–ಜಾನಪದ ಜ್ಞಾನ ಪರಂಪರೆ ಸಂಶೋಧನಾ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4.30

ಡಾ. ನಲ್ಲೂರು ಪ್ರಸಾದ್ ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ಬಸವರಾಜ ಕಲ್ಗುಡಿ, ರೋಹಿಣಿ ಮೋಹನ್, ಪ್ರಶಸ್ತಿ ಪ್ರದಾನ: ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಪ್ರಶಸ್ತಿ ಪುರಸ್ಕೃತರ ಬಗ್ಗೆ ಮಾತನಾಡುವವರು: ಕಾ.ವೆಂ. ಶ್ರೀನಿವಾಸಮೂರ್ತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಕಾಂತರಾಜಪುರ ಸುರೇಶ್, ಆಯೋಜನೆ: ಡಾ. ನಲ್ಲೂರು ಪ್ರಸಾದ್ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಬಿ.ಎಂ. ಶ್ರೀ. ಪ್ರತಿಷ್ಠಾನ ಕಲಾಭವನ, ಎನ್. ಆರ್. ಕಾಲೋನಿ, ಬಸವನಗುಡಿ, ಸಂಜೆ 5



ನಲ್ಲೂರು ಪ್ರಸಾದ್

ಲೇಖಕಿಯರ ಸಾಹಿತ್ಯ ಮಂಥನ: ಡಾ. ಜ್ಯೋತ್ಸ್ನಾ ಕಾಮತ್ ಅವರ ಕೃತಿಗಳ ವಿಚಾರ ಸಂಕಿರಣ, ಪ್ರಬಂಧ ಮಂಡನೆ: ಕಿರಣ್ ಪ್ರಸಾದ್ ರಾಜನಹಳ್ಳಿ, ಮಧುರಾ ಕರ್ಣಮ್, ಅಧ್ಯಕ್ಷತೆ: ವನಮಾಲಾ ಸಂಪನ್ನಕುಮಾರ, ಉಪಸ್ಥಿತಿ: ಡಾ. ಜ್ಯೋತ್ಸ್ನಾ ಕಾಮತ್, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ರಸ ಸಂಜೆ ವಾರ್ಷಿಕ ನೃತ್ಯೋತ್ಸವ: ಭರತನಾಟ್ಯ ಪ್ರದರ್ಶನ: ಐಶ್ವರ್ಯ ನಿತ್ಯಾನಂದ, ಪ್ರವೀಣ್ ಕುಮಾರ್, ಮುಖ್ಯ ಅತಿಥಿ: ಗಾಯತ್ರಿ ಕೇಶವನ್, ಆಯೋಜನೆ: ವೆಂಕಟೇಶ ನೃತ್ಯ ಮಂದಿರ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ಪುಸ್ತಕ ಬಿಡುಗಡೆ: ವಿಶ್ವೇಶ್ವರಯ್ಯ ಎಂ.ಜಿ. ಅವರ ‘ವೇದಾಂತದೊಳಗಿನ ಸಿದ್ಧಾಂತ’ ಹಾಗೂ ‘ಸ್ನೇಹಲತೆ’, ಕೃತಿ ಲೋಕಾರ್ಪಣೆ: ಕುಂ. ವೀರಭದ್ರಪ್ಪ, ಆಯೋಜನೆ: ರಂಗವಿಜಯ, ವಾಗ್ದೇಯ ಪಬ್ಲಿಕೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿದ್ಯುತ್ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇದೇ 24ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ವಿಜಯನಗರ, ಹೊಸಹಳ್ಳಿ, ಆರ್‌ಪಿಸಿ ಲೇಔಟ್, ಗೋವಿಂದರಾಜ ನಗರ, ತಿಮ್ಮೇನಹಳ್ಳಿ, ನಾಗರಬಾವಿ, ಅನ್ನಪೂರ್ಣೇಶ್ವರಿ ನಗರ, ಅಂಬೇಡ್ಕರ್ ಕಾಲೇಜ್, ಸಿದ್ಧಯ್ಯ ಪುರಾಣಿಕ್ ರಸ್ತೆ, ಕೆ.ಎಚ್.ಬಿ. ಕಾಲೋನಿ, ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ, ಹಾವನೂರು ವೃತ್ತ, ಬಸವೇಶ್ವರ ನಗರ, ಜೆ.ಸಿ. ನಗರ, ಶಾರದ ಕಾಲೋನಿ, ಕಮಲಾ ನಗರ, ಶಕ್ತಿ ಗಣಪತಿ ನಗರ, ಗೃಹ ಲಕ್ಷ್ಮಿ ಬಡಾವಣೆ, ವಿನಾಯಕ ನಗರ, ಮೀನಾಕ್ಷಿ ನಗರ, ಕಾವೇರಿ ನಗರ, ಮಾರುತಿ ನಗರ, ಸುಮನಹಳ್ಳಿ, ಬಿಎಂಟಿಸಿ ರಿಂಗ್ ರೋಡ್, ಲಗ್ಗೆರೆ, ಸುಂಕದಕಟ್ಟೆ, ಕಾವೇರಿಪುರ, ಪ್ರಶಾಂತ ನಗರ, ರಂಗನಾಥಪುರ, ಪಟ್ಟೇಗಾರಪಾಳ್ಯ, ಮಾಳಗಾಳ, ಮಾರುತಿ ಬಡಾವಣೆ, ದೊಡ್ಡಬೆಲೆ ರಸ್ತೆ, ಕೃಷ್ಣ ಗಾರ್ಡನ್, ಮಹದೇಶ್ವರ ನಗರ, ಉತ್ತರಹಳ್ಳಿ ರಸ್ತೆ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಬಿಇಎಲ್ 1ನೇ ಮತ್ತು 2ನೇ ಹಂತ, ಗಾಂಧಿ ಪಾರ್ಕ್ ಸುತ್ತಮುತ್ತ ಪ್ರದೇಶಗಳು.

29ರಿಂದ ಜ. 2ರವರೆಗೆ ನಾಟಕೋತ್ಸವ, ವಿಚಾರ ಸಂಕಿರಣ

ಕಲಾಗಂಗೋತ್ರಿಯ ಸುವರ್ಣ ಸಂಭ್ರಮ 27ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಂಗಸಂಸ್ಥೆ ಕಲಾಗಂಗೋತ್ರಿ ಸುವರ್ಣ ಸಂಭ್ರಮದಲ್ಲಿದ್ದು ಆ ಪ್ರಯುಕ್ತ ಇದೇ 29ರಿಂದ 2022ರ ಜ. 2ರವರೆಗೆ ನಾಟಕೋತ್ಸವ, ಸನ್ಮಾನ, ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿದೆ.

‘ಈ ಅವಧಿಯಲ್ಲಿ ನಗರದ ರಂಗ ಶಂಕರದಲ್ಲಿ 5 ನಾಟಕಗಳು ಪ್ರದರ್ಶನಗೊಳ್ಳಲಿವೆ’ ಎಂದು ಕಲಾಗಂಗೋತ್ರಿ ಅಧ್ಯಕ್ಷ ಬಿ.ವಿ.ರಾಜಾರಾಂ ಬುಧವಾರ ಸುವರ್ಣ ಸಂಭ್ರಮಕ್ಕೆ ಚಾಲನೆ ಕಾರ್ಯಕ್ರಮದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಇದೇ 27ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ‘ಮುಖ್ಯಮಂತ್ರಿ’ ನಾಟಕದ ಸಹಾಯಾರ್ಥ ಪ್ರದರ್ಶನವಿರುತ್ತದೆ. ರವೀಂದ್ರ ಕಲಾಕ್ಷೇತ್ರದ ನಿವೃತ್ತ ನೌಕರ ಪಾರ್ಕ್ ಶ್ರೀನಿವಾಸ್ ಅವರ ವೈದ್ಯಕೀಯ ವೆಚ್ಚ ಭರಿಸಲು ಈ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ’ ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ‘1970ರಲ್ಲಿ ರಾಜಾರಾಂ, ಚಂದ್ರು ನನಗೆ ಸ್ನೇಹಿತರಾದರು. ಈ ಸಂಸ್ಥೆಯ ಜನಪ್ರಿಯ ನಾಟಕ ‘ಮುಖ್ಯಮಂತ್ರಿ’ ಈಗಾಗಲೇ 750 ಪ್ರದರ್ಶನ ಕಂಡಿದೆ. ಅಷ್ಟರಲ್ಲೂ ಚಂದ್ರು ಅವರು ಅಭಿನಯಿಸಿದ್ದಾರೆ. ಕಲಾಗಂಗೋತ್ರಿಯ ಕಲಾವಿದರು ಭಾರತದಾದ್ಯಂತ ಸಂಚರಿಸಿ 3,250ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ’ ಎಂದು ಹೇಳಿದರು.

‘ಮುಖ್ಯಮಂತ್ರಿ’ ಚಂದ್ರು ಮಾತನಾಡಿ, ‘ರಾಜಾರಾಮ್ ಅವರು ಈ ಸಂಸ್ಥೆಯನ್ನು 50 ವರ್ಷಗಳವರೆಗೆ ಮುನ್ನಡೆಸಿದ್ದಾರೆ. ನನಗೆ ಶಾಶ್ವತವಾಗಿ ‘ಮುಖ್ಯಮಂತ್ರಿ’ ಸ್ಥಾನ ತಂದುಕೊಟ್ಟ ನಾಟಕವಿದು. ನಾನು ಹೋರಾಟ, ರಂಗಭೂಮಿ, ಸಿನಿಮಾ ಮೂರೂ ಕ್ಷೇತ್ರಗಳಲ್ಲೂ ಸಕ್ರಿಯವಾಗಿದ್ದೇನೆ. ಇವತ್ತಿನ ರಾಜಕಾರಣಕ್ಕೆ ಆಪ್ತವಾಗಿರುವಂತೆ ಕೆ.ವೈ. ನಾರಾಯಣಸ್ವಾಮಿ ಅವರು ರಚಿಸಿದ ನಾಟಕ ಮತ್ತೆ ಮುಖ್ಯಮಂತ್ರಿ ಪ್ರದರ್ಶನಗೊಳ್ಳಲಿದೆ. ಇದನ್ನು ವೀಕ್ಷಿಸಲು ರಾಜಕಾರಣಿಗಳು ಹಾಗೂ ಮುಖ್ಯಮಂತ್ರಿಯವರಿಗೂ ಆಹ್ವಾನ ನೀಡಿದ್ದೇವೆ’ ಎಂದು ಹೇಳಿದರು.



‘ಮುಖ್ಯಮಂತ್ರಿ’ ನಾಟಕದ ದೃಶ್ಯ

ದಟ್ಟಣೆ ಕಾರಿಡಾರ್: ಅಲ್ಪಾವಧಿ ಟೆಂಡರ್‌ಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಬೆಂಗಳೂರು ನಗರದಲ್ಲಿ ಅತಿಯಾದ ವಾಹನ ದಟ್ಟಣೆ ಹೊಂದಿರುವ 191 ಕಿ.ಮೀ. ಉದ್ದದ 12 ರಸ್ತೆಗಳನ್ನು ₹ 1,120.48 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗಳ ಗುತ್ತಿಗೆ ನೀಡುವ ಸಲುವಾಗಿ ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ನಡೆಸಲು ಸಮ್ಮತಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.


ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆಸಲು ಅನುಮೋದನೆ ಕೋರಿ ಪ್ರಸ್ತಾವ ಸಲ್ಲಿಸಲಾಗಿತ್ತು. ಆದರೆ, ಅದರಲ್ಲಿ ಕೆಲವು ಲೋಪಗಳಿದ್ದವು.ಈ ಕುರಿತು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ(ಕೆಆರ್‌ಡಿಸಿಎಲ್)ದಿಂದ ಸ್ಪಷ್ಟನೆ ಪಡೆದ ಬಳಿಕ ಅಲ್ಪಾವಧಿ ಟೆಂಡರ್ ನಡೆಸಲು ಅನುಮತಿ ನೀಡಲಾಗಿದೆ' ಎಂದರು.

ರಸ್ತೆ ನಿರ್ಮಾಣಕ್ಕೆ ₹ 336 ಕೋಟಿ ವೆಚ್ಚವಾದರೆ, ರಸ್ತೆ ನಿರ್ವಹಣೆಗೆ ₹ 785 ಕೋಟಿ ವೆಚ್ಚ ಮಾಡುವ ಪ್ರಸ್ತಾವವಿತ್ತು. 53 ಕಿ.ಮೀ. ಉದ್ದದ ರಸ್ತೆಯನ್ನು ವೈಟ್ ಟಾಪಿಂಗ್ ಮಾಡುವ ಪ್ರಸ್ತಾವವಿದೆ. ಕಪ್ಪು ಪಟ್ಟಿಗೆ ಸೇರಿರುವ ಒಬ್ಬ ಗುತ್ತಿಗೆದಾರನಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವ ಪ್ರಸ್ತಾವವೂ ಇತ್ತು. ಈ ಎಲ್ಲ ಲೋಪಗಳನ್ನೂ ಸರಿಪಡಿಸುವಂತೆ ನಿಗಮದ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿತ್ತು ಎಂದು ಹೇಳಿದರು.

ಕೆಆರ್‌ಡಿಸಿಎಲ್ ಅಧಿಕಾರಿಗಳು ಆಕ್ಷೇಪಣೆಗಳಿಗೆ ಸ್ಪಷ್ಟನೆ ನೀಡಿದ ಬಳಿಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಅಡಿಯಲ್ಲೇ ಟೆಂಡರ್ ನಡೆಸಲು ನಿರ್ದೇಶನ ನೀಡಲಾಗಿದೆ. ಯಾವುದೇ ರೀತಿಯಲ್ಲೂ ಲೋಪ ಆಗದಂತೆ ಟೆಂಡರ್ ಪ್ರಕ್ರಿಯೆ ನಡೆಸಲಾಗುವುದು ಎಂದರು.

ಕೆಆರ್‌ಡಿಸಿಎಲ್‌ಗೆ ಏಕೆ: 'ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳನ್ನು ಕೆಆರ್‌ಡಿಸಿಎಲ್‌ಗೆ ಏಕೆ ವಹಿಸಬೇಕು? ಈಗಾಗಲೇ ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆ ಮತ್ತು ಮಾಗಡಿ ರಸ್ತೆಯಲ್ಲಿ ನಿಗಮ ನಡೆಸಿರುವ ಕಳಪೆ ಕಾಮಗಾರಿಗಳನ್ನು ಪರಿಶೀಲಿಸಿ. ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆಆರ್‌ಡಿಸಿಎಲ್ ರಸ್ತೆ ಕಾಮಗಾರಿ ನಿರ್ವಹಿಸುತ್ತಿದೆ. ಮುಂದೆ ಯಾರು ಹೊಣೆ ಎನ್ನುವುದೇ ಅರ್ಥವಾಗುತ್ತಿಲ್ಲ' ಎಂದು ಪಿ.ಆರ್. ರಮೇಶ್ ಕೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಕೆಆರ್‌ಡಿಸಿಎಲ್ ನಡೆಸಿರುವ ಎರಡೂ ಕಾಮಗಾರಿಗಳ ಕುರಿತು ಪರಿಶೀಲನಾ ವರದಿ ಪಡೆಯಲಾಗುವುದು. ಆ ಬಳಿಕ ನಿಗಮಕ್ಕೆ ಈ ಕಾಮಗಾರಿಗಳನ್ನು ವಹಿಸಬೇಕೆ? ಬೇಡವೆ? ಎಂಬುದರ ಕುರಿತು ನಿರ್ಧರಿಸಲಾಗುವುದು' ಎಂದರು.



ಗುರುವಾರ ವಿಧಾನಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯರ ಪ್ರಶ್ನೆಗೆ ಉತ್ತರ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಇದ್ದರು – ಪ್ರಜಾವಾಣಿ ಚಿತ್ರ/ ರಂಜು ಪಿ

18.52 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಯಲ್ಲಿ

'ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ 18.52 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಯಲ್ಲಿವೆ. ಈ ಪೈಕಿ 13.56 ಲಕ್ಷ ಆಸ್ತಿಗಳ ಮಾಲೀಕರು 2021–22ರಲ್ಲಿ ಆಸ್ತಿ ತೆರಿಗೆ ಪಾವತಿ ಮಾಡಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿ 'ತೆರಿಗೆ ಪಾವತಿಸಿರುವವರ ಪೈಕಿ 12.59 ಲಕ್ಷ ವಾಸಯೋಗ್ಯ ಮನೆಗಳು, 97,057 ವಾಣಿಜ್ಯ ಕಟ್ಟಡಗಳು ಮತ್ತು 9,112 ಬಹುಮಹಡಿ ವಸತಿ ಸಮುಚ್ಚಯಗಳು ಇವೆ' ಎಂದರು.

'ನಗರದ ಲ್ಲಿ 'ಎ' ಖಾತಾ ಆಸ್ತಿಗಳಿಗೆ ಮಾತ್ರ ತೆರಿಗೆ ವಿಧಿಸ ಲಾಗುತ್ತಿದೆ. 'ಬಿ' ಖಾತೆಯ ಆಸ್ತಿಗಳಿಗೂ 'ಎ' ಖಾತಾ ನೀಡ ಬೇಕು. ಇದರಿಂದ ಬಿಬಿಎಂಪಿಯ ಬೊಕ್ಕಸಕ್ಕೂ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ' ಎಂದು ರವಿಕುಮಾರ್ ಆಗ್ರಹಿಸಿದರು.

'ಅಕ್ರಮ– ಸಕ್ರಮಕ್ಕೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ತೀರ್ಪು ಬಂದ ಬಳಿಕ 'ಬಿ' ಖಾತಾ ಆಸ್ತಿಗಳಿಗೆ 'ಎ' ಖಾತೆ ನೀಡುವ ಪ್ರಕ್ರಿಯೆ ನಡೆಸಲಾಗುವುದು.' ಎಂದು ಸಿ.ಎಂ ತಿಳಿಸಿದರು.

ರಾಜಕಾಲುವೆ ಒತ್ತುವರಿ 714 ಪ್ರಕರಣ ಬಾಕಿ

ಬೆಳಗಾವಿ (ಸುವರ್ಣ ವಿಧಾನಸೌಧ): ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿರುವ 2,626 ಪ್ರಕರಣಗಳು ಪತ್ತೆಯಾಗಿದ್ದು, 1,912 ಒತ್ತುವರಿಗಳನ್ನು ತೆರವು ಮಾಡಲಾಗಿದೆ. 714 ಒತ್ತುವರಿಗಳನ್ನು ತೆರವುಗೊಳಿಸಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜಕಾಲುವೆಗೆ ಸೇರಿದ 382 ಎಕರೆ 27 ಗುಂಟೆ ಜಮೀನುಗಳನ್ನು ಒತ್ತುವರಿ ಮಾಡಲಾಗಿದೆ. ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆಯ ಅಡಿಯಲ್ಲಿ 98 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದರು.

ಒತ್ತುವರಿ ಪ್ರಕರಣದಲ್ಲಿ 20 ಅಧಿಕಾರಿಗಳ ವಿರುದ್ಧ ಬೆಂಗಳೂರು ಮಹಾನಗರ ಕಾರ್ಯಪಡೆಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿದೆ. ರಾಜಕಾಲುವೆ ಒತ್ತುವರಿಯಿಂದ ಪ್ರವಾಹ ಸೃಷ್ಟಿಯಾಗಿ ಸಂಕಷ್ಟಕ್ಕೆ ಸಿಲುಕಿದ 1,800 ಜನರಿಗೆ ₹ 2.31 ಕೋಟಿ ಪರಿಹಾರ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಯು.ಬಿ. ವೆಂಕಟೇಶ್ ಮಾತನಾಡಿ, 'ರಾಜಕಾಲುವೆ ಒತ್ತುವರಿ ಹೆಸರಿನಲ್ಲಿ 842 ಬಡವರ ಮನೆಗಳನ್ನು ತೆರವು ಮಾಡಲಾಗಿದೆ. ಆದರೆ, ಬಲಾಢ್ಯರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ' ಎಂದು ದೂರಿದರು.

ಉತ್ತರ ನೀಡಿದ ಮುಖ್ಯಮಂತ್ರಿ, 'ಒತ್ತುವರಿ ತೆರವಿನ ವಿಚಾರದಲ್ಲಿ ಸರ್ಕಾರ ಯಾವುದೇ ತಾರತಮ್ಯ ಮಾಡುವುದಿಲ್ಲ. ಎಷ್ಟೇ ದೊಡ್ಡವರಿದ್ದರೂ ಕ್ರಮ ಜರುಗಿಸುತ್ತೇವೆ' ಎಂದು ಭರವಸೆ ನೀಡಿದರು.

413 ಕಿ.ಮೀ. ಕಾಮಗಾರಿ ಬಾಕಿ: ರಾಜಕಾಲುವೆ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪಿ.ಆರ್. ರಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಬಸವರಾಜ ಬೊಮ್ಮಾಯಿ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಥಮ ಹಂತದ 348.25 ಕಿ.ಮೀ. ಮತ್ತು ದ್ವಿತೀಯ ಹಂತದ 493.44 ಕಿ.ಮೀ. ಉದ್ದದ ರಾಜಕಾಲುವೆಗಳಿವೆ. ಒಟ್ಟು 842 ಕಿ.ಮೀ. ಉದ್ದದ ರಾಜಕಾಲುವೆಗಳ ಪೈಕಿ 428 ಕಿ.ಮೀ. ಪುನರ್ ನಿರ್ಮಾಣ ಪೂರ್ಣಗೊಂಡಿದೆ' ಎಂದರು.

413.77 ಕಿ.ಮೀ. ಉದ್ದದ ರಾಜಕಾಲುವೆಗಳ ಪುನರ್ ನಿರ್ಮಾಣ ಬಾಕಿ ಇದೆ. ಇದಕ್ಕಾಗಿ ₹ 4,670.42 ಕೋಟಿ ಅನುದಾನ ಅಗತ್ಯವಿದೆ. ಈವರೆಗೆ ₹ 1,658.41 ಕೋಟಿ ವೆಚ್ಚ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಆದಾಯಕ್ಕಿಂತ ಹೆಚ್ಚಿನ ಆಸ್ತಿ: ಕೃಷಿ ಇಲಾಖೆ ಅಧಿಕಾರಿಗೆ ಜಾಮೀನು

ಬೆಂಗಳೂರು: ನಿಗದಿತ ಆದಾಯಕ್ಕಿಂತ ಶೇ 153ರಷ್ಟು ಹೆಚ್ಚಿನ ಆಸ್ತಿ ಗಳಿಕೆ ಆಪಾದನೆಯಡಿ ಬಂಧನಕ್ಕೆ ಒಳಗಾಗಿದ್ದ ಗದಗ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಈ ಕುರಿತಂತೆ ರುದ್ರೇಶಪ್ಪ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅರ್ಜಿದಾರರ ಪರ ವಕೀಲ ಸಿ.ಎಚ್. ಹನುಮಂತರಾಯ ವಾದ ಮಂಡಿಸಿ, 'ಅರ್ಜಿದಾರರು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು 18 ಎಕರೆ ಅಡಿಕೆ ತೋಟ ಹೊಂದಿದ್ದಾರೆ. ಸಹೋದರರು ವ್ಯಾಪಾರಸ್ಥರಾಗಿದ್ದು ಅವರ ಸಂಪಾದನೆಯೂ ಸಮೃದ್ಧವಾಗಿದೆ. ಅಂತೆಯೇ ಸರ್ಕಾರಿ ನೌಕರರಾಗಿದ್ದು ತನಿಖೆಗೆ ಸಹಕರಿಸಲಿದ್ದಾರೆ. ಆದ್ದರಿಂದ, ಜಾಮೀನು ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿ ಪುರಸ್ಕರಿಸಿದ ಆದೇಶಿಸಿದೆ.

ಜಿಗಣಿ ಅಭಿವೃದ್ಧಿ ಕಡೆಗಣಿಸಿದ ಬಿಜೆಪಿ: ಡಿ.ಕೆ. ಸುರೇಶ್



ಬೆಂಗಳೂರು: 'ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ಬಿಜೆಪಿ ಶಾಸಕ ಎಂ. ಕೃಷ್ಣಪ್ಪ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ' ಎಂದು ಸಂಸದ ಡಿ.ಕೆ. ಸುರೇಶ್ ಆರೋಪಿಸಿದರು.

ಜಿಗಣಿ ಪುರಸಭೆ ಚುನಾವಣೆ ಅಂಗವಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸಿದ ಅವರು, 'ಸರ್ಕಾರ ನೀಡಿದ ದಿನಸಿ ಕಿಟ್‌ಗಳಿಗೆ ಶಾಸಕರು ತಮ್ಮ ಭಾವಚಿತ್ರ ಹಾಕಿಸಿಕೊಂಡು ತಾವೇ ವೈಯಕ್ತಿಕವಾಗಿ ನೀಡಿರುವುದಾಗಿ ಪ್ರಚಾರ ಪಡೆದಿದ್ದಾರೆ' ಎಂದು ದೂರಿದರು.

'ಕ್ಷೇತ್ರಕ್ಕೆ ಎಂ. ಕೃಷ್ಣಪ್ಪ ಅವರು ಏನು ಕೊಡುಗೆ ನೀಡಿದ್ದಾರೆ ಎನ್ನುವುದನ್ನು ಬಹಿರಂಗಪಡಿಸಲಿ. ಕುಡಿಯುವ ನೀರಿನ ಸಮಸ್ಯೆಯನ್ನೂ ಬಗೆಹರಿಸಿಲ್ಲ. ಅಭಿವೃದ್ಧಿ ಬಗ್ಗೆ ಬಹಿರಂಗ ಚರ್ಚೆಗೆ ಬನ್ನಿ. ನಾನು ಸಿದ್ಧ' ಎಂದರು.

ಕಾಂಗ್ರೆಸ್ ಮುಖಂಡ ಆರ್.ಕೆ. ರಮೇಶ್, 'ಸಂಸದರ ಪ್ರಯತ್ನದಿಂದ ಜಿಗಣಿ ಪುರಸಭೆಯಾಗಿದೆ. ಇಲ್ಲಿಗೆ ಪೊಲೀಸ್ ಠಾಣೆ ಮಂಜೂರಾಗಲು ಪ್ರಮುಖ ಪಾತ್ರವಹಿಸಿರುವ ಸಂಸದರು, ವರ್ತುಲ ರಸ್ತೆ ಅಭಿವೃದ್ಧಿಯಾಗಲು ಕಾರಣಕರ್ತರಾಗಿದ್ದಾರೆ. ಜತೆಗೆ, ಜಿಗಣಿ ಅಭಿವೃದ್ದಿಗಾಗಿ ₹15 ಕೋಟಿ ಅನುದಾನವನ್ನು ಮಂಜೂರು ಮಾಡಿಸಿದ್ದಾರೆ' ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ. ಕೃಷ್ಣಪ್ಪ, ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಇಂಡ್ಲವಾಡಿ ನಾಗರಾಜ್, ಜಿ.ಪಂ. ಮಾಜಿ ಅಧ್ಯಕ್ಷೆ ಇಂದಿರಾ ನಾಗರಾಜು, ಮುಖಂಡ ನಟರಾಜ್, ಸುಜಯ್, ಜಿ.ಪಂ. ಮಾಜಿ ಸದಸ್ಯರಾದ ನರೇಂದ್ರ ಬಾಬು, ಅಚ್ಯುತ್, ಪ್ರಸನ್ನ ಕುಮಾರ್ ಇದ್ದರು.

ಮೊದಲ ಎರಡು ವರ್ಷದ ನಿರ್ವಹಣೆಗೆ ₹ 291 ಕೋಟಿ ಅಗತ್ಯ: ಕೆಆರ್‌ಡಿಸಿಎಲ್ ಸಮರ್ಥನೆ

'ರಸ್ತೆ ನಿರ್ವಹಣೆಗೆ ₹785 ಕೋಟಿ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 12 ಅತಿ ದಟ್ಟಣೆ ಕಾರಿಡಾರ್ ರಸ್ತೆಗಳ ನಿರ್ವಹಣೆಗೆ ಐದು ವರ್ಷಗಳಲ್ಲಿ ₹ 785 ಕೋಟಿ ವೆಚ್ಚ ಮಾಡುವುದನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಸಮರ್ಥಿಸಿಕೊಂಡಿದೆ.

ನಗರದ 12 ಅತಿ ದಟ್ಟಣೆಯ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ₹1,120.48 ಕೋಟಿ ವೆಚ್ಚದ ಯೋಜನೆಯ ಟೆಂಡರ್ ಪ್ರಕ್ರಿಯೆಯ ನ್ಯೂನತೆಗಳ ಬಗ್ಗೆ ಕುರಿತು 'ಪ್ರಜಾವಾಣಿ' ಸರಣಿ ವಿಶೇಷ ವರದಿಗಳನ್ನು ಪ್ರಕಟಿಸಿ ಗಮನ ಸೆಳೆದಿತ್ತು.

ನಾಲ್ಕು ಪ್ಯಾಕೇಜ್‌ಗಳನ್ನು ಒಳಗೊಂಡ ಈ ಯೋಜನೆಯ ಏಳು ಗಹನವಾದ ನ್ಯೂನತೆಗಳನ್ನು ಪಟ್ಟಿ ಮಾಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಟೆಂಡರ್ ಪ್ರಕ್ರಿಯೆಯನ್ನೇ ರದ್ದುಪಡಿಸಬೇಕು. ಅಲ್ಪಾವಧಿ ಟೆಂಡರ್ ಕರೆದು ಸಚಿವ ಸಂಪುಟದ ಮುಂದೆ ಮಂಡಿಸಬೇಕು ಎಂದೂ ಮುಖ್ಯಮಂತ್ರಿ ಅವರು ನಿರ್ದೇಶನ ನೀಡಿದ್ದರು. ಆ ಬಳಿಕ ಏಳು ನ್ಯೂನತೆಗಳ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಕೆಆರ್‌ಡಿಸಿಎಲ್‌ಗೆ ಪತ್ರ ಬರೆದಿತ್ತು. ನಿಗಮವು ಇವುಗಳಿಗೆ ಇದೇ 18ರಂದು ಉತ್ತರಿಸಿದೆ.

12 ಕಾರಿಡಾರ್‌ಗಳಲ್ಲಿ 191 ಕಿ.ಮೀ ಉದ್ದದ ರಸ್ತೆಯನ್ನು ದೈನಂದಿನ ನಿರ್ವಹಣೆ ಮಾಡಬೇಕಿದೆ. ಪ್ರಾರಂಭಿಕ ಹಂತದ ಸುಧಾರಣೆ ಕಾಮಗಾರಿಗಳಿಗೆ ₹ 335.17 ಕೋಟಿ ವೆಚ್ಚವಾಗಲಿದೆ. ರಸ್ತೆ ಕ್ಯಾರಿಯೇಜ್ ವೇ, ಪಾದಚಾರಿ ಮಾರ್ಗ, ಚರಂಡಿ, ಮೋರಿಗಳು, ರಸ್ತೆ ವಿಭಜಕಗಳು ಹಾಗೂ ಜಂಕ್ಷನ್‌ಗಳ ಅಭಿವೃದ್ಧಿಗೆ, ರಸ್ತೆ ಪಕ್ಕ ಗಿಡ ಬೆಳೆಸಲು ಮತ್ತು ಸಂಚಾರ ಸಿಗ್ನಲ್ ಅಳವಡಿಕೆಗೆ ಇಷ್ಟು ವೆಚ್ಚ ಆಗಲಿದೆ. ಅಲ್ಲದೇ 112.29 ಕಿ.ಮೀ ಉದ್ದದ ನಾಲ್ಕು ಪಥಗಳ ರಸ್ತೆ, 78.71 ಕಿ.ಮೀ ಉದ್ದದ ಆರು ಪಥಗಳ ರಸ್ತೆ, 106.75 ಕಿ.ಮೀ ಉದ್ದದ ಸರ್ವಿಸ್ ರಸ್ತೆಗಳ ನಿರ್ವಹಣೆ ಮಾಡಬೇಕಿದೆ. ಇವುಗಳ ಮೊದಲ ವರ್ಷದ ನಿರ್ವಹಣೆಗೆ ₹ 141 ಕೋಟಿ ಬೇಕು. ಇವರೆಡೂ ಸೇರಿ ಮೊದಲ ವರ್ಷಕ್ಕೆ ₹ 477.29 ಕೋಟಿ ಅನುದಾನದ ಅಗತ್ಯವಿದೆ. ಬಳಿಕ ಪ್ರತಿ ವರ್ಷ ಶೇ 5ರಷ್ಟು ಹೆಚ್ಚುವರಿ ವೆಚ್ಚವಾಗುತ್ತದೆ. ಆ ಪ್ರಕಾರ ಎರಡನೇ, ಮೂರನೇ, ನಾಲ್ಕನೇ ಹಾಗೂ ಐದನೇ ವರ್ಷಗಳ ನಿರ್ವಹಣೆಗೆ, ಡಿಪಿಆರ್ ಮತ್ತು ಯೋಜನೆ ನಿರ್ವಹಣೆ ಸಲಹೆಗಾರರ ವೆಚ್ಚ, ಆಡಳಿತಾತ್ಮಕ ವೆಚ್ಚ, ಜಿಎಸ್‌ಟಿ ಹಾಗೂ ಟೆಂಡರ್ ಪ್ರೀಮಿಯಂ ವೆಚ್ಚಗಲೂ ಸೇರಿ ಈ ಯೋಜನೆಗೆ ಒಟ್ಟು ₹ 1120.48 ಕೋಟಿ ಅಗತ್ಯವಿದೆ ಎಂಬುದು ಕೆಆರ್‌ಡಿಸಿಎಲ್ ವಾದ.

191 ಕಿ.ಮೀ ಉದ್ದದ ರಸ್ತೆಗಳಲ್ಲಿ 65.85 ಕಿ.ಮೀ ಉದ್ದದ ರಸ್ತೆಗೆ ಮಾತ್ರ ಪ್ರಾರಂಭಿಕ ಹಂತದ ಸುಧಾರಣೆಯ ಕಾಮಗಾರಿ ಕೈಗೊಳ್ಳಬೇಕಿದೆ. ಇದಕ್ಕೂ ₹ 335.17 ಕೋಟಿ ವೆಚ್ಚ ಮಾಡಿದರೆ ಪ್ರತಿ ಕಿ.ಮೀಗೆ ₹6.15 ಕೋಟಿ ವೆಚ್ಚವಾಗಲಿದೆ. ಅದರಲ್ಲಿ ಎರಡು ವರ್ಷಗಳಲ್ಲಿ ಏನೇ ದೋಷ ಕಂಡುಬಂದರೂ ಗುತ್ತಿಗೆದಾರರೇ ಸರಿಪಡಿಸಬೇಕು. ಆದರೂ ಮೊದಲ ಎರಡು ವರ್ಷದಲ್ಲಿ ರಸ್ತೆ ನಿರ್ವಹಣೆಗೆ ₹ 291 ಕೋಟಿ ವೆಚ್ಚ ಮಾಡುವುದೇಕೆ ಎಂಬ ಪ್ರಶ್ನೆಗೆ ಕೆಆರ್‌ಡಿಸಿಎಲ್ ವಿವರಣೆ ನೀಡಿಲ್ಲ.

ಕೆಆರ್‌ಡಿಸಿಎಲ್ ನೀಡಿದ ವಿವರಣೆ ಪ್ರಕಾರ, ಪ್ರತಿ ಕಿ.ಮೀ ರಸ್ತೆಯ ನಿರ್ವಹಣೆಗೆ ವರ್ಷಕ್ಕೆ ₹ 74 ಲಕ್ಷ ವೆಚ್ಚವಾಗಲಿದೆ. 'ನಿರ್ವಹಣೆ ಮಾಡಬೇಕಿರುವ ರಸ್ತೆಗಳಲ್ಲಿ 36 ಕಿ.ಮೀ ಉದ್ದದ ರಸ್ತೆ ವೈಟ್ ಟಾಪಿಂಗ್ ಆಗಿರುವುದು ನಿಜ. ಆದರೂ ಈ ರಸ್ತೆಗಳನ್ನು ಹಾಗೂ ಪಾದಚಾರಿ ಮಾರ್ಗಗಳನ್ನು ಗುಡಿಸಲು, ರಸ್ತೆಯ ಕಸ ತೆಗೆಸಲು, ರಸ್ತೆ ಪಕ್ಕದ ಚರಂಡಿ ಹೂಳೆತ್ತಲು ಗಿಡಗಳ ನಿರ್ವಹಣೆ ಮಾಡಲು, ಶಿಥಿಲಗೊಂಡ ರೆಂಬೆ ಕೊಂಬೆ ತೆರವುಗೊಳಿಸಲು, ರಸ್ತೆ ಗಸ್ತು ತಿರುಗಲು ಹಣ ಬಳಕೆ ಮಾಡಲಾಗುತ್ತದೆ' ಎಂದು ನಿಗಮವು ಸಮರ್ಥನೆ ನೀಡಿದೆ.

ಹೆಬ್ಬಾಳ– ಕೆ.ಆರ್.ಪುರ– ಸಿಲ್ಕ್‌ಬೋರ್ಡ್ ಹೊರವರ್ತುಲ ರಸ್ತೆಯಲ್ಲಿ ಮೆಟ್ರೊ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಇಲ್ಲಿ ರಸ್ತೆ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಳ್ಳುವುದನ್ನು ಮರುಪರಿಶೀಲಿಸುವುದಾಗಿ ನಿಗಮ ಹೇಳಿದೆ. ಆದರೆ, ಇದಕ್ಕೆ ತಗಲುವ ವೆಚ್ಚ ಕಡಿತದ ಬಗ್ಗೆ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ.

ನೀಟ್–ಪಿಜಿ ಕೌನ್ಸೆಲಿಂಗ್: ಪ್ರಧಾನಿ ಮಧ್ಯಪ್ರವೇಶಕ್ಕೆ ಆಗ್ರಹ

ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದ ಕೌನ್ಸೆಲಿಂಗ್ (ನೀಟ್–ಪಿಜಿ ಕೌನ್ಸೆಲಿಂಗ್) ವಿಳಂಬವಾಗುತ್ತಿರುವುದನ್ನು ಖಂಡಿಸಿ ಸ್ಥಾನಿಕ ವೈದ್ಯರು ಮುಷ್ಕರ ನಡೆಸುತ್ತಿರುವ ಬಗ್ಗೆ ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ಗುರುವಾರ ಕಳವಳ ವ್ಯಕ್ತಪಡಿಸಿದೆ. ಈ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೋರಿದೆ.

ಕೋವಿಡ್ ಪಿಡುಗಿನ ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಇದ್ದು, ಆರೋಗ್ಯ ಸೇವೆಗಾಗಿ ಮಾನವ ಸಂಪನ್ಮೂಲವನ್ನು ಹೆಚ್ಚಿಸುವ ಅಗತ್ಯ ಇದೆ. ಈ ಬಿಕ್ಕಟ್ಟನ್ನು ಕೂಡಲೇ ಬಗೆಹರಿಸಬೇಕು ಎಂದು ಐಎಂಎ ಪ್ರಕಟಣೆಯಲ್ಲಿ ಹೇಳಿದೆ. 'ಈ ಬಿಕ್ಕಟ್ಟನ್ನು ತ್ವರಿತವಾಗಿ ಬಗೆಹರಿಸದಿದ್ದಲ್ಲಿ, ಸ್ಥಾನಿಕ ವೈದ್ಯರ ಮುಷ್ಕರದಲ್ಲಿ ಸಂಘಟನೆಯೂ ಭಾಗಿಯಾಗುವುದು ಅನಿವಾರ್ಯವಾಗುವುದು' ಎಂದೂ ಐಎಂಎ ಎಚ್ಚರಿಸಿದೆ.



ಸ್ವಾಭಿಮಾನಿ ಕರ್ನಾಟಕ ವೇದಿಕೆಯು ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ದ್ವಾರನಕುಂಟೆ ಪಾತಣ್ಣ (ಎಡದಿಂದ ಕೊನೆಯವರು) ಅವರ 'ನನ್ನೊಳಗಣ ನಾನು' ಮತ್ತು 'ದಿಗ್ವಿಜಯ' ಪುಸ್ತಕವನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ (ಎಡದಿಂದ ಮೂರನೆಯವರು) ಲೋಕಾರ್ಪಣೆ ಮಾಡಿದರು. ಪತ್ರಕರ್ತ ಜೋಗಿ, ವಿಮರ್ಶಕ ಎಚ್. ದಂಡಪ್ಪ, ಪ್ರಜಾಪತ್ರಿಕೆ ಮಾಲೀಕ ಎಸ್.ನಾಗಣ್ಣ ಹಾಗೂ ಕಾದಂಬರಿಕಾರ ಜಾಣಗೆರೆ ವೆಂಕಟರಾಮಯ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

ಚಿತ್ರಾವಳಿ



ರಾಜರಾಜೇಶ್ವರಿ ನಗರದಲ್ಲಿ ಗುರುವಾರ ನಡೆದ 'ಸಾಂಸ್ಕೃತಿಕ ವೈಭವ' ಕಾರ್ಯಕ್ರಮದಲ್ಲಿ ಜಲ ಸಂಪನ್ಮೂಲ ಇಲಾಖೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಎಸ್.ಎನ್. ಶಂಕರ್ ಮತ್ತು ಬಿಬಿಎಂಪಿ ಮಾಜಿ ಸದಸ್ಯ ರಾಮಚಂದ್ರ, ಧನಪಾಲ್, ಸ್ಥಳೀಯ ಮುಖಂಡ ಚಂದ್ರು, ಬಿಜೆಪಿ ವಾರ್ಡ್ ಅಧ್ಯಕ್ಷೆ ಸವಿತಾ ಭಟ್, ಪತ್ರಕರ್ತ ಸುಧೀಂದ್ರ ರಾವ್ ಇದ್ದರು



'ಜನಸೇವಕ' ಯೋಜನೆ ಮತ್ತು ಮತದಾರರ ಗುರುತಿನ ಚೀಟಿ ನೋಂದಣಿ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಕುರಿತು ಬಿಜೆಪಿ ಮುಖಂಡ ಡಾ. ಅರುಣ್ ಸೋಮಣ್ಣ, ಸ್ಥಳೀಯ ಮುಖಂಡ ಮೋಹನ್ ಕುಮಾರ್ ಮತ್ತು ದಾಸೇಗೌಡ, ಬಿಜೆಪಿ ಮಂಡಲ ಅಧ್ಯಕ್ಷ ವಿಶ್ವನಾಥ್ ಗೌಡ ಅವರು ನಾಗರಬಾವಿಯಲ್ಲಿ ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸಿದರು – ಪ್ರಜಾವಾಣಿ ಚಿತ್ರಗಳು



ಎಂಇಎಸ್ ನಿಷೇಧಿಸುವಂತೆ ಆಗ್ರಹಿಸಿ ಇದೇ 31ರಂದು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಬೆಂಬಲ ನೀಡುವಂತೆ ಕನ್ನಡ ಸಂಘಟನೆಗಳ ಕಾರ್ಯಕರ್ತರು ಪುರಭವನದ ಬಳಿ ನಾಗರಿಕರಿಗೆ ಗುರುವಾರ ಮನವಿ ಮಾಡಿದರು

ಸಂಕ್ಷಿಪ್ತ ಸುದ್ದಿ

'ಓಮೈಕ್ರಾನ್: ಮಾರ್ಗಸೂಚಿಗಳ ಪಾಲನೆ ಅಗತ್ಯ'

ನವದೆಹಲಿ (ಪಿಟಿಐ): ದೇಶದಲ್ಲಿ ಕೊರೊನಾ ವೈರಸ್‌ನ ರೂಪಾಂತರಿ ಓಮೈಕ್ರಾನ್ ತಳಿಯ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ ಅವರು, ಕೋವಿಡ್ ಪಿಡುಗಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಗುರುವಾರ ಹೇಳಿದರು.

ದೇಶದಲ್ಲಿನ ಕೋವಿಡ್–19 ಪಿಡುಗಿನ ಸ್ಥಿತಿ ಪರಿಶೀಲಿಸಲು ಹಾಗೂ ಓಮೈಕ್ರಾನ್ ತಳಿಯ ಸೋಂಕಿನ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಡೆಸಿದ ಅಧಿಕಾರಿಗಳ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

ಕೋವಿಡ್ ವಿರುದ್ಧದ ಹೋರಾಟ ಇನ್ನೂ ಮುಗಿದಿಲ್ಲ. ಹೆಚ್ಚು ಪ್ರಕರಣಗಳು ವರದಿಯಾಗಿರುವ ಹಾಗೂ ಲಸಿಕೆ ನೀಡಿಕೆ ಪ್ರಮಾಣ ಕಡಿಮೆ ಇರುವ ರಾಜ್ಯಗಳಿಗೆ ತಜ್ಞರ ತಂಡಗಳನ್ನು ಕಳಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಓಮೈಕ್ರಾನ್ ತಳಿ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ನಾವು ಹೆಚ್ಚು ಜಾಗೃತರಾಗಬೇಕು ಹಾಗೂ ಎಚ್ಚರದಿಂದ ಇರಬೇಕು' ಎಂದೂ ಅವರು ಹೇಳಿದರು.

ಔಷಧಗಳ ಲಭ್ಯತೆ, ಆಮ್ಲಜನಕ ಸಿಲಿಂಡರ್‌ಗಳು, ವೆಂಟಿಲೇಟರ್‌ಗಳ ದಾಸ್ತಾನು, ಮಾನವ ಸಂಪನ್ಮೂಲ, ಹಾಸಿಗೆಗಳು ಸೇರಿದಂತೆ ಆರೋಗ್ಯ ಮೂಲಸೌಕರ್ಯಗಳನ್ನು ಬಲಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಪ್ರಧಾನಿ ಸೂಚಿಸಿದರು ಎಂದು ಪಿಎಂಒ ಪ್ರಕಟಣೆ ತಿಳಿಸಿದೆ.

ಐಐಎಸ್ಸಿ ಪರಿಷತ್ ಸದಸ್ಯರಾಗಿ ಸಂಸದ ರಾಮಮೂರ್ತಿ ಆಯ್ಕೆ



ನವದೆಹಲಿ: ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ರಾಜ್ಯಸಭೆ ಪ್ರಕಟಣೆ ತಿಳಿಸಿದೆ.

ಅಲೆಮಾರಿಗಳಿಗೆ ನಿವೇಶನ: ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆ ಚಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಯಲಚಗುಪ್ಪೆ ಬಳಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಲೆಮಾರಿ ಕುಟುಂಬಗಳಿಗೆ ನಿವೇಶನ ಹಕ್ಕು ಪತ್ರ ನೀಡುವ ಸಂಬಂಧ ಅಧಿಕಾರಿಗಳ ತಂಡ ಗುರುವಾರ ಸ್ಥಳ ಪರಿಶೀಲನೆ ನಡೆಸಿತು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಲಕ್ಷ್ಮಣರೆಡ್ಡಿ ನೇತೃತ್ವದಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು. ಈ ಜಾಗದಲ್ಲಿ 15 ವರ್ಷಗಳಿಂದ ಟೆಂಟ್ ನಿರ್ಮಿಸಿಕೊಂಡು ವಾಸ ಇರುವ ಕುಟುಂಬಗಳ ಮನೆ–ಮನೆ ಸರ್ವೆ ನಡೆಸಿದರು.

'ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದವರಿಗೆ ನಿವೇಶನ ನೀಡಲು 2008ರಲ್ಲಿ 5 ಎಕರೆ ನಿಗದಿ ಮಾಡಲಾಗಿದೆ. ಆದರೆ, ಫಲಾನುಭವಿಗಳ ಆಯ್ಕೆ ಈವರೆಗೆ ಅಂತಿಮ ಆಗಿರಲಿಲ್ಲ. ನಗರ ಜಿಲ್ಲಾಧಿಕಾರಿ ಅವರು ಇದೇ 22ರಂದು ಅಲೆಮಾರಿ ಮತ್ತು ಅರೆ ಅಲೆಮಾರಿ ಸಮಿತಿ ಸಭೆ ನಡೆಸಿ, ಸ್ಥಳ ಪರಿಶೀಲನೆ ನಡೆಸಿ ಹಕ್ಕುಪತ್ರ ನೀಡುವ ಪ್ರಕ್ರಿಯೆ ನಡೆಸುವಂತೆ ಸೂಚನೆ ನೀಡಿದ್ದರು. ಅದರಂತೆ ಪರಿಶೀಲನೆ ನಡೆಸಲಾಯಿತು' ಎಂದು ಲಕ್ಷ್ಮಣರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿ 220 ನಿವೇಶನಗಳು ಲಭ್ಯವಿದ್ದು, ಅದರಲ್ಲಿ ಈ ಜಾಗದಲ್ಲಿ ಸದ್ಯ 110 ಕುಟುಂಬಗಳು ವಾಸ ಇವೆ. ಇದೇ ಜಾಗದಲ್ಲಿ ಹಲವು ವರ್ಷಗಳಿಂದ ವಾಸ ಇರುವವರನ್ನು ಪಟ್ಟಿ ಮಾಡಿ ಮೊದಲ ಹಂತದಲ್ಲಿ ಅವರಿಗೆ ಹಕ್ಕು ಪತ್ರ ವಿತರಿಸಲಾಗುವುದು. ಈ ಪ್ರಕ್ರಿಯೆ ಒಂದು ತಿಂಗಳಲ್ಲಿ ಪೂರ್ಣಗೊಳ್ಳಲಿದೆ' ಎಂದು ಹೇಳಿದರು.

'ಅಲೆಮಾರಿ ಸಮುದಾಯದವರಿಗೆ ಇಲ್ಲಿ ಶಾಶ್ವತ ಮನೆ, ಶಾಲೆ, ಆಸ್ಪತ್ರೆ ಮತ್ತು ಸ್ಮಶಾನಕ್ಕೂ ಜಾಗ ಮೀಸಲಿಡಬೇಕು' ಎಂದು ಎಸ್‌ಸಿಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ಆದರ್ಶ ಯಲ್ಲಪ್ಪ ಒತ್ತಾಯಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ, 'ನಗರದ ಪಾದಚಾರಿ ಮಾರ್ಗ, ಸರ್ಕಾರಿ ಜಾಗದಲ್ಲಿ ಟೆಂಟ್ ಮತ್ತು ಗುಡಿಸಲು ನಿರ್ಮಿಸಿಕೊಂಡಿರುವ ವಿಳಾಸ ಇಲ್ಲದ ಅಲೆಮಾರಿ ಜನರ ಸರ್ವೆ ನಡೆಸಬೇಕು. ಅವರಿಗೆ ಶಾಶ್ವತ ಮನೆ ಮತ್ತು ಮೂಲಭೂತ ಸೌಕರ್ಯ ಒದಗಿಸಬೇಕು' ಎಂದು ಮನವಿ ಮಾಡಿದರು.

ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ನರಸಿಂಹಮೂರ್ತಿ, ಅಲೆಮಾರಿ ಅಭಿವೃದ್ಧಿ ಸಮಿತಿ ಸದಸ್ಯ ಮಂಜುನಾಥ್ ದಾಯತ್ಕರ್, ಭೀಮಪುತ್ರಿ ನಾಗಮ್ಮ, ಅಲೆಮಾರಿ ಮುಖಂಡ ವೆಂಕಟೇಶ್ ದೊರ, ಕಿಲೋ, ಮುನೇಶ್ ಇದ್ದರು.



ಯಲಚಗುಪ್ಪೆ ಬಳಿ ವಾಸ ಇರುವ ಅಲೆಮಾರಿ ಸಮುದಾಯ

ಭಾಸ್ಕರ ಶೆಟ್ಟಿ ಕೊಲೆ ಪ್ರಕರಣ: ರಾಜೇಶ್ವರಿ ಶೆಟ್ಟಿ ಜೀವಾವಧಿ ಶಿಕ್ಷೆ ಅಮಾನತು- ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಭಾಸ್ಕರ ಶೆಟ್ಟಿ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮೃತರ ಪತ್ನಿ ರಾಜೇಶ್ವರಿ ಶೆಟ್ಟಿಗೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತ್ತಿನಲ್ಲಿ ಇರಿಸಿ ಆದೇಶಿಸಿರುವ ಹೈಕೋರ್ಟ್, ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ರಾಜೇಶ್ವರಿ ಶೆಟ್ಟಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಹಿರಿಯ ವಕೀಲ ಹಷ್ಮತ್ ಪಾಷ, 'ಇದೊಂದು ಸಾಂದರ್ಭಿಕ ಘಟನೆಯಾಗಿದ್ದು, ಪ್ರಕರಣದಲ್ಲಿ ಹತ್ಯೆಗೀಡಾಗಿರುವ ಭಾಸ್ಕರ ಶೆಟ್ಟಿ ಅವರ ಪತ್ನಿಗೆ ಶಿಕ್ಷೆ ವಿಧಿಸಲಾಗಿದೆ. ಮೇಲ್ನೋಟಕ್ಕೆ ಇವರ ವಿರುದ್ಧ ಸಾಕ್ಷ್ಯಾಧಾರಗಳೇ ಇಲ್ಲ. ಹೋಮಕುಂಡದಲ್ಲಿ ಶವವನ್ನು ಸುಟ್ಟು ಹಾಕಲಾಗಿದೆ ಎಂಬುದಕ್ಕೂ ಯಾವುದೇ ಸಾಕ್ಷ್ಯ ದೊರೆತಿಲ್ಲ. ಡಿಎನ್‌ಎಗೆ ಸಂಬಂಧಿಸಿದಂತೆ ವಿಧಿವಿಜ್ಞಾನ ಪ್ರಯೋಗಾಲಯ ನೀಡಿರುವ ವರದಿಯನ್ನು ನಂಬಲು ಸಾಧ್ಯವಿಲ್ಲ. ಇಂತಹ ಅಂಶಗಳನ್ನೆಲ್ಲಾ ವಿಚಾರಣಾ ನ್ಯಾಯಾಲಯ ಸರಿಯಾಗಿ ಪರಿಶೀಲನೆ ಮಾಡದೆ ಶಿಕ್ಷೆ ವಿಧಿಸಿದೆ. ಆದ್ದರಿಂದ, ಶಿಕ್ಷೆಯನ್ನು ಅಮಾನತ್ತಿನಲ್ಲಿ ಇರಿಸಿ ಜಾಮೀನು ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಜೀವಾವಧಿ ಶಿಕ್ಷೆಯನ್ನು ಅಮಾನತ್ತಿನಲ್ಲಿ ಇರಿಸಿ ಜಾಮೀನು ನೀಡಿ ಆದೇಶಿಸಿತು.

ಉದ್ಯಮಿ ಭಾಸ್ಕರ ಶೆಟ್ಟಿ 2016ರ ಜುಲೈ 28ರಂದು ಉಡುಪಿಯ ಇಂದ್ರಾಳಿಯಲ್ಲಿರುವ ತಮ್ಮ ಮನೆಯಿಂದ ನಾಪತ್ತೆಯಾಗಿದ್ದರು. ಎಂಟು ದಿನಗಳ ಬಳಿಕ ಮಣಿಪಾಲ ಪೊಲೀಸರು ಅವರ ಪತ್ನಿ ರಾಜೇಶ್ವರ ಶೆಟ್ಟಿ ಮತ್ತು ಮಗನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಈ ಸಂದರ್ಭದಲ್ಲಿ ಭಾಸ್ಕರ ಶೆಟ್ಟಿ ಕೊಲೆ ವಿಚಾರ ಬಹಿರಂಗವಾಗಿತ್ತು.

ಈ ಕೊಲೆ ಮತ್ತು ಕೊಲೆಗೆ ಸಂಚು ರೂಪಿಸಿದ ಆರೋಪಕ್ಕೆ ಸಂಬಂಧಿಸಿದಂತೆ ರಾಜೇಶ್ವರಿ ಶೆಟ್ಟಿ ಅವರನ್ನು ತಪ್ಪಿತಸ್ಥರು ಎಂದು ತೀರ್ಮಾನಿಸಿದ್ದ ಉಡುಪಿ ಜಿಲ್ಲಾ ಪ್ರಧಾನ ಹಾಗೂ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ 2021ರ ಜೂನ್ 8ರಂದು ಆದೇಶಿಸಿತ್ತು. ಈ ಆದೇಶ ರದ್ದು ಕೋರಿ ರಾಜೇಶ್ವರಿ ಶೆಟ್ಟಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

'ನನ್ನೊಳಗಣ ನಾನು', 'ದಿಗ್ವಿಜಯ' ಕೃತಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೇಖಕ ದ್ವಾರನಕುಂಟೆ ಪಾತಣ್ಣ ಅವರು ತಮ್ಮ ಆತ್ಮಕಥೆ 'ನನ್ನೊಳಗಣ ನಾನು' ಕೃತಿಯಲ್ಲಿ ಬದುಕಿನ ಕಥೆಗಳನ್ನು ವಿವರಿಸುತ್ತಾ ಈ ಕಾಲದ ಘಟನೆಗಳನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ' ಎಂದು ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ ಹೇಳಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬುಧವಾರ ಏರ್ಪಡಿಸಿದ್ದ ಲೇಖಕ ದ್ವಾರನಕುಂಟೆ ಪಾತಣ್ಣ ಅವರ 'ನನ್ನೊಳಗಣ ನಾನು' ಮತ್ತು 'ದಿಗ್ವಿಜಯ' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಇಂದೂರಿನ ಮಹಾರಾಣಿ ಅಹಲ್ಯಾಬಾಯಿ ಕುರಿತ ಅವರ ದಿಗ್ವಿಜಯ ನಾಟಕ ಉತ್ತಮವಾಗಿ ಮೂಡಿಬಂದಿದ್ದು, ರಂಗದ ಮೇಲೆ ಪ್ರದರ್ಶಿಸಲು ಯೋಗ್ಯವಾಗಿದೆ' ಎಂದರು.

ಪ್ರಜಾಪ್ರಗತಿ ಪತ್ರಿಕೆ ಸಂಪಾದಕ ಎಸ್.ನಾಗಣ್ಣ ಅಧ್ಯಕ್ಷತೆ ವಹಿಸಿದ್ದರು. ಕಾದಂಬರಿಕಾರ ಜಾಣಗೆರೆ ವೆಂಕಟರಾಮಯ್ಯ, ಸಾಹಿತಿ ಪ್ರೊ. ಎಸ್. ಜಿ.ಸಿದ್ದರಾಮಯ್ಯ ಅತಿಥಿಗಳಾಗಿದ್ದರು.

ದಿಗ್ವಿಜಯ ನಾಟಕ ಕುರಿತು ಪತ್ರಕರ್ತ ಜೋಗಿ ಮತ್ತು 'ನನ್ನೊಳಗಣ ನಾನು' ಪುಸ್ತಕ ಕುರಿತು ವಿಮರ್ಶಕ ಎಚ್. ದಂಡಪ್ಪ ಮಾತನಾಡಿದರು.

ಕೊರೋನಾ ಪೀಡಿತರ ಸೇವೆ ಮಾಡಿದ ಡಾ. ಎಂ.ಶಿವಕುಮಾರ್, ಡಾ.ವೇಣುಗೋಪಾಲ್ ಮತ್ತು ಅರುಂಧತಿ ಅವರನ್ನು ಸನ್ಮಾನಿಸಲಾಯಿತು.

ಎಸಿಬಿ: 51 ಪ್ರಕರಣಗಳ ತನಿಖೆ ಅಂತ್ಯ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯದಲ್ಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಕಾರ್ಯಾರಂಭ ಮಾಡಿದ ದಿನದಿಂದ ಈವರೆಗೆ ಸರ್ಕಾರದ 225 ಅಧಿಕಾರಿ, ನೌಕರರ ವಿರುದ್ಧ 223 ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪೈಕಿ 51 ಪ್ರಕರಣಗಳ ತನಿಖೆ ಮುಕ್ತಾಯವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಗುರುವಾರ ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅವರು, '223 ಪ್ರಕರಣಗಳಲ್ಲಿ ಎಲ್ಲ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಎಸಿಬಿ ಶಿಫಾರಸು ಮಾಡಿರುತ್ತದೆ. ಅವುಗಳಲ್ಲಿ 186 ಪ್ರಕರಣಗಳಲ್ಲಿ ಆರೋಪಿತ ಅಧಿಕಾರಿಗಳು, ನೌಕರರ ಅಮಾನತು ಮತ್ತು ಹೆಚ್ಚುವರಿ ಹುದ್ದೆ ಆಧರಿಸಿ ವರ್ಗಾವಣೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಅಕ್ರಮ ಮದ್ಯ ಮಾರಾಟ– 59,733 ಪ್ರಕರಣ ದಾಖಲು: ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟದ ಆರೋಪದಡಿ 2019–20ರಿಂದ 2021ರ ನವೆಂಬರ್ ಅಂತ್ಯದವರೆಗೆ ಕರ್ನಾಟಕ ಅಬಕಾರಿ ಕಾಯ್ದೆಯಡಿ 59,733 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಎಂ. ನಾರಾಯಣಸ್ವಾಮಿ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, 'ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದವರ ವಿರುದ್ಧ 2019–20ರಲ್ಲಿ 21,926, 2020–21ರಲ್ಲಿ 25,780 ಮತ್ತು 2021ರ ನವೆಂಬರ್ ಅಂತ್ಯದವರೆಗೆ 12,027 ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ಮಾಹಿತಿ ಒದಗಿಸಿದ್ದಾರೆ.

ನಾಗವಾರ – ಗೊಟ್ಟಿಗೆರೆ ಮೆಟ್ರೊ ರೈಲು ಮಾರ್ಗ

577 ಮರ ಕತ್ತರಿಸಲು ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗವಾರ- ಗೊಟ್ಟಿಗೆರೆ ಮೆಟ್ರೊ ರೈಲು ಮಾರ್ಗದಲ್ಲಿ 577 ಮರಗಳನ್ನು ಕತ್ತರಿಸಲು, ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಹೈಕೋರ್ಟ್ ಅನುಮತಿ ನೀಡಿದೆ.

ಮರ ಕಡಿಯುವುದನ್ನು ಆಕ್ಷೇಪಿಸಿ 'ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್' ಮತ್ತು ಪರಿಸರವಾದಿ ಟಿ.ದತ್ತಾತ್ರೇಯ ದೇವರೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯ ಪೀಠ, 'ತಜ್ಞರ ಸಮಿತಿ ನೀಡಿರುವ ವರದಿಯಂತೆ ಬಿಎಂಆರ್‌ಸಿಎಲ್ ನವೆಂಬರ್ 26ರಂದು ಸಲ್ಲಿಸಿರುವ ಮೆಮೊ ಅನುಸಾರ 577 ಮರಗಳನ್ನು ಕತ್ತರಿಸಬಹುದು. ಅಂತೆಯೇ 18 ಮರಗಳನ್ನು ಸ್ಥಳಾಂತರ ಮಾಡಬೇಕು. ಕತ್ತರಿಸುವ ಮರಗಳಿಗೆ ಪರ್ಯಾಯವಾಗಿ ತಜ್ಞರ ಸಮಿತಿ ಸೂಚಿಸಿದಂತೆ ಅರಣ್ಯೀಕರಣ ಕೈಗೊಳ್ಳಬೇಕು. ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸಬೇಕು ಮತ್ತು ಈ ಬಗ್ಗೆ ಸಮಗ್ರ ವರದಿ ಸಲ್ಲಿಸಬೇಕು' ಎಂದು ನಿಗಮಕ್ಕೆ ಆದೇಶಿಸಿದೆ.

ನಾಗವಾರ - ಗೊಟ್ಟಿಗೆರೆ ಮೆಟ್ರೊ ಮಾರ್ಗದಲ್ಲಿ ಮರಗಳನ್ನು ಕತ್ತರಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು, 'ಕರ್ನಾಟಕ ಮರ ಸಂರಕ್ಷಣಾ ಕಾಯ್ದೆ–1976 ಮತ್ತು ಕರ್ನಾಟಕ ಮರ ಸಂರಕ್ಷಣಾ ನಿಯಮ –1977ಕ್ಕೆ ವಿರುದ್ಧವಾಗಿ ಮರಗಳನ್ನು ಕತ್ತರಿಸಲಾಗುತ್ತಿದೆ' ಎಂದು ದೂರಿದ್ದರು.

ರಸ್ತೆ ವಿಸ್ತರಣೆ– ಮರ ಕಡಿಯಲು ಸಮ್ಮತಿ

ನೆಲಮಂಗಲ ಹಾಗೂ ಆನೇಕಲ್ ವ್ಯಾಪ್ತಿಯಲ್ಲಿ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮವು (ಕೆಆರ್‌ಐಡಿಎಲ್) ಅನುಷ್ಠಾನಗೊಳಿಸುತ್ತಿರುವ ರಸ್ತೆ ವಿಸ್ತರಣೆ ಯೋಜನೆಗೆ ಮರಗಳನ್ನು ಕಡಿಯುವುದಕ್ಕೂ ನ್ಯಾಯಪೀಠ ಇದೇ ವೇಳೆ ಅನುಮತಿ ನೀಡಿದೆ.

ರಸ್ತೆ ಅಗಲೀಕರಣಕ್ಕೆ ಅಡ್ಡಲಾಗಿರುವ 27 ಮರಗಳ ಪೈಕಿ 9 ಮರಗಳನ್ನು ಸ್ಥಳಾಂತರಿಸಬೇಕು. ಉಳಿದ 18 ಮರಗಳನ್ನು ಕತ್ತರಿಸಬಹುದು. ಅದಕ್ಕೆ ಪರ್ಯಾಯವಾಗಿ ತಜ್ಞರ ಸಮಿತಿ ಸೂಚಿಸುವಂತೆ ಅರಣ್ಯೀಕರಣಕ್ಕೆ ಕ್ರಮ ಕೈಗೊಳ್ಳಬೇಕು. ಶೀಘ್ರವೇ ಯೋಜನೆಯನ್ನು ಪೂರ್ಣಗೊಳಿಸಿ ಅನುಪಾಲನಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ನ್ಯಾಯಪೀಠ ಆದೇಶಿಸಿದೆ.

'ಸ್ವಚ್ಛತೆಗೆ ಆದ್ಯತೆ ನೀಡಿದ 86 ಗ್ರಾಮಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಜಿಲ್ಲೆ ವ್ಯಾಪ್ತಿಯ 86 ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛತೆ ಕಾಪಾಡಲಾಗಿದೆ ಎಂದು ಸಮುದಾಯ ಸಮೀಕ್ಷೆಯ ವರದಿ ತಿಳಿಸಿದೆ' ಎಂದು ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

'ಹೆಬ್ಬಗೋಡಿ, ಮಾದನಾಯಕನಹಳ್ಳಿ ನಗರಸಭೆ, ಆನೇಕಲ್, ಬೊಮ್ಮಸಂದ್ರ, ಚಂದಾಪುರ, ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ಅನೈರ್ಮಲ್ಯ ಶೌಚಾಲಯಗಳು ಕಂಡು ಬಂದಿರುವುದಿಲ್ಲ ಎಂಬುದು ವರದಿಯಲ್ಲಿ ಉಲ್ಲೇಖವಾಗಿದೆ' ಎಂದು ಅವರು ನೈರ್ಮಲ್ಯ ಕಾಪಾಡುವುದಕ್ಕೆ ಸಂಬಂಧಿಸಿದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾಹಿತಿ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮಿ ಇದ್ದರು.

ಪಶುವೈದ್ಯಕೀಯ ಕಾಲೇಜಿನ ಮೇಲೆ ಅರಣ್ಯಾಧಿಕಾರಿಗಳ ದಾಳಿ

ಶಿವಮೊಗ್ಗ: ಇಲ್ಲಿನ ಪಶು ವೈದ್ಯಕೀಯ ಕಾಲೇಜಿನ ಮೇಲೆ ಗುರುವಾರ ದಾಳಿ ನಡೆಸಿದ ಅರಣ್ಯ ಅಪರಾಧ ನಿಯಂತ್ರಣ ವಿಭಾಗದ ಅಧಿಕಾರಿಗಳು ಮೂರು ತಾಸು ಪ್ರಯೋಗಾಲಯದಲ್ಲಿನ ವಿವಿಧ ಪ್ರಾಣಿಗಳ ಅಂಗಾಗಗಳ ಪರಿಶೀಲನೆ ನಡೆಸಿದರು.

1972ರ ವನ್ಯಜೀವಿ ಕಾಯ್ದೆ ಉಲ್ಲಂಘಿಸಿ ಕಾಲೇಜಿನಲ್ಲಿ ಕೆಲವು ಪ್ರಾಣಿಗಳ ಅಂಗಾಂಗಗಳನ್ನು ಸಂರಕ್ಷಿಸಿ ಇಡಲಾಗಿದೆ. ಅರಣ್ಯ ಇಲಾಖೆಯ ಅನುಮತಿ ಪಡೆದಿಲ್ಲ ಎಂದು ಬೆಂಗಳೂರಿನ ಅರಣ್ಯ ಅಪರಾಧ ನಿಯಂತ್ರಣ ವಿಭಾಗಕ್ಕೆ ಬಂದ ದೂರು ಆಧರಿಸಿ ದಾಳಿ ನಡೆದಿದೆ.

ಬೆಂಗಳೂರಿನ ಎಸಿಎಫ್ ವೀರೇಶ್ ಗೌಡ, ಶಿವಮೊಗ್ಗದ ಡಿಎಫ್‌ಒ ರವೀಂದ್ರ ಕುಮಾರ್ ನೇತೃತ್ವದ ತಂಡ ಪರಿಶೀಲನಾ ಪ್ರಕ್ರಿಯೆ ನಡೆಸಿತು.

'ಅರಣ್ಯ ಇಲಾಖೆಯಲ್ಲಿ ವನ್ಯಜೀವಿ ವೈದ್ಯರ ಕೊರತೆ ಇರುವ ಕಾರಣ ಇಲಾಖೆಯ ಕೋರಿಕೆಯ ಮೇಲೆ ಕಾಲೇಜಿನ ವೈದ್ಯರ ತಂಡಗಳು ಕಾಡಿಗೆ ತೆರಳಿ ಮೃತ ವನ್ಯಜೀವಿಗಳ ಮರಣೋತ್ತರ ಪರೀಕ್ಷೆ ನಡೆಸುತ್ತಿದ್ದಾರೆ. ಕೆಲವು ಅಪರೂಪದ ಪ್ರಕರಣಗಳಲ್ಲಿ ಹೆಚ್ಚಿನ ಅಧ್ಯಯನದ ಅಗತ್ಯ ಕಂಡುಬಂದಾಗ ಕಾಲೇಜಿನ ಪ್ರಯೋಗಾಲಯಕ್ಕೆ ತಂದು ಪರೀಕ್ಷೆ ನಡೆಸಲಾಗಿದೆ. ಇದು ಹಲವು ವರ್ಷಗಳಿಂದ ನಡೆಯುತ್ತಿರುವ ಸಮನ್ವಯ ಪ್ರಕ್ರಿಯೆ. ಕಾಲೇಜಿನ ಹೆಚ್ಚುವರಿ ಹೊಣೆಗಾರಿಕೆ. ಈ ಕುರಿತು ಇಲಾಖೆಗೆ ಪತ್ರ ವ್ಯವಹಾರವನ್ನೂ ನಡೆಸಲಾಗಿದೆ. ಯಾರೋ ನೀಡಿದ ದೂರು ಆಧರಿಸಿ ಅಧಿಕಾರಿಗಳು ಮಹಜರು ನಡೆಸಿದ್ದಾರೆ. ಕಾನೂನು ಉಲ್ಲಂಘನೆ ಆಗಿಲ್ಲ' ಎಂದು ಕಾಲೇಜಿನ ಡೀನ್ ಡಾ.ಪ್ರಕಾಶ್ ನಡೂರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮಹಿಳೆ ಮೇಲೆ ಪಿಎಸ್‌ಐ ಹಲ್ಲೆ; ವಿಡಿಯೊ ವೈರಲ್

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಪಾಪಣ್ಣ ಮಹಿಳೆಯೊಬ್ಬರಿಗೆ ಥಳಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಒಡಿಶಾದ ಮಹಿಳೆ ದಿಬ್ಬೂರಹಳ್ಳಿ ಬಳಿ ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಅನೈತಿಕ ಸಂಬಂಧ ಕುರಿತು ವಿಚಾರಣೆಗಾಗಿ ಮಹಿಳೆಯನ್ನು ಠಾಣೆಗೆ ಕರೆತರಲಾಗಿತ್ತು. ಈ ವೇಳೆ ನೆಲದಲ್ಲಿ ಮಹಿಳೆಯನ್ನು ಕೂರಿಸಿ ಅವರ ಪಾದಗಳಿಗೆ ಪೊಲೀಸರು ಲಾಠಿಯಿಂದ ಹೊಡೆದಿದ್ದಾರೆ.

ಮಹಿಳೆ ಬೇರೊಬ್ಬರ ಜತೆ ಸಂಬಂಧ ಹೊಂದಿದ್ದರು. ಅವರಿಗೆ ಕರೆಯಿಸಿ ತಿಳಿ ಹೇಳಿ ಎಂದು ಆಕೆಯ ಮನೆಯವರೇ ದೂರು ನೀಡಿದ್ದರು. ಈ ಕಾರಣದಿಂದ ಠಾಣೆಗೆ ಕರೆಯಿಸಲಾಗಿತ್ತು ಎಂದು ಪಾಪಣ್ಣ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕಂದಾಯ ನಿರೀಕ್ಷಕ ಎಸಿಬಿ ಬಲೆಗೆ

ಕೊಪ್ಪ: ಜಮೀನಿನ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ತಾಲ್ಲೂಕು ಆಡಳಿತ ಸೌಧದಲ್ಲಿ ಗುರುವಾರ ಟಿ.ಕೆ. ಯಶ್ವಿತಾ ಎಂಬುವರಿಂದ ₹6 ಸಾವಿರ ಲಂಚ ಪಡೆಯುತ್ತಿದ್ದಾಗ ಹರಿಹರಪುರ ಕಂದಾಯ ನಿರೀಕ್ಷಕ ಕಿರಣ್ ಎಂಬುವರು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ. ಜಮೀನಿನ ಖಾತೆ ಬದಲಾವಣೆ ಮಾಡಿಕೊಡಲು ಕಿರಣ್ ₹8 ಸಾವಿರ ಲಂಚದ ಬೇಡಿಕೆ ಇಟ್ಟಿದ್ದರು.

ಇಂದಿನಿಂದ ವಿಎಚ್‌ಪಿ ಸಮಾವೇಶ

ಪ್ರಜಾವಾಣಿ ವಾರ್ತೆ

ಜುನಾಗಡ, ಗುಜರಾತ್: ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ಮೂರು ದಿನಗಳ ಸಮಾವೇಶ ಶುಕ್ರವಾರ ಇಲ್ಲಿ ಆರಂಭಗೊಳ್ಳಲಿದೆ.

ದೇವಸ್ಥಾನಗಳ ಆಡಳಿತವನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸುವುದು ಸೇರಿದಂತೆ ಹಲವಾರು ವಿಷಯಗಳ ಕುರಿತು ಈ ಸಮಾವೇಶದಲ್ಲಿ ಚರ್ಚಿಸಲಾಗುತ್ತದೆ ಎಂದು ವಿಎಚ್‌ಪಿ ಮೂಲಗಳು ಹೇಳಿವೆ.

'ಪರಿಸರ ಸಂರಕ್ಷಣೆ, ಮತಾಂತರ ವಿರೋಧಿ ಕಾಯ್ದೆ ಜಾರಿ ಹಾಗೂ ಸಾಮಾಜಿಕ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಸಹ ಈ ಸಮಾವೇಶದಲ್ಲಿ ಚರ್ಚಿಸಲಾಗುತ್ತದೆ' ಎಂದು ವಿಎಚ್‌ಪಿ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ತಿಳಿಸಿದ್ದಾರೆ.


ಮಿಲಿಂದ್ ಪರಾಂಡೆ

'ಕೆಲ ದೇವಸ್ಥಾನಗಳು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿವೆ. ಆಯಾ ಭಕ್ತರು–ಅನುಯಾಯಿಗಳಿಗೆ ದೇವಸ್ಥಾನಗಳ ಆಡಳಿತ ಜವಾಬ್ದಾರಿಯನ್ನು ಬಿಟ್ಟು ಕೊಡಬೇಕು ಎಂಬುದೇ ನಮ್ಮ ಪ್ರಮುಖ ಬೇಡಿಕೆಯಾಗಿದೆ' ಎಂದು ಸಂಘಟನೆಯ ರಾಷ್ಟ್ರೀಯ ಪ್ರಚಾರ–ಪ್ರಸಾರ ಪ್ರಮುಖ್ ವಿಜಯಶಂಕರ್ ತಿವಾರಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಆದರೆ, ಸರ್ಕಾರದ ನಿಯಂತ್ರಣದಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ಎಂಬ ಮಾಹಿತಿ ನೀಡಲಿಲ್ಲ.

ಪ್ರಜಾ ಮತ
ಜನತಂತ್ರದ ಹಬ್ಬ 2021

ಎಸ್‌ಎಡಿಗೆ ಮರಳಿದ ರಂಜಿತ್ ಸಿಂಗ್

ಚಂಡೀಗಢ (ಪಿಟಿಐ): ಶಿರೋಮಣಿ ಅಕಾಲಿ ದಳ (ಸಂಯುಕ್ತ) ಸಹ ಸಂಸ್ಥಾಪಕ ರಂಜಿತ್ ಸಿಂಗ್ ಬ್ರಹ್ಮಪುರ ಅವರು ಶಿರೋಮಣಿ ಅಕಾಲಿ ದಳಕ್ಕೆ (ಎಸ್‌ಎಡಿ) ಗುರುವಾರ ಮರು ಸೇರ್ಪಡೆ ಆದರು.

ರಂಜಿತ್, ಪಕ್ಷದ ಹಿರಿಯ ಉಪಾಧ್ಯಕ್ಷ ಉಜಾಗರ್ ಸಿಂಗ್ ವದಾಲಿ, ಪ್ರಧಾನ ಕಾರ್ಯದರ್ಶಿ ಕರ್ನೈಲ್ ಸಿಂಗ್ ಪೀರ್ ಮೊಹಮ್ಮದ್ ಮತ್ತು ಇತರ ನಾಯಕರು ಎಸ್‌ಎಡಿ ಸೇರಿದರು. ಎಸ್‌ಎಡಿ ಹಿರಿಯ ನಾಯಕ ಪ್ರಕಾಶ್ ಸಿಂಗ್ ಬಾದಲ್ ಮತ್ತು ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಮತ್ತಿತರರು ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

2018ರಲ್ಲಿ ರಂಜಿತ್ ಅವರನ್ನು ಎಸ್‌ಎಡಿಯಿಂದ ಉಚ್ಚಾಟಿಸಲಾಗಿತ್ತು. ಅವರು ಎಸ್‌ಎಡಿ (ತಕ್ಸಾಲಿ) ಎಂಬ ಪಕ್ಷ ಸ್ಥಾಪಿಸಿದ್ದರು. ಸುಖ್‌ದೇವ್ ಸಿಂಗ್ ದಿಂಡ್ಸಾ ಅವರನ್ನು ಎಸ್‌ಎಡಿ 2020ರಲ್ಲಿ ಉಚ್ಚಾಟಿಸಿತು. ಅವರು ಎಸ್‌ಎಡಿ (ಡೆಮಾಕ್ರೆಟಿಕ್) ಎಂಬ ಪಕ್ಷ ಸ್ಥಾಪಿಸಿದ್ದರು. ಬಳಿಕ ದಿಂಡ್ಸಾ ಮತ್ತು ರಂಜಿತ್ ಇಬ್ಬರೂ ತಮ್ಮ ಪಕ್ಷಗಳನ್ನು ವಿಲೀನಗೊಳಿಸಿ ಎಸ್‌ಎಡಿ (ಸಂಯುಕ್ತ) ಎಂಬ ಪಕ್ಷಕ್ಕೆ ಚಾಲನೆ ನೀಡಿದ್ದರು.

ಸ್ವಕ್ಷೇತ್ರ ವಾರಾಣಸಿಯಲ್ಲಿ ₹2,095 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ

ಗೋವು ತಾಯಿ, ಪವಿತ್ರ: ಮೋದಿ

ಪ್ರಜಾವಾಣಿ ವಾರ್ತೆ

ಲಖನೌ: 'ಗೋವು ಹಲವರಿಗೆ ತಾಯಿ ಮತ್ತು ಪವಿತ್ರ. ಯಾರು ಇದರಲ್ಲಿ ಅಪರಾಧವನ್ನು ಹುಡುಕುತ್ತಾರೊ ಅವರಿಗೆ, ಕೋಟ್ಯಂತರ ಜನರ ಜೀವನೋಪಾಯ ಜಾನುವಾರುಗಳನ್ನು ಅವಲಂಬಿಸಿದೆ ಎಂಬುದು ಅರಿವಾಗಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಹೇಳಿದರು.

ತಮ್ಮ ಲೋಕಸಭೆ ಕ್ಷೇತ್ರ ವಾರಾಣಸಿಯ ಕಾರ್ಕಿಯಾಂವ್‌ನಲ್ಲಿ ₹475 ಕೋಟಿ ವೆಚ್ಚದಲ್ಲಿ ನಿರ್ಮಾಣ ವಾಗುತ್ತಿರುವ 'ಬನಾಸ್ ಡೇರಿ ಸಂಕುಲ್' ಹಾಲಿನ ಘಟಕದ ಶಿಲಾನ್ಯಾಸ ನೆರವೇರಿಸಿದರು. ಇದರ ಜತೆಗೆ, ಸುಮಾರು ₹2,095 ಕೋಟಿ ಮೊತ್ತದ 27 ಯೋಜನೆಗಳಿಗೆ ಅವರು ಚಾಲನೆ ಮತ್ತು ಶಿಲಾನ್ಯಾಸ ನೆರವೇರಿಸಿದರು. ಬಳಿಕ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು.

'ಹಿಂದೂ ಧರ್ಮದ ಪ್ರಾಚೀನ ಗ್ರಂಥಗಳನ್ನು ಉಲ್ಲೇಖಿಸಿದ ಅವರು, ಜನರು ತಮ್ಮ ಸುತ್ತಲೂ ಗೋವುಗಳು ಇರಬೇಕು ಎಂದು ಬಯಸುತ್ತಿದ್ದರು. ಇದು ಗೋವುಗಳಿಗೆ ನೀಡುವ ಮಹತ್ವವಾಗಿತ್ತು' ಎಂದರು.

ಹಾಲು ಉತ್ಪಾದನೆ ಕುರಿತು ಮಾತನಾಡಿದ ಅವರು, ಭಾರತ ₹8.5 ಲಕ್ಷ ಕೋಟಿ ಮೌಲ್ಯದ ಹಾಲು ಉತ್ಪಾದನೆ ಮಾಡಿದೆ. ಎಂಟು ಕೋಟಿಗೂ ಹೆಚ್ಚು ಕುಟುಂಬಗಳ ಜೀವನ ಪಶುಸಂಗೋಪನೆ ಮೇಲೆ ಆಧಾರಿತವಾಗಿದೆ ಎಂದರು.

ಪ್ರತಿಸ್ಪರ್ಧಿ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ರಾಜ್ಯದ ಅಭಿವೃದ್ಧಿಗೆ ನಮ್ಮ ಡಬಲ್ ಇಂಜಿನ್ ಸರ್ಕಾರ (ಕೇಂದ್ರ ಮತ್ತು ರಾಜ್ಯ) ತೆಗೆದುಕೊಳ್ಳುತ್ತಿರುವ ಕ್ರಮಗಳಿಂದ ಕೆಲ ಜನರಿಗೆ ಸಿಟ್ಟು ಬಂದಿದೆ. ರಾಜ್ಯದ ಪ್ರಗತಿಗೆ ನಾವು ಮತ್ತಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದನ್ನು ನೋಡಿ ಆ ಸಿಟ್ಟು ಮತ್ತಷ್ಟು ಹೆಚ್ಚಾಗಿದೆ' ಎಂದರು.

ವಿಪಕ್ಷಗಳ ನಿಘಂಟಿನಲ್ಲಿ ಅಭಿವೃದ್ಧಿ ಎಂದರೆ ನೋಟು, ಮಾಫಿಯಾ ರಾಜ್ಯ, ಸ್ವಜನ ಪಕ್ಷಪಾತಕ್ಕೆ ಉತ್ತೇಜನ, ಮನೆಗಳು ಮತ್ತು ಭೂಮಿಯನ್ನು ಕಬಳಿಸುವುದು ಎಂದರ್ಥ. ಆದರೆ, ನಮ್ಮ ಆದ್ಯತೆ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' (ಎಲ್ಲರ ಜೊತೆ, ಎಲ್ಲರ ವಿಕಾಸ) ಎಂದರು.

ತಮ್ಮ ಎದುರಾಳಿಗಳಿಗೆ ಕಾಶಿ ವಿಶ್ವನಾಥ ದೇವಾಲಯ ವೈಭವ ಹೆಚ್ಚಿಸುವುದು ಇಷ್ಟವಿಲ್ಲ ಎಂದರು.


ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಭಿವೃದ್ಧಿ ಯೋಜನೆಯೊಂದರ ಮಾದರಿಯನ್ನು ವಾರಾಣಸಿಯಲ್ಲಿ ವೀಕ್ಷಿಸಿದರು–ಪಿಟಿಐ ಚಿತ್ರ

ಹಿಂದಿನ ಸರ್ಕಾರಗಳ ರೈತ ವಿರೋಧಿ ನೀತಿಗಳು ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದವು. ಹಲವರು ಕೃಷಿಯಿಂದ ದೂರ ಸರಿದರು
ಯೋಗಿ ಆದಿತ್ಯನಾಥ
ಉತ್ತರ ಪ್ರದೇಶ ಮುಖ್ಯಮಂತ್ರಿ

ಬಿಜೆಪಿ, ಎಸ್‌ಪಿ ಮತ್ತಿತರ ಪಕ್ಷಗಳು ಚುನಾವಣೆಗೆ ಕೋಮು ಬಣ್ಣ ಬಳಿಯುತ್ತಿವೆ. ಬಿಎಸ್‌ಪಿಯು ಪ್ರತಿ ಹಳ್ಳಿ, ಮನೆಗೆ ತೆರಳಿ ಈ ಕುರಿತು ಜನರನ್ನು ಎಚ್ಚರಿಸಲಿದೆ
ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಅಯೋಧ್ಯೆ ಭೂಹಗರಣದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಲಿ: ಪ್ರಿಯಾಂಕಾ

ನವದೆಹಲಿ (ಪಿಟಿಐ): ಅಯೋಧ್ಯೆಯ ರಾಮ ಮಂದಿರ ಭೂಮಿ ಹಗರಣದ ತನಿಖೆಯಲ್ಲಿ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಅವರು, ಈ ಹಗರಣ ಕುರಿತು ಉತ್ತರ ಪ್ರದೇಶ ಸರ್ಕಾರ ತನಿಖೆಗೆ ಆದೇಶಿಸಿರುವುದು ಕೇವಲ ಕಣ್ಣೊರೆಸುವ ತಂತ್ರ. ಸುಪ್ರೀಂ ಕೋರ್ಟ್ ಆದೇಶದ ಬಳಿಕವೇ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಆಗುತ್ತಿದೆ. ಅದಕ್ಕಾಗಿ ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಮಧ್ಯ ಪ್ರವೇಶಿಸಬೇಕು. ರಾಮ ಮಂದಿರಕ್ಕೆ ಸಂದಾಯವಾಗಿದ್ದ ದೇಣಿಗೆಯನ್ನು ದುರ್ಬಳಕೆ ಮತ್ತು ಲೂಟಿ ಮಾಡುವುದರ ಮೂಲಕ ಬಿಜೆಪಿ ನಾಯಕರು ಜನರ ಧಾರ್ಮಿಕ ಭಾವನೆ ಮತ್ತು ನಂಬಿಕೆಯನ್ನು ಮಾರಾಟ ಮಾಡಿದರು ಎಂದರು. ಈ ಹಗರಣ ಕುರಿತು ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಏಕೆ ಮೌನವಹಿಸಿದ್ದಾರೆ ಎಂದು ಪ್ರಶ್ನಿಸಿದರು.

ಬಿಜೆಪಿ ನಾಯಕರು, ಶಾಸಕರು ಮತ್ತು ಕೆಲ ಅಧಿಕಾರಿಗಳು ರಾಮ ಮಂದಿರಕ್ಕೆ ಸೇರಿದ್ದ ಜಾಗವನ್ನು ಮಾರಾಟ ಮಾಡಿದ್ದಾರೆ ಎಂದು ಪತ್ರಿಕೆಯೊಂದು ವರದಿ ಮಾಡಿತ್ತು.

'ರಾಹುಲ್ ಗಾಂಧಿ ಹಿಂದೂ ಅಲ್ಲ'

ಬಲಿಯಾ (ಪಿಟಿಐ): ಹಿಂದೂ ಮತ್ತು ಹಿಂದುತ್ವ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನೀಡುತ್ತಿರುವ ವ್ಯಾಖ್ಯಾನವನ್ನು ಟೀಕಿಸಿರುವ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಅವರು ರಾಹುಲ್ ಒಬ್ಬ ಹಿಂದೂ ಅಲ್ಲ ಎಂದಿದ್ದಾರೆ.

ಬಲಿಯಾದಲ್ಲಿ ಮಾತನಾಡಿದ ಅವರು, 'ಚುನಾವಣೆ ಬಂದಾಗ ರಾಹುಲ್ ಗಾಂಧಿ ಹೀಗೆ ಮಾತನಾಡುತ್ತಾರೆ. ಆದರೆ ಅವರು ಹಿಂದೂ ಅಲ್ಲ' ಎಂದರು.

ದೇಶದಲ್ಲಿ ನಡೆಯುತ್ತಿರುವ ಥಳಿತ ಪ್ರಕರಣವನ್ನು ರಾಹುಲ್ ಟೀಕಿಸಿರುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, 'ರಾಹುಲ್‌ಗೆ ದೇಶದಲ್ಲಿ ಏನು ನಡೆಯುತ್ತಿದೆ ಎಂದು ಗೊತ್ತಿಲ್ಲ' ಎಂದು ಹೇಳಿದರು.

ಪುಲ್ವಾಮದಲ್ಲಿ ಸ್ಫೋಟಕ ಪತ್ತೆ: ತಪ್ಪಿದ ಭಾರಿ ಅನಾಹುತ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಬುಧವಾರ ಸುಧಾರಿತ ಸ್ಫೋಟಕ ಸಾಮಗ್ರಿ (ಐಇಡಿ) ಪತ್ತೆಯಾಗಿದ್ದು, ಭದ್ರತಾ ಪಡೆಗಳು ಸ್ಫೋಟಕವನ್ನು ನಾಶಪಡಿಸುವ ಮೂಲಕ ಭಾರಿ ಅನಾಹುತವನ್ನು ತಪ್ಪಿಸಿವೆ.

ಗುಪ್ತಚರ ದಳದ ಖಚಿತ ಮಾಹಿತಿ ಮೇರೆಗೆ ಇಲ್ಲಿನ ವಾನ್‌ಪೋರಾ ಪ್ರದೇಶದ ನೆವಾ–ಶ್ರೀನಗರ ರಸ್ತೆಯಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಲಾಗಿತ್ತು.ಈ ವೇಳೆ ಈ ವೇಳೆ ರಸ್ತೆ ಬದಿಯಲ್ಲಿ ಸುಮಾರು 5 ಕೆ.ಜಿ ತೂಕದ ಸುಧಾರಿತ ಸ್ಫೋಟಕ ಪತ್ತೆಯಾಗಿದ್ದು, ಡಬ್ಬಿವೊಂದರಲ್ಲಿ ಹಾಕಿಡಲಾಗಿತ್ತು. ದೊಡ್ಡ ಗಾತ್ರದ ಸ್ಫೋಟಕವನ್ನು ಭದ್ರತಾ ಪಡೆಗಳು ಪತ್ತೆ ಹಚ್ಚುವ ಮೂಲಕ ಭಾರಿ ಅನಾಹುತವನ್ನು ತಪ್ಪಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಪತ್ತೆಯಾದ ಸ್ಫೋಟಕವನ್ನು ಪೊಲೀಸ್ ಹಾಗೂ ಸೇನೆಯ ಬಾಂಬ್ ನಿಷ್ಕ್ರಿಯ ತಂಡ ನಾಶಪಡಿಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಆರಂಭಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

ಪಿಎಂಎವೈಜಿ: ಆಗಸ್ಟ್ 15ರೊಳಗೆ 2 ಕೋಟಿ ಮನೆ ನಿರ್ಮಾಣ ಗುರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಮಂತ್ರಿ ಆವಾಸ್ ಯೋಜನಾ– ಗ್ರಾಮೀಣ (ಪಿಎಂಎವೈ–ಜಿ) ಅಡಿ ಮುಂದಿನ ವರ್ಷ ಆಗಸ್ಟ್ 15ರೊಳಗೆ 2.02 ಕೋಟಿ ಮನೆಗಳನ್ನು ನಿರ್ಮಿಸುವಂತೆ ಕೇಂದ್ರವು ಕರ್ನಾಟಕ ಸರ್ಕಾರಕ್ಕೆ ಗುರಿ ನಿಗದಿ ಮಾಡಿದೆ.

'ಈ ಯೋಜನೆಯಡಿ ಕರ್ನಾಟಕಕ್ಕೆ ಹಂಚಿಕೆ ಮಾಡಲಾಗಿರುವ ಒಟ್ಟು 2.95 ಕೋಟಿ ಮನೆಗಳ ನಿರ್ಮಾಣ ಕಾರ್ಯವನ್ನು 2024ರ ಮಾರ್ಚ್ ಒಳಗಾಗಿ ಪೂರ್ಣಗೊಳಿಸಲು ರಾಜ್ಯಕ್ಕೆ ಸೂಚಿಸಲಾಗಿದೆ' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವೆ ಸಾಧ್ವಿ ನಿರಂಜನ ಜ್ಯೋತಿ ಹೇಳಿದ್ದಾರೆ.

'ಯೋಜನೆಯಡಿ ಕರ್ನಾಟಕಕ್ಕೆ 2019–20ನೇ ಸಾಲಿಗೆ 86,000, 2020–21ನೇ ಸಾಲಿಗೆ 1,51,715 ಮನೆಗಳನ್ನು ಹಂಚಿಕೆ ಮಾಡಲಾಗಿತ್ತು' ಎಂದು ಅವರು ತಿಳಿಸಿದ್ದಾರೆ.

2016–17 ರಿಂದ 2018–19ರ ವರೆಗೆ ಅವಧಿಯಲ್ಲಿ ಮೊದಲ ಹಂತದಲ್ಲಿ ರಾಜ್ಯಕ್ಕೆ 1,24,088 ಮನೆಗಳನ್ನು ನಿರ್ಮಿಸುವ ಗುರಿ ನಿಗದಿ ಮಾಡಲಾಗಿತ್ತು.

ಈ ಅವಧಿಗೆ ಸಂಬಂಧಿಸಿದಂತೆ, 1,11,108 ಫಲಾನುಭವಿಗಳಿಗೆ ಸಹಾಯಧನದ ಮೊದಲ ಕಂತು ಹಾಗೂ 1,01,218 ಫಲಾನುಭವಿಗಳಿಗೆ ಎರಡನೇ ಕಂತನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ

ಗೋಪ್ಯ ಮಾಹಿತಿ ಸೋರಿಕೆ; ಇಬ್ಬರ ವಿರುದ್ಧ ಸಿಬಿಐ ದೋಷಾರೋಪ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರ ವಿರುದ್ಧದ ಲಂಚ ಆರೋಪಕ್ಕೆ ಸಂಬಂಧಿಸಿದಂತೆ ಮಾಹಿತಿ ಸೋರಿಕೆ ಆರೋಪದಲ್ಲಿ ಬಂಧಿತರಾದ ಸಿಬಿಐ ಅಧಿಕಾರಿ ಮತ್ತು ವಕೀಲರೊಬ್ಬರಿಂದ ಹೇಳಿಕೆ ಒಳಗೊಂಡ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಮಾಜಿ ಸಚಿವರ ವಿರುದ್ಧದ ಪ್ರಕರಣವನ್ನು ಬುಡಮೇಲು ಮಾಡಲು ಯತ್ನಿಸಿದ ಸಂಸ್ಥೆಯ ಅಧಿಕಾರಿ ಮತ್ತು ವಕೀಲರ ವಿರುದ್ಧ ಸಿಬಿಐ ದೋಷಾರೋಪ ಪಟ್ಟಿ ಸಿದ್ಧಪಡಿಸಿದೆ ಎಂದು ಸಹ ಅವರ ತಿಳಿಸಿದ್ದಾರೆ.

ದೇಶಮುಖ್ ವಿರುದ್ಧದ ಪ್ರಕರಣದ ತನಿಖಾಧಿಕಾರಿ ಸುಬೋಧ್ ಕುಮಾರ್ ಜೈಸ್ವಾಲ್ ಅವರು ದಾಖಲಿಸಿಕೊಂಡ ಹೇಳಿಕೆಯನ್ನು ಹೊಂದಿದ್ದ ಪೆನ್‌ಡ್ರೈವ್ ಅನ್ನು ಸಿಬಿಐನ ಸಬ್–ಇನ್‌ಸ್ಪೆಕ್ಟರ್ ಅಭಿಷೇಕ್ ತಿವಾರಿ ಅವರಿಂದ ಹಾಗೂ ವಕೀಲ ಆನಂದ ದಾಗಾ ಅವರ ದೂರವಾಣಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇಲ್ಲಿಯ ವಿಶೇಷ ನ್ಯಾಯಾಲಯವೊಂದರ ಮುಂದೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ. ಪ್ರಕರಣದ ತನಿಖಾಧಿಕಾರಿ ಗಳಲ್ಲಿ ತಿವಾರಿ ಒಬ್ಬರಾಗಿದ್ದರು.

ಮಗನ ಹುಟ್ಟುಹಬ್ಬ ಸಂಭ್ರಮಾಚರಣೆ: ಗುಂಡು ಸಿಡಿದು ತಾಯಿ ಸಾವು

ಲಖಿಂಪುರ ಖೇರಿ: ಮಗನ ಹುಟ್ಟುಹಬ್ಬವನ್ನು ಆಚರಿಸುವಾಗ ಆಕಸ್ಮಿಕವಾಗಿ ಸಿಡಿದ ಗುಂಡಿಗೆ ತಾಯಿಯೊಬ್ಬಳು ಬಲಿಯಾಗಿರುವ ಘಟನೆ ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಇತ್ತೀಚೆಗೆ ನಡೆದಿರುವುದು ವರದಿಯಾಗಿದೆ. ಅನಿತಾ ವರ್ಮಾ (28) ಮೃತಪಟ್ಟವರು.

ಪ್ರದೀಪ್ ವರ್ಮಾ ಎಂಬ ರೈತನ ಪತ್ನಿಯಾಗಿರುವ ಅನಿತಾ ತಮ್ಮ ಮಗನ ಮೂರನೇ ವರ್ಷದ ಹುಟ್ಟುಹಬ್ಬವನ್ನು ಮನೆಯಲ್ಲಿ ಅದ್ಧೂರಿಯಾಗಿ ಆಯೋಜಿಸಿದ್ದರು. ಈ ವೇಳೆ ಕೆಲ ಅನಿತಾ ಸಂಬಂಧಿಗಳು ಸಂಭ್ರಮಾಚರಣೆ ಮಾಡುವ ಭರದಲ್ಲಿ ಪಿಸ್ತೂಲ್‌ನಿಂದ ಸಿಡಿಸಿದ ಗುಂಡು ಅನಿತಾ ಪ್ರಾಣಕ್ಕೆ ಎರವಾಗಿದೆ. ಜೈರಾಂ ವರ್ಮಾ ಎಂಬವರನ್ನು ಬಂಧಿಸಲಾಗಿದೆ.


ಮತಾಂತರ ನಿಷೇಧ ಮಸೂದೆ ಬಗ್ಗೆ ಹೇಳಿಕೆ

'ಬಸವಣ್ಣ ಕಟ್ಟಿದ ಮಾನವ ಧರ್ಮವನ್ನು, ಅವರ ಹೆಸರಿಟ್ಟುಕೊಂಡಿರುವ ಮುಖ್ಯಮಂತ್ರಿಯ ಮೂಲಕವೇ ಒಡೆಯುವ ಪ್ರಯತ್ನ ನಡೆದಿರುವುದು ವಿಪರ್ಯಾಸ'

ಜಾರಿಗೆ ಮುನ್ನ ಸದನ ಸಮಿತಿ ರಚಿಸಿ: ವಿಶ್ವನಾಥ್

ಮೈಸೂರು: 'ಮತಾಂತರ ನಿಷೇಧ ಮಸೂದೆ ಸಂಬಂಧ ಸದನ ಸಮಿತಿ ರಚಿಸಿ, ಸಾಧಕ– ಬಾಧಕಗಳ ಬಗ್ಗೆ ಚರ್ಚಿಸಿದ ಬಳಿಕವೇ ಅದನ್ನು ಜಾರಿಗೊಳಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಆಗ್ರಹಿಸಿದರು.

'ಸದನ ಸಮಿತಿ ಸದಸ್ಯರು ಎಲ್ಲ ಧರ್ಮಗಳ ಮುಖಂಡರನ್ನು ಭೇಟಿಯಾಗಿ ಸಲಹೆ ಪಡೆದು ಚರ್ಚಿಸಬೇಕು' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.



'ಕಾಯ್ದೆಯ ಮೂಲಕ ಬಸವಣ್ಣನ ಮೂಲ ತತ್ವಗಳಿಗೆ, ವೀರಶೈವ ಧರ್ಮಕ್ಕೆ ಧಕ್ಕೆಯಾಗುತ್ತಿದ್ದರೂ ಮಠಗಳು ಬಾಯಿ ಬಿಡುತ್ತಿಲ್ಲ. ಬಸವಣ್ಣನ ಹೆಸರಿನಲ್ಲಿ ಪಾರಿತೋಷಕ ನೀಡುವ ಚಿತ್ರದುರ್ಗದ ಸ್ವಾಮೀಜಿ ಬಾಯಿ ಮುಚ್ಚಿಕೊಂಡಿದ್ದಾರೆ. ಸರ್ಕಾರದ ಅನುದಾನದ ಅನುಗ್ರಹ ಅವರ ಬಾಯಿ ಮುಚ್ಚಿಸಿರಬಹುದೇ? ಅಹಿಂದ ಸ್ವಾಮೀಜಿಗಳ ಬಾಯಿ ಕಟ್ಟಿರುವುದು ಯಾರು? ಸಾಹಿತಿಗಳು, ಚಿಂತಕರೂ ಚಕಾರ ಎತ್ತದೆ, ರಾಜ್ಯೋತ್ಸವ ಪ್ರಶಸ್ತಿಗಷ್ಟೇ ಸೀಮಿತರಾಗಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾಯ್ದೆಯ ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ. ಆ ಮೂಲಕ ಮಾನವ ಧರ್ಮದ ಪರವಿದ್ದ ಬಸವಣ್ಣ, ಗಾಂಧಿ, ಅಂಬೇಡ್ಕರ್, ಕುವೆಂಪು ಅವರನ್ನು ಜೈಲಿಗೆ ಹಾಕಲು ಸಾಧ್ಯವೇ? ಆರ್‌ಎಸ್‌ಎಸ್ ನಾಯಕ ಸಿಂಘಾಲ್, ಮುರಳಿ ಮನೋಹರ ಜೋಷಿ, ಅಡ್ವಾಣಿ, ಸುಬ್ರಹ್ಮಣ್ಯಸ್ವಾಮಿ, ಪ್ರವೀಣ್ ತೊಗಾಡಿಯ ಅವರ ಹೆಣ್ಣುಮಕ್ಕಳು, ಬಾಳಠಾಕ್ರೆ ಮೊಮ್ಮಗಳು ಮುಸ್ಲಿಮರನ್ನು ಮದುವೆಯಾಗಿದ್ದಾರೆ. ನಟರಾದ ಶಾರುಖ್ ಖಾನ್, ಸೈಫ್ ಅಲಿಖಾನ್, ಅರ್ಬಾಜ್ ಖಾನ್ ಹಿಂದೂ ಹೆಣ್ಣುಮಕ್ಕಳನ್ನು ಮದುವೆಯಾಗಿದ್ದಾರೆ. ಅವರನ್ನೆಲ್ಲಾ ಜೈಲಿಗಟ್ಟಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಬೆಳಗಾವಿಯಲ್ಲಿ ದಾಂದಲೆ ನಡೆಸುತ್ತಿರುವ ಎಂಇಎಸ್ ಸಂಘಟನೆಯನ್ನು ನಿಷೇಧಿಸಬೇಕು. ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಸಭ್ಯ ಭಾಷೆ ಬಳಸಬೇಕು' ಎಂದು ಕೋರಿದರು.

'ನಿಮ್ಮ ಮಕ್ಕಳಿಗೆ ಬೇರೆ ದೇಶಗಳ ಗ್ರೀನ್ ಕಾರ್ಡ್ ಬೇಕು. ಅಲ್ಲಿ ಶಿಕ್ಷಣ ಪಡೆಯಲು, ಉದ್ಯಮ ಸ್ಥಾಪಿಸಲು ಹಾತೊರೆಯುವ ನೀವು ಕ್ರಿಶ್ಚಿಯನ್ನರು, ಮುಸ್ಲಿಮರಿಗೆ ಯಾಕೆ ಕಿರುಕುಳ ಕೊಡುತ್ತೀರಿ?' ಎಂದರು.

ಸಚಿವರ ತಂತ್ರಕ್ಕೆ ವಿರೋಧ ಪಕ್ಷದ ನಾಯಕ ಗಲಿಬಿಲಿ • ಕಲಾಪದ ದಿಕ್ಕು ಬದಲಿಸಿದ ಕಡತ

ಸರ್ಕಾರದ ಅಸ್ತ್ರಕ್ಕೆ ಸಿದ್ದರಾಮಯ್ಯ ಪ್ರತ್ಯಸ್ತ್ರ

ಪ್ರಜಾವಾಣಿ ವಾರ್ತೆ



ಮತಾಂತರ ನಿಷೇಧ ಕಾಯ್ದೆ ವಿರೋಧಿಸಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಶಾಸಕರು ಸಭಾಧ್ಯಕ್ಷರ ಪೀಠದ ಮುಂದೆ ಗುರುವಾರ ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಳಗಾವಿ (ಸುವರ್ಣ ವಿಧಾನಸೌಧ): ಮತಾಂತರ ನಿಷೇಧ ಕಾಯ್ದೆ ವಿರುದ್ಧ ಸಮರ ಸಾರಲು ಹುರುಪಿನೊಂದಿಗೆ ವಿಧಾನಸಭೆ ಕಲಾಪಕ್ಕೆ ದಾಂಗುಡಿಯಿಟ್ಟ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕಲು ಸರ್ಕಾರ ಮುಂದಿಟ್ಟ ಕಡತ, ಗುರುವಾರದ ಚರ್ಚೆಯ ದಿಕ್ಕನ್ನೇ ಬದಲಿಸಿಬಿಟ್ಟಿತು.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯದ ಮಸೂದೆಯ ಕರಡನ್ನು ಸಿದ್ಧಪಡಿಸಲಾಗಿತ್ತು' ಎಂದು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ದಾಖಲೆಗಳನ್ನು ಪ್ರದರ್ಶಿಸಿದ್ದರಿಂದ ಸಿದ್ದರಾಮಯ್ಯ ಗಲಿಬಿಲಿಗೆ ಒಳಗಾದರು. ಅದಕ್ಕೆ ಪೂರಕವೆಂಬಂತೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ಟಿಪ್ಪಣಿ ಬರೆದು ಸಹಿ ಹಾಕಿದ್ದ ದಾಖಲೆಯನ್ನೂ ತೋರಿಸಿದರು. ಇದರಿಂದಾಗಿ ಒಂದುಹಂತದಲ್ಲಿ ಸಿದ್ದರಾಮಯ್ಯ ಕಂಗೆಟ್ಟರು.

ಭೋಜನದ ವಿರಾಮದ ಬಳಿಕ ಹಳೆಯ ಕಡತಗಳ ಜತೆ ಸದನಕ್ಕೆ ಬಂದ ಸಿದ್ದರಾಮಯ್ಯ, ಅದರ ಮೂಲಕವೇ ಸಚಿವರು, ಬಿಜೆಪಿ ಸದಸ್ಯರನ್ನು ಹಿಮ್ಮೆಟ್ಟಿಸಿ, ತಮ್ಮ ಪಕ್ಷ ಮತಾಂತರ ನಿಷೇಧದ ಪರ ಇಲ್ಲ ಎಂದು ಪ್ರತಿಪಾದಿಸಿದರು.

2009ರಲ್ಲಿ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಆರೆಸ್ಸೆಸ್ ಹಿನ್ನೆಲೆಯವರಾದ ಎಂ.ಚಿದಾನಂದಮೂರ್ತಿ, ಕೃ.ನರಹರಿ, ಮೈ.ಚ.ಜಯದೇವ, ಎಸ್.ಆರ್.ಲೀಲಾ, ಮತ್ತೂರು ಕೃಷ್ಣಮೂರ್ತಿ ಸೇರಿದಂತೆ ಹಲವರು ಮತಾಂತರ ನಿಷೇಧ ಕಾಯ್ದೆ ತರುವಂತೆ ಮನವಿ ಸಲ್ಲಿಸಿದ್ದರು. ಅಲ್ಲಿನ ಕಾಯ್ದೆಯಲ್ಲಿದ್ದ ಮಧ್ಯಪ್ರದೇಶದ ಹೆಸರನ್ನು ತೆಗೆದು ಕರ್ನಾಟಕದ ಹೆಸರು ಹಾಕಿದರೆ ಸಾಕು ಎಂದೂ ಸಲಹೆ ನೀಡಿದ್ದರು. ನ್ಯಾಯಮೂರ್ತಿ ರಾಮಾ ಜೋಯಿಸ್ ಅವರಿಂದ ಪಡೆಯಬಹುದು ಎಂಬುದಾಗಿಯೂ ಸಲಹೆ ನೀಡಿದ್ದರು' ಎಂದು ತಿರುಗೇಟು ನೀಡಿದರು.

ಮಸೂದೆ ಸಿದ್ಧಪಡಿಸುವಂತೆ ಕಾನೂನು ಆಯೋಗಕ್ಕೆ ಯಡಿಯೂರಪ್ಪ ಶಿಫಾರಸು ಮಾಡಿದ್ದರು. 2014ರಲ್ಲಿ ಆಯೋಗವು ಮಸೂದೆ ಸಿದ್ಧಪಡಿಸಿಕೊಟ್ಟಿತ್ತು. ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆ ಮಸೂದೆ ವಿವಿಧ ಇಲಾಖೆ ಮೂಲಕ ನನ್ನ ಮುಂದೆ ಬಂದಿತ್ತು. ಸಚಿವ ಸಂಪುಟ ಸಭೆ ಮುಂದೆ ಕಡತ ಮಂಡಿಸಿ ಎಂದು ಟಿಪ್ಪಣಿ ಬರೆದೆ. ನಂತರ ಎರಡೂವರೆ ವರ್ಷ ನಾನೇ ಮುಖ್ಯಮಂತ್ರಿಯಾಗಿದ್ದೆ. ಮತಾಂತರ ನಿಷೇಧಕ್ಕೆ ನಾವು ವಿರೋಧ ಇದ್ದುದರಿಂದ ಅದನ್ನು ಸಚಿವ ಸಂಪುಟದ ಮುಂದೆ ತರಲಿಲ್ಲ' ಎಂದು ಹೇಳಿದರು.

'ನನ್ನ ಕಾಲದಲ್ಲಿ ಮನವಿ ಸ್ವೀಕರಿಸಿದ್ದು ನಿಜ. ಇದರಲ್ಲಿ ಮುಚ್ಚುಮರೆ ಇಲ್ಲ. ಆ ಬಳಿಕ ಹಲವು ಪ್ರಕ್ರಿಯೆಗಳು ನಡೆದಿವೆ. ನಿಮ್ಮ ಕಾಲದಲ್ಲಿ ಮಸೂದೆ ಸಿದ್ಧಪಡಿಸಿದ್ದು ನಿಜವಲ್ಲವೇ' ಎಂದು ಯಡಿಯೂರಪ್ಪ ಪ್ರಶ್ನಿಸಿದರು.

ಬೆಳಿಗ್ಗೆ ನಡೆದಿದ್ದು ಏನು?: ಬೆಳಿಗ್ಗೆ 10.15ಕ್ಕೆ ಕಲಾಪ ಆರಂಭವಾಗುತ್ತಿದ್ದಂತೆ ಮಸೂದೆ ಯಾಕೆ ತಂದಿದ್ದೇವೆ ಎಂಬ ಬಗ್ಗೆ ಗೃಹ ಸಚಿವ ಆರಗ ಜ್ಞಾನೇಂದ್ರ ವಿವರಿಸಿದರು. ಬಳಿಕ ಸಿದ್ದರಾಮಯ್ಯ ಅವರಿಗೆ ಮಾತನಾಡಲು ಸಭಾಧ್ಯಕ್ಷ ಕಾಗೇರಿ ಅವಕಾಶ ನೀಡಿದರು. ಆಗ ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, 'ಕಾನೂನು ಸಚಿವರು ಪೂರಕವಾಗಿ ಕೆಲವು ವಿಷಯಗಳನ್ನು ಸಭೆಯ ಮುಂದಿಡಲಿದ್ದಾರೆ' ಎಂದರು.

ಜೆ.ಸಿ.ಮಾಧುಸ್ವಾಮಿ, 'ಕಾಂಗ್ರೆಸ್ ಸರ್ಕಾರವೇ ಮಸೂದೆಯ ಕರಡು ಸಿದ್ಧಪಡಿಸುವಂತೆ ಕರ್ನಾಟಕ ಕಾನೂನು ಆಯೋಗಕ್ಕೆ ಸೂಚಿಸಲಾಗಿತ್ತು. ಈ ಕರಡನ್ನು ಪರಿಶೀಲನೆ ನಡೆಸಿ ಸಚಿವ ಸಂಪುಟದ ಮುಂದೆ ಮಂಡಿಸುವಂತೆ ಸಿದ್ದರಾಮಯ್ಯ ಸೂಚನೆ ನೀಡಿದ್ದರು. ಈ ಕರಡಿನಲ್ಲಿದ್ದ ಅಂಶಗಳಿಗೆ ಹೆಚ್ಚುವರಿಯಾಗಿ 2–3 ಅಂಶಗಳನ್ನು ಸೇರಿಸಿ ಈ ಮಸೂದೆ ತಂದಿದ್ದೇವೆ' ಎಂದರು.

'ಕಾನೂನು ಆಯೋಗದವರು ಕರಡು ಸಿದ್ಧಪಡಿಸಿರಬಹುದು. ಈ ಕರಡನ್ನು ಪರಾಮರ್ಶೆ ನಡೆಸಲು ಸೂಚನೆ ನೀಡಿದ್ದೇನೆ ಎಂಬುದಕ್ಕೆ ಎಲ್ಲಿದೆ ದಾಖಲೆ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಸಭಾಧ್ಯಕ್ಷ ಕಾಗೇರಿ, '2016ರ ನವೆಂಬರ್ 16ರಂದು ನಡೆಯುವ ಪರಿಶೀಲನಾ ಸಮಿತಿಯ ಸಭೆಯ ಮುಂದೆ ಮಸೂದೆಯ ಕರಡನ್ನು ಸಿದ್ಧಪಡಿಸುವಂತೆ ಆದೇಶ ನೀಡಲಾಗಿತ್ತು. ಬಳಿಕ ಇದಕ್ಕೆ ಜಯಚಂದ್ರ ಸಹಿ ಹಾಕಿದ್ದಾರೆ. ಸಚಿವ ಸಂಪುಟದ ಮುಂದೆ ಮಂಡಿಸುವಂತೆಯೂ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ' ಎಂದು ದಾಖಲೆಗಳನ್ನು ಓದಿ ಹೇಳಿದರು. ಈ ಮಾತಿನಿಂದ ಸಿದ್ದರಾಮಯ್ಯ ಒಂದು ಕ್ಷಣ ಕಕ್ಕಾಬಿಕ್ಕಿಯಾದರು. ಬಿಜೆಪಿ ಸದಸ್ಯರು 'ಶೇಮ್ ಶೇಮ್', 'ಸಿದ್ದರಾಮಯ್ಯ ಹಿಟ್ ವಿಕೆಟ್' ಎಂದು ಘೋಷಣೆಗಳನ್ನು ಕೂಗಿದರು. 'ನೀವೇನೂ ಸ್ವಾತಂತ್ರ್ಯ ಹೋರಾಟದಲ್ಲಿ ಗೆದ್ದಂತೆಯಾಕೆ ಸಂಭ್ರಮಿಸತ್ತೀರಿ' ಎಂದು ಸಿದ್ದರಾಮಯ್ಯ ರೇಗಿದರು.

'ಹೆಚ್ಚು ಚರ್ಚೆ ಬೇಡ'

ಬಿಜೆಪಿಯ ಯಡಿಯೂರಪ್ಪ, 'ಸಿದ್ದರಾಮಯ್ಯ ಕಾಲದಲ್ಲೇ ಮಸೂದೆಯ ಕರಡು ಸಿದ್ಧವಾಗಿದೆ. ಹೀಗಾಗಿ, ಹೆಚ್ಚು ಚರ್ಚೆ ನಡೆಸದೆ ಮಸೂದೆಗೆ ಅಂಗೀಕಾರ ಮಾಡಿ. ನೀವೇ ಮಾಡಿದ ದಾಖಲೆಗಳನ್ನು ಒಪ್ಪಿಲ್ಲ ಎಂದರೆ ನಿಮ್ಮನ್ನು ದೇವರೇ ಕಾಪಾಡಬೇಕು' ಎಂದು ಛೇಡಿಸಿದರು.

'ಕಾಂಗ್ರೆಸ್‌ನ ದ್ವಿಮುಖ ನೀತಿಗೆ ಈ ನಡೆ ಸಾಕ್ಷಿ' ಎಂದು ಕಂದಾಯ ಸಚಿವ ಆರ್.ಅಶೋಕ ಕಾಲೆಳೆದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ವಾಕ್ಸಮರ ನಡೆಯಿತು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ, 'ಸಿದ್ದರಾಮಯ್ಯ ಅವಕಾಶವಾದಿ ರಾಜಕಾರಣಿ. ಅವರು ಸದನದ ದಿಕ್ಕು ತಪ್ಪಿಸಿದ್ದಾರೆ. ಅವರು ಕ್ಷಮೆ ಕೇಳಿ, ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ಯಡಿಯೂರಪ್ಪ, 'ಸಿದ್ದರಾಮಯ್ಯ ಕಾನೂನು ಪಂಡಿತರು. ತಮ್ಮ ಕಾಲದಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದರು ಎಂಬುದನ್ನು ಪರಿಶೀಲಿಸಲಿ. ಅದಕ್ಕಾಗಿ ಸ್ವಲ್ಪ ಹೊತ್ತು ಕಲಾಪವನ್ನು ಮುಂದೂಡಲಿ. ಬಳಿಕ ಮಸೂದೆಗೆ ಬೆಂಬಲ ನೀಡಲಿ' ಎಂದು ವಿನಂತಿಸಿದರು. ಬಳಿಕ ಕಲಾಪವನ್ನು 10 ನಿಮಿಷ ಕಲಾಪವನ್ನು ಮುಂದೂಡಲಾಯಿತು. ವಿಧಾನಸಭಾಧ್ಯಕ್ಷರ ಕೊಠಡಿಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ದಾಖಲೆಗಳ ಪರಿಶೀಲನೆ ನಡೆಸಿದರು.

ಕಲಾಪ ಪುನರಾರಂಭಗೊಂಡ ಬಳಿಕ ಸಿದ್ದರಾಮಯ್ಯ, 'ನಾನು ಕಡತಗಳನ್ನು ಪರಿಶೀಲನೆ ನಡೆಸಿದೆ. ಕಡತವನ್ನು ಸಚಿವ ಸಂಪುಟದ ಮುಂದೆ ಮಂಡಿಸಿ ಎಂದು ಹೇಳಿದ್ದು ನಿಜ. 2015ರಲ್ಲೇ ಈ ಕರಡು ಸಿದ್ಧವಾಗಿತ್ತು. ಆ ಬಳಿಕ ಎರಡೂವರೆ ವರ್ಷ ನಾವು ಅಧಿಕಾರದಲ್ಲಿ ಇದ್ದೆವು. ಬಳಿಕ ಮೈತ್ರಿ ಸರ್ಕಾರ ಬಂದಿತ್ತು. ಕಾಯ್ದೆ ಜಾರಿ ಮಾಡಬೇಕು ಎಂದು ಅನಿಸಿದ್ದರೆ ಒಂದೇ ನಿಮಿಷದಲ್ಲಿ ಮಾಡುತ್ತಿದ್ದೆವು. ನಮಗೆ ಅದರಲ್ಲಿ ಆಸಕ್ತಿ ಇರಲಿಲ್ಲ. ಅಂದಿನ ಕರಡು ಮಸೂದೆಗೆ, ನೀವು ತಂದಿರುವ ಮಸೂದೆಗೆ ಅಜಗಜಾಂತರವಿದೆ' ಎಂದು ಸಿದ್ದರಾಮಯ್ಯ ಅವರು ಹೇಳಿದರು.

ವಿಧಾನಸಭೆಯಲ್ಲಿ ಮತಾಂತರ ನಿಷೇಧ ಮಸೂದೆ ಪರ–ವಿರೋಧ ಸುದೀರ್ಘ ಚರ್ಚೆ

'ಪಂಪ, ರನ್ನ, ಅಂಬೇಡ್ಕರ್ ಮತಾಂತರವಾಗಿಲ್ಲವೇ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಭಾರತದಲ್ಲಿ ಶತಮಾನಗಳಿಂದಲೂ ಮತಾಂತರ ನಡೆಯುತ್ತಿದೆ. ಪಂಪ, ರನ್ನ, ಬಸವಣ್ಣ, ಅಂಬೇಡ್ಕರ್, ಸಾಮ್ರಾಟ್ ಅಶೋಕ ಅವರೆಲ್ಲರೂ ತಮ್ಮ ಜಾತಿಯನ್ನು ಬಿಟ್ಟು ಮತ್ತೊಂದು ಧರ್ಮಕ್ಕೆ ಹೋದವರೇ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ನಡೆದ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ರಾಜ್ಯದಲ್ಲಿ ಹಲವು ಜ್ವಲಂತ ಸಮಸ್ಯೆಗಳಿವೆ, ಅವುಗಳ ವಿರುದ್ಧ ಸಿಟ್ಟಿಗೆದ್ದಿರುವ ಜನರನ್ನು ವಿಮುಖಗೊಳಿಸಲು ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಲು ಹೊರಟಿದ್ದಾರೆ' ಎಂದು ಕಿಡಿಕಾರಿದರು.

ಸಾಮಾಜಿಕ ನ್ಯಾಯದ ಹರಿಕಾರ ಬಸವಣ್ಣನವರು ಬ್ರಾಹ್ಮಣರಾಗಿ ಹುಟ್ಟಿ ಲಿಂಗಾಯತ ಧರ್ಮ ಸ್ಥಾಪನೆ ಮಾಡಿಲ್ಲವೇ? ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಲಕ್ಷಾಂತರ ಜನರ ಜೊತೆಗೆ ಬೌದ್ಧ ಧರ್ಮಕ್ಕೆ ಮತಾಂತರ ಆಗಿಲ್ಲವೇ? ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಪಂಪ, ರನ್ನರು ಜೈನ ಧರ್ಮಕ್ಕೆ ಮತಾಂತರ ಗೊಂಡರು. ದೇಶದಲ್ಲಿ ಶತಮಾನಗಳ ಹಿಂದಿನಿಂದಲೂ ಮತಾಂತರ ನಡೆದುಕೊಂಡು ಬಂದಿದೆ. ಸಾಮ್ರಾಟ್ ಅಶೋಕ ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಹೋಗಿಲ್ಲವೇ? ಇವರ್‍ಯಾರೂ ಅಧಿಕಾರವೋ ಅಥವಾ ಇನ್ಯಾವುದೋ ಕಾರಣಕ್ಕೆ ಮತಾಂತರ ಆಗಿಲ್ಲ ಎಂದು ಅವರು ಹೇಳಿದರು.

ಈ ದೇಶದಲ್ಲಿ ಅಸ್ಪೃಶ್ಯತೆ, ಶೋಷಣೆ ಮತ್ತಿತರ ಕಾರಣಗಳಿಂದಾಗಿ ಸಾಕಷ್ಟು ಮಂದಿ ಮತಾಂತರ ಆಗಿದ್ದಾರೆ. ಬಲವಂತದ ಮತಾಂತರ ಮಾಡಲಾಗುತ್ತಿದೆ ಎಂದು ಆರ್‌ಎಸ್‌ಎಸ್, ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಒಂದು ವೇಳೆ ಆ ರೀತಿ ಆಗಿದ್ದರೆ ಹಿಂದೂಗಳ ಸಂಖ್ಯೆ ಕಡಿಮೆ ಆಗಬೇಕಿತ್ತಲ್ಲ ಎಂದು ಅವರು ಪ್ರಶ್ನಿಸಿದರು.

2001ರ ಜನಗಣತಿ ಪ್ರಕಾರ ಹಿಂದೂಗಳ ಜನಸಂಖ್ಯೆ ಶೇ 83.86 ಇತ್ತು. 2011ರಲ್ಲಿ ಶೇ 84 ಆಗಿದೆ. ಮುಸ್ಲಿಮರ ಜನಸಂಖ್ಯೆ ಶೇ 12.23ರಿಂದ ಶೇ 12.92 ಆಗಿದೆ. ಕ್ರೈಸ್ತರ ಜನಸಂಖ್ಯೆ ಶೇ 1.98 ಇದ್ದಿದ್ದು ಶೇ 1.87ಕ್ಕೆ ಇಳಿಕೆಯಾಗಿದೆ. ಬಲವಂತದ ಮತಾಂತರ ಮಾಡಿದ್ದರೆ ಕ್ರೈಸ್ತರ ಜನಸಂಖ್ಯೆ ಹೆಚ್ಚು ಆಗಬೇಕಿತ್ತಲ್ಲ ಎಂದು ಅವರು ಕೇಳಿದರು.

ಕ್ರಿಯಾಲೋಪ ಎತ್ತಿದ ಬಿಜೆಪಿಯ ಪಿ.ರಾಜೀವ್ '2011ರಲ್ಲಿ ಹಿಂದೂಗಳ ಜನಸಂಖ್ಯೆ ಶೇ 78.80 ಆಗಿದೆ' ಎಂದರು. ದಾಖಲೆಗಳನ್ನು ಪರಿಶೀಲಿಸಿ ತೀರ್ಪು ನೀಡುವೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ನಾನು ಹೇಳಿದ್ದು ಕರ್ನಾಟಕದ ಅಂಕಿ ಅಂಶ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

'ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ, ಅಪ್ರಾಪ್ತರಿಗೆ, ಬುದ್ಧಿಭ್ರಮಣೆಯಾದವರನ್ನು ಮತಾಂತರ ಮಾಡಿದಾಗ ಗರಿಷ್ಠ ಶಿಕ್ಷೆ ವಿಧಿಸಲಾಗಿದೆ. ಆದರೆ ಇವುಗಳಿಗೆ ಕಾನೂನಿನಲ್ಲಿ ಅವಕಾಶ ಇಲ್ಲ' ಎಂದರು.

ಹಿಂದೂ ಧರ್ಮ ಅಳಿಸಲು ಸಾಧ್ಯವಿಲ್ಲ: ಜಾರ್ಜ್

'ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರು ಅಣ್ಣ– ತಮ್ಮಂದಿರಂತೆ ಬದುಕುವ ಅವಕಾಶ ಇದ್ದು, ಈ ಕಾಯ್ದೆ ಬಂದರೆ ಭಯದ ವಾತಾವರಣ ನಿರ್ಮಾಣವಾಗಲಿದೆ' ಎಂದು ಕಾಂಗ್ರೆಸ್‌ನ ಕೆ.ಜೆ. ಜಾರ್ಜ್ ಹೇಳಿದರು.

'ಚರ್ಚ್‌ಗಳಾಗಲಿ, ಕ್ರೈಸ್ತ ಸಂಘ– ಸಂಸ್ಥೆಗಳಾಗಲಿ ಮತಾಂತರಕ್ಕೆ ಪ್ರಚೋದನೆ ನೀಡುತ್ತಿಲ್ಲ. ಆ ರೀತಿ ಯಾರಾದರೂ ಮಾಡುತ್ತಿದ್ದರೆ ಕಠಿಣ ಕ್ರಮ ಕೈಗೊಳ್ಳಿ. ಚರ್ಚ್‌ಗಳಲ್ಲಿ ಧರ್ಮಗುರುಗಳು ಮತಾಂತರದ ಬಗ್ಗೆ ಮಾತನಾಡುವುದೂ ಇಲ್ಲ' ಎಂದರು.

'ಹಿಂದೂ ಧರ್ಮ ಶತ–ಶತಮಾನಗಳಿಂದ ಉಳಿದುಕೊಂಡು ಬಂದಿದೆ. ಮುಸ್ಲಿಂ ದೊರೆಗಳು, ಬ್ರಿಟಿಷರು, ಪೋರ್ಚುಗೀಸರು ಬಂದರೂ ಹಿಂದೂ ಧರ್ಮ ಅಳಿಸಲು ಸಾಧ್ಯವಾಗಿಲ್ಲ. ಭಾರತದಲ್ಲಿ ಜೈನ, ಬೌದ್ಧ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ಆದಿ ಶಂಕರಾಚಾರ್ಯರು ದೇಶವನ್ನು ಸುತ್ತಿ, ನಾಲ್ಕು ಪೀಠಗಳನ್ನು ಸ್ಥಾಪಿಸಿ ಹಿಂದೂ ಧರ್ಮ ಉಳಿಸಿದರು. ಅವರು ಯಾವುದೇ ಬಿಲ್ (ಮಸೂದೆ) ತಂದು ಮಾಡಿ ಆ ಕಾರ್ಯ ಮಾಡಿದ್ದಲ್ಲ' ಎಂದರು.

ಚರ್ಚ್‌ಗೆ ಹೋದವರೆಲ್ಲ ಮತಾಂತರ ಆಗಲ್ಲ: ಬಂಡೆಪ್ಪ

'ಚರ್ಚ್‌ಗೆ ಹೋದವರೆಲ್ಲ ಮತಾಂತರ ಆಗುತ್ತಾರೆ ಎಂಬುದರಲ್ಲಿ ಹುರುಳಿಲ್ಲ. ನಾನೂ ಚರ್ಚ್‌ಗೆ ಹೋಗಿದ್ದೇನೆ. ಪ್ರಾರ್ಥನೆಗೆ ತನ್ನದೇ ಆದ ಶಕ್ತಿ ಇದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷ ಉಪನಾಯಕ ಬಂಡೆಪ್ಪ ಕಾಶೆಂಪೂರ ಹೇಳಿದರು.

'ರಾಜ್ಯದಲ್ಲಿ ಮತಾಂತರಕ್ಕೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳು ದಾಖಲಾಗಿವೆ ಎನ್ನುವುದನ್ನು ತಿಳಿಸಬೇಕು. ಬಲವಂತವಾಗಿ ಮತಾಂತರ ಮಾಡುವುದನ್ನು ನಾನೂ ಒಪ್ಪುವುದಿಲ್ಲ. ಕ್ರೈಸ್ತ ಮಾತ್ರವಲ್ಲ, ಮುಸ್ಲಿಂ ಸಮುದಾಯದಲ್ಲೂ ಬಲವಂತದ ಮತಾಂತರಕ್ಕೆ ವಿರೋಧವಿದೆ' ಎಂದು ಅವರು ಹೇಳಿದರು.

'ಈ ಮಸೂದೆ ದುರುಪಯೋಗದ ಸಾಧ್ಯತೆ ಹೆಚ್ಚಾಗಿದೆ. ತಮಗೆ ಆಗದವರ ವಿರುದ್ಧ ಸುಳ್ಳು ದೂರುಗಳನ್ನು ದಾಖಲಿಸುವ ಸಾಧ್ಯತೆ ಹೆಚ್ಚಾಗಿವೆ.ಹಾಗಾಗಿ, ಮಸೂದೆ ವಾಪಸ್ ಪಡೆಯಬೇಕು' ಎಂದು ಒತ್ತಾಯಿಸಿದರು.

ಎರಡೂ ರಾಜಕೀಯ ಪಕ್ಷಗಳು ಸೇರಿ ಈ ಮಸೂದೆ ಮಾಡಿವೆ. 2016 ರಲ್ಲಿ ಜಾರ್ಜ್ ಅವರು ಆಂಜನೇಯ ಮೂಲಕ ಹೇಳಿಸಿ ಮಸೂದೆ ತಡೆದರು
ಎಚ್.ಡಿ.ರೇವಣ್ಣ, ಜೆಡಿಎಸ್

ಒರಿಜಿನಲ್ ಚರ್ಚ್‌ಗಳು ಮತಾಂತರ ಮಾಡುತ್ತಿಲ್ಲ. ಮತಾಂತರಗೊಂಡಿರುವ ಭೋವಿ, ಕುರುಬ, ಲಿಂಗಾಯತರು ಮತಾಂತರ ಮಾಡುತ್ತಿದ್ದಾರೆ
ಗೂಳಿಹಟ್ಟಿ ಶೇಖರ್, ಬಿಜೆಪಿ

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಮಾಯಕರನ್ನು ದುರುಪಯೋಗಪಡಿಸಲಾಗುತ್ತಿದೆ ಅವರಿಗೆ ಹೆಚ್ಚಿನ ರಕ್ಷಣೆ ನೀಡಲು ಈ ಮಸೂದೆ ತಂದಿದ್ದೇವೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಶೇ 40ರಷ್ಟು ಲಂಚ: ಪರಿಷತ್‌ನಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಶೇ 40ರಷ್ಟು ಮೊತ್ತ ಲಂಚದ ರೂಪದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಜೇಬು ಸೇರುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಮಾಡಿರುವ ಆರೋಪ ಗುರುವಾರ ವಿಧಾನ ಪರಿಷತ್‌ನಲ್ಲಿ ಕೆಲಕಾಲ ಕೋಲಾಹಲಕ್ಕೆ ಕಾರಣವಾಯಿತು.

ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಸಿ.ಎಂ. ಇಬ್ರಾಹಿಂ, 'ಸರ್ಕಾರದ ಇಲಾಖೆಗಳಲ್ಲಿ ಕಾಮಗಾರಿ ಕೈಗೊಳ್ಳಲು ಬಿಡುಗಡೆಯಾಗುವ ಮೊತ್ತದಲ್ಲಿ ಶೇ 40ರಷ್ಟು ಮೊತ್ತ ಲಂಚದ ರೂಪದಲ್ಲಿ ಸಂದಾಯ ಆಗುತ್ತಿದೆ ಎಂಬುದಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆರೋಪಿಸಿದ್ದಾರೆ. ಪ್ರಧಾನಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯವರಿಗೆ ದೂರು ನೀಡಿದ್ದಾರೆ. ಇದರಿಂದ ಎಲ್ಲರೂ ತಲೆ ತಗ್ಗಿಸುವಂತಾಗಿದೆ' ಎಂದರು.

'ವಿಧಾನಮಂಡಲದ ಎರಡೂ ಸದನಗಳ ಸದಸ್ಯರೂ ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಲಂಚ ಪಡೆಯುತ್ತಿದ್ದಾರೆ ಎಂದು ಆರೋಪ ಮಾಡಿದ್ದಾರೆ. ಸಚಿವರು ಶೇ 5ರಷ್ಟು ಲಂಚ ಕೇಳುತ್ತಿದ್ದಾರೆ ಎಂಬ ಆರೋಪವಿದೆ. ಕೆಲವು ಸಂಸದರ ವಿರುದ್ಧವೂ ಲಂಚ ಪಡೆಯುತ್ತಿರುವ ಆರೋಪವಿದೆ. ಇದಕ್ಕೆ ಕಡಿವಾಣ ಹಾಕದೇ ಇದ್ದರೆ ಎಲ್ಲರೂ ನಾಶವಾಗುತ್ತೇವೆ' ಎಂದು ಹೇಳಿದರು.

ಲಂಚದ ಆರೋಪದ ಕುರಿತು ತನಿಖೆ ನಡೆಸಲೇಬೇಕು. ಪ್ರಧಾನಿ, ರಾಜ್ಯಪಾಲರು ಸೇರಿದಂತೆ ಹಲವರಿಗೆ ದೂರು ಸಲ್ಲಿಕೆಯಾಗಿದ್ದರೂ ಕ್ರಮವಾಗಿಲ್ಲ. ಈಗ ಜನರು ಎಲ್ಲ ಶಾಸಕರನ್ನೂ ಅನುಮಾನದಿಂದ ನೋಡುತ್ತಿದ್ದಾರೆ. ರಸ್ತೆಯಲ್ಲಿ ಓಡಾಡುವುದು ಕಷ್ಟವಾಗಿದೆ. ಪ್ರಕರಣದ ತನಿಖೆಗೆ ಜಂಟಿ ಸದನ ಸಮಿತಿ ರಚಿಸಬೇಕು' ಎಂದು ಆಗ್ರಹಿಸಿದರು.

ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಈ ಆರೋಪದಲ್ಲಿ ಹುರುಳಿಲ್ಲ ಎಂದು ವಿವರ ನೀಡಲು ಮುಂದಾದರು.

ಅಷ್ಟರಲ್ಲಿ ಎದ್ದು ನಿಂತ ಜೆಡಿಎಸ್‌ನ ಮರಿತಿಬ್ಬೇಗೌಡ ಮತ್ತು ಕಾಂಗ್ರೆಸ್ ಸದಸ್ಯರು ಲಿಖಿತ ಉತ್ತರಕ್ಕೆ ಪಟ್ಟು ಹಿಡಿದರು. ಆಡಳಿತ– ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಕ್ಸಮರ ಆರಂಭವಾಯಿತು. ಕಾಂಗ್ರೆಸ್ ಸದಸ್ಯರು ಸಭಾಪತಿಯವರ ಪೀಠದ ಎದುರು ಧರಣಿ ಆರಂಭಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಕಲಾಪ ಮುಂದೂಡಿದರು.

ಮಧ್ಯಾಹ್ನ 3ಕ್ಕೆ ಮತ್ತೆ ಕಲಾಪ ಆರಂಭವಾದಾಗ ಧರಣಿ ಮುಂದುವರಿಸಿದ ಕಾಂಗ್ರೆಸ್ ಸದಸ್ಯರು ಲಿಖಿತ ಉತ್ತರಕ್ಕೆ ಪಟ್ಟು ಹಿಡಿದರು. ಜೆಡಿಎಸ್ ಸದಸ್ಯರೂ ಬೆಂಬಲಿಸಿದರು. ಸಭಾಪತಿಯವರು ಮನವೊಲಿಸಿದ ಬಳಿಕ ವಿಪಕ್ಷಗಳ ಸದಸ್ಯರು ಧರಣಿ ಹಿಂಪಡೆದರು.

ಸಾಕ್ಷ್ಯ ನೀಡಿಲ್ಲ: ಕಾರಜೋಳ

'ವಿಧಾನಸೌಧವನ್ನು ನಿರ್ಮಿಸಿದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸೇರಿದಂತೆ ಎಲ್ಲರ ಮೇಲೂ ಭ್ರಷ್ಟಾಚಾರದ ಆರೋಪ ಬಂದಿದೆ. ಕೆಂಪಣ್ಣ ಎಂಬುವವರು ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾರೆ. ರಾಜ್ಯದಲ್ಲಿ 42,000 ಗುತ್ತಿಗೆದಾರರಿದ್ದಾರೆ. ಆದರೆ, ಆರೋಪ ಮಾಡಿದವರ ಸಂಘದಲ್ಲಿ ಇರುವುದು 800 ಸದಸ್ಯರು ಮಾತ್ರ. ಅವರು ಗಾಳಿಯಲ್ಲಿ ಗುಂಡು ಹೊಡೆದಂತೆ ಆರೋಪ ಮಾಡಿದ್ದಾರೆ. ಯಾರ ವಿರುದ್ಧವೂ ಸಾಕ್ಷ್ಯ ನೀಡಿಲ್ಲ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಮತಾಂತರ ನಿಷೇಧಕ್ಕೆ ಅಸ್ತು

'ಮತಾಂತರ ನಿಷೇಧಕ್ಕೆ ಚಾಲನೆ ಕೊಟ್ಟಿದ್ದೇ ಕಾಂಗ್ರೆಸ್'

ರಾಮನಗರ: 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಕ್ಯಾಬಿನೆಟ್‌ನಲ್ಲಿ ಮತಾಂತರ ನಿಷೇಧ ಕುರಿತು ಕಾಂಗ್ರೆಸ್‌ನವರೇ ಪ್ರಸ್ತಾವ ತಂದಿದ್ದು, ಈಗಿನ ಮತಾಂತರ ನಿಷೇಧ ಮಸೂದೆ ಬಗ್ಗೆ ಮಾತನಾಡಲು ಅವರಿಗೆ ನೈತಿಕತೆ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಬಿಡದಿಯಲ್ಲಿ ಗುರುವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಟಿ.ಬಿ. ಜಯಚಂದ್ರ ಈ ನೋಟ್ ತಂದಿದ್ದು, ಇದಕ್ಕೆ ಅವರೇ ಸಹಿ ಹಾಕಿದ್ದಾರೆ. ಇದೇ ಕಾರಣಕ್ಕೆ ಸದನದಲ್ಲಿ ಬಿಜೆಪಿ ನಾಯಕರಿಂದ ಸಿದ್ದರಾಮಯ್ಯ ಮಂಗಳಾರತಿ ಮಾಡಿಸಿಕೊಂಡಿದ್ದಾರೆ. ಆದರೂ, ಅದರ ಬಗ್ಗೆ ಮಾತನಾಡುತ್ತಾರೆ' ಎಂದರು.

ಒಂದನೇ ಪುಟದಿಂದ...

ಇದರಿಂದ ಸದನದಲ್ಲಿ ಚರ್ಚೆಯ ದಿಕ್ಕು ಬದಲಾಯಿತು. 'ಅಂತಹ ಪ್ರಯತ್ನ ಆಗಿಲ್ಲ' ಎಂದು ಸಿದ್ದರಾಮಯ್ಯ ಆರಂಭದಲ್ಲಿ ವಾದಿಸಿದರು. ಕಡತ ಪರಿಶೀಲನೆ ಬಳಿಕ ಅದನ್ನು ಒಪ್ಪಿಕೊಂಡರು. ಈ ಮಧ್ಯೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಪರಸ್ಪರ ಆರೋಪ–ಪ್ರತ್ಯಾರೋಪ, ಘೋಷಣೆಗಳನ್ನು ಮೊಳಗಿಸಿದಾಗ, ಯಾರು ಏನು ಮಾತನಾಡುತ್ತಿದ್ದಾರೆ ಎಂದು ಕೇಳದ ಸ್ಥಿತಿ ನಿರ್ಮಾಣವಾಗಿತ್ತು. ಸರ್ಕಾರದ ಉತ್ತರ ನೀಡಿ, ಪರ್ಯಾಲೋಚನೆಗೆ ಮಂಡಿಸುವಂತೆ ಗೃಹ ಸಚಿವರಿಗೆ ಸಭಾಧ್ಯಕ್ಷರು ಸೂಚಿಸಿದರು. ಮಧ್ಯ ಪ್ರವೇಶಿಸಿದ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, 'ಮಸೂದೆ ತರುವ ಕಡತಕ್ಕೆ ಹಿಂದೆ ಸಿದ್ದರಾಮಯ್ಯ ಸಹಿ ಹಾಕಿದ್ದರು. ವಿವರಣೆ ಅನಗತ್ಯ. ಅವರು ಗಲಾಟೆ ಮಾಡುತ್ತಲೇ ಇರುತ್ತಾರೆ. ಅದರ ಮಧ್ಯೆಯೇ ಮಸೂದೆ ಮಂಡಿಸಿ ಅಂಗೀಕಾರ ಪಡೆಯಿರಿ' ಎಂದು ಸಲಹೆ ನೀಡಿದರು.

ಮಸೂದೆ ಅಂಗೀಕಾರ ಬಳಿಕ ಸಭಾಧ್ಯಕ್ಷರು 10 ನಿಮಿಷಗಳ ಕಾಲ ಕಲಾಪ ಮುಂದೂಡಿದರು. ಬಳಿಕ ಕಲಾಪ ಸೇರಿದಾಗಲೂ ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಮಸೂದೆಯ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕು ಎಂಬುದು ನಮ್ಮ ಅಪೇಕ್ಷೆಯಾಗಿತ್ತು. ಅದಕ್ಕೆ ಅವಕಾಶ ನೀಡದೇ, ತರಾತುರಿಯಲ್ಲಿ ಅಂಗೀಕರಿಸಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್‌ನಿಂದಲೇ ತಂದಿದ್ದು ತಪ್ಪೇನು?

'ನಮ್ಮ ಭಾಗದಲ್ಲಿರುವ ಅಷ್ಟೂ ಸದಸ್ಯರು ಆರ್‌ಎಸ್‌ಎಸ್ ಸಂಸ್ಕಾರದಿಂದಲೇ ಬೆಳೆದು ಬಂದವರು. ಆರ್‌ಎಸ್‌ಎಸ್‌ನಿಂದಲೇ ಈ ಮಸೂದೆ ತಂದಿದ್ದು ತಪ್ಪೇನಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಪ್ರಶ್ನಿಸಿದರು. 'ದೇಶ–ಧರ್ಮ ಉಳಿಸಲು, ಅದಕ್ಕೆ ಅನುಕೂಲವಾಗಲು ಇಂತಹ ನೂರು ಮಸೂದೆಗಳನ್ನು ತರುತ್ತೇವೆ. ಅದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ನಾವು ಬೇರೆಯವರ ತಂಟೆಗೆ ಹೋಗುವುದಿಲ್ಲ. ನಮ್ಮ ಸುದ್ದಿಗೆ ಬಂದರೆ ಚಿಂದಿ, ಚಿಂದಿ ಮಾಡ್ತೇವೆ' ಎಂದು ಅಬ್ಬರಿಸಿದರು.

ಈಶ್ವರಪ್ಪ ಮಾತಿಗೆ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, ಅವರ ಹೇಳಿಕೆಯನ್ನು ಕಡತದಿಂದ ತೆಗೆಯುವಂತೆ ಆಗ್ರಹಿಸಿದರು.

ಅಷ್ಟಕ್ಕೇ ಸುಮ್ಮನಾಗದ ಈಶ್ವರಪ್ಪ, '2016ರಲ್ಲಿ ಸಿದ್ದರಾಮಯ್ಯ ತಯಾರಾಗಿದ್ದರು. ಈ ವಿಷಯದಲ್ಲಿ ಸೋನಿಯಾಗಾಂಧಿ ಸಿಟ್ಟಾದರೆ ಅಧಿಕಾರದಲ್ಲಿ ಉಳಿಯಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಮಸೂದೆ ಜಾರಿ ಮಾಡಲಿಲ್ಲ' ಎಂದು ಟೀಕಿಸಿದರು. ಈಶ್ವರಪ್ಪ ಮಾತಿನಿಂದ ಕೆರಳಿದ ಕಾಂಗ್ರೆಸ್ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದರು.

'9ನೇ ರಾಜ್ಯ ನಮ್ಮದು'

'ಈ ಮಸೂದೆ ಯಾವುದೇ ಸಮುದಾಯದವರ ವಿರುದ್ಧ ಅಲ್ಲ. ಮತಾಂತರ ನಿಷೇಧ ಕಾಯ್ದೆಯನ್ನು ಈಗಾಗಲೇ ಎಂಟು ರಾಜ್ಯಗಳು ಜಾರಿಗೆ ತಂದಿವೆ. 9ನೇ ರಾಜ್ಯ ನಮ್ಮದು' ಎಂದು ಮಸೂದೆ ಮಂಡಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಹೇಳಿದರು.

ಹಳ್ಳಿಗಳಲ್ಲಿ ಮತಾಂತರ ಪಿಡುಗು ವ್ಯಾಪಕವಾಗಿದೆ. ಇಷ್ಟದ ಧರ್ಮ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಆದರೆ, ಬಲವಂತದ ಮತಾಂತರದಿಂದಾಗಿ ಶಾಂತಿ, ನೆಮ್ಮದಿ ಹಾಳಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಈ ಮಸೂದೆ ತಂದಿದ್ದೇವೆ ಎಂದು ಆರಗ ಅವರು ಹೇಳಿದರು.

'100 ವಿದ್ಯಾರ್ಥಿ ನಿಲಯ ಆರಂಭಕ್ಕೆ ಪ್ರಸ್ತಾವ'

ಬೆಳಗಾವಿ: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗಿರುವುದರಿಂದ 100 ಹೊಸ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲು ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಜೆಡಿಎಸ್‌ನ ಮರಿತಿಬ್ಬೇಗೌಡ ಅವರ ಶೂನ್ಯವೇಳೆಯ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, 'ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗಾಗಿ 1,137 ವಿದ್ಯಾರ್ಥಿ ನಿಲಯಗಳಿವೆ. ಅವುಗಳಲ್ಲಿ 1,22,780 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ' ಎಂದರು.

'ಪ್ರಸಕ್ತ ವರ್ಷ 1.99 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಇರುವ ವಿದ್ಯಾರ್ಥಿ ನಿಲಯಗಳಲ್ಲಿ 12,000 ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಕ್ಕೆ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಬೇಡಿಕೆಯನ್ನು ನಿಭಾಯಿಸುವುದಕ್ಕಾಗಿ 100 ಹೊಸ ವಿದ್ಯಾರ್ಥಿ ನಿಲಯಕ್ಕೆ ಅನುದಾನ ಕೋರಲಾಗಿದೆ' ಎಂದು ತಿಳಿಸಿದರು.

'ಹೊಸ ಕಾಮಗಾರಿಗೆ ಅನುದಾನ ಇಲ್ಲ'

ಬೆಳಗಾವಿ: ಈ ವರ್ಷ ಜಲ ಸಂಪನ್ಮೂಲ ಇಲಾಖೆಯಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಆರಂಭಿಸಲು ಅನುದಾನವಿಲ್ಲ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಉತ್ತರಿಸಿದ ಸಚಿವರು, 'ಸದ್ಯ ₹ 1,200 ಕೋಟಿ ಅನುದಾನ ಮಾತ್ರ ಲಭ್ಯವಿದೆ.ಇದು ಮುಂದುವರಿದ ಕಾಮಗಾರಿಗಳು, ಆರಂಭವಾಗಿರುವ ಕಾಮಗಾರಿಗಳಿಗೆ ಮಾತ್ರ ಸಾಕಾಗುತ್ತದೆ. ₹ 1 ಕೋಟಿ ಮೊತ್ತದ ಕಾಮಗಾರಿಗೂ ಹೊಸದಾಗಿ ಅನುಮೋದನೆ ನೀಡಲು ಸಾಧ್ಯವಿಲ್ಲ' ಎಂದರು.

ಅಂತೋಣಿ ಸ್ವಾಮಿ ಮೂರ್ತಿ ಧ್ವಂಸ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಸೂಸೆಪಾಳ್ಯ ಬಳಿ ಅಂತೋಣಿ ಸ್ವಾಮಿ ಮೂರ್ತಿಯನ್ನು ದುಷ್ಕರ್ಮಿಗಳು ಗುರುವಾರ ಧ್ವಂಸಗೊಳಿಸಿದ್ದಾರೆ.

ಸೂಸೆಪಾಳ್ಯಕ್ಕೆ ಸಾಗುವ ಹಾಗೂ ರಂಗಧಾಮ ಕೆರೆ ಹಿಂಬದಿಯ ರಸ್ತೆಯಲ್ಲಿ ಚಿಕ್ಕಗುಡಿ ನಿರ್ಮಿಸಿ ಅಂತೋಣಿ ಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಗುರುವಾರ ಬೆಳಗಿನ ಜಾವ ಈ ಘಟನೆ ಸಂಭವಿಸಿದ್ದು, ಮೂರ್ತಿಯು ಮುರಿದು ಬಿದ್ದು, ದ್ವಾರದ ಗಾಜುಗಳು ಪುಡಿಯಾಗಿವೆ. ಪ್ರತಿ ಮಂಗಳವಾರ ಇಲ್ಲಿ ಕ್ರೈಸ್ತ ಸಮುದಾಯದವರು ಪ್ರಾರ್ಥನೆ ಸಲ್ಲಿಸುತ್ತಿದ್ದರು.

ಭಗ್ನವಾದ ಮೂರ್ತಿ ಪೊಲೀಸರ ಸುಪರ್ದಿನಲ್ಲಿದೆ. ಸೂಸೆಪಾಳ್ಯದ ಚರ್ಚ್‌ನಿಂದ ಮತ್ತೆ ಹೊಸದಾಗಿ ಪ್ರತಿಮೆ ಪ್ರತಿಷ್ಠಾಪಿಸಲಾಗಿದೆ.

'42 ವರ್ಷಗಳ ಹಿಂದೆಯೇ ಅಂತೋಣಿ ಸ್ವಾಮಿ ಮೂರ್ತಿಯನ್ನು ಗವಿಯಲ್ಲಿ ಇಡಲಾಗಿತ್ತು. ನಾವು ಯಾರನ್ನೂ ಇಲ್ಲಿ ಮತಾಂತರ ಮಾಡಿಲ್ಲ. ಯಾರ ಭಾವನೆಗಳಿಗೂ ಧಕ್ಕೆ ತರದಂತೆ ಜೀವಿಸುತ್ತಿದ್ದೇವೆ. ಸೂಸೆಪಾಳ್ಯ ಚರ್ಚ್‌ಗೆ 150 ವರ್ಷಗಳ ಇತಿಹಾಸ ಇದೆ' ಎಂದು ಚರ್ಚ್‌ನ ಪಾದ್ರಿ ಅಂತೋಣಿ ಡ್ಯಾನಿಯಲ್ 'ಪ್ರಜಾವಾಣಿ'ಗೆ ತಿಳಿಸಿದರು.



ಸುಭಾಷಿತ

ಯಾರೂ ನೋಡದಿದ್ದಾಗಲೂ ಉತ್ತಮವಾದುದನ್ನೇ ಮಾಡುವುದು ನಿಜವಾದ ಪ್ರಾಮಾಣಿಕತೆ.

-ಸಿ.ಎಸ್.ಲೂಯಿಸ್

ಪಂಜಾಬ್‌ನ ಗುಂಪು ಹಲ್ಲೆ ಪ್ರಕರಣ ಮುಖಂಡರಲ್ಲಿ ಮೂಡಲಿ ವಿವೇಕ

ವಿಧಾನಸಭೆ ಚುನಾವಣೆಗೆ ಅಣಿಯಾಗುತ್ತಿರುವ ಪಂಜಾಬ್‌ನಲ್ಲಿ ಪವಿತ್ರ ಗ್ರಂಥ ಮತ್ತು ಧಾರ್ಮಿಕ ಸಂಕೇತಗಳಿಗೆ ಅಪಚಾರ ಎಸಗಲಾಗಿದೆ ಎಂಬ ಆರೋಪದಲ್ಲಿ ಗುಂಪು ಹಲ್ಲೆ ನಡೆಸಿ ಇಬ್ಬರ ಹತ್ಯೆ ಮಾಡಲಾಗಿದೆ. ಮೊದಲ ಪ್ರಕರಣವು ಅಮೃತಸರದ ಸ್ವರ್ಣ ಮಂದಿರದಲ್ಲಿ ನಡೆಯಿತು. ಅಪಚಾರ ಎಸಗಿದ ಆರೋಪಿಯನ್ನು ಸ್ಥಳದಲ್ಲಿಯೇ ಹೊಡೆದು ಕೊಲ್ಲಲಾಯಿತು. ಎರಡನೇ ಹತ್ಯೆಯು ಕಪುರ್ತಲ ಜಿಲ್ಲೆಯ ಗ್ರಾಮವೊಂದರಲ್ಲಿ ನಡೆದಿದೆ. ಪವಿತ್ರ ಗ್ರಂಥ ಅಥವಾ ಧಾರ್ಮಿಕ ಸಂಕೇತಗಳಿಗೆ ಆ ವ್ಯಕ್ತಿಯು ಅವಮಾನ ಮಾಡಿದ್ದಾರೆ ಎನ್ನುವುದಕ್ಕೆ ಯಾವುದೇ ಪುರಾವೆ ಇಲ್ಲ. ಸಂಶಯಗಳ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಹೊಡೆದು ಕೊಲ್ಲಲಾಗಿದೆ. ಕೆಲವು ತಿಂಗಳ ಹಿಂದೆಯೂ ಈ ರೀತಿಯ ಹತ್ಯೆಯೊಂದು ಪಂಜಾಬ್‌ನಲ್ಲಿ ನಡೆದಿತ್ತು. ಗುರುದಾಸ್‌ಪುರದ ಗುರುದ್ವಾರದಲ್ಲಿ ಕಳ್ಳತನ ಎಸಗಿದ ಆರೋಪದಲ್ಲಿ ವ್ಯಕ್ತಿಯೊಬ್ಬರನ್ನು ಹೊಡೆದು ಕೊಲ್ಲಲಾಗಿತ್ತು. ಪವಿತ್ರ ಸಂಕೇತಗಳಿಗೆ ಅವಮಾನ ಮಾಡಿದ ಆರೋಪದಲ್ಲಿ ವ್ಯಕ್ತಿಗಳ ಮೇಲೆ ಗುಂಪುಹಲ್ಲೆ ನಡೆದ ಹಲವು ಘಟನೆಗಳು ರಾಜ್ಯದಲ್ಲಿ ನಡೆದಿವೆ.

ಪವಿತ್ರ ಸಂಕೇತಗಳಿಗೆ ಅಪಚಾರ ಎಸಗುವ ಮೂಲಕ ಯಾವುದೇ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವುದು ಖಂಡನೀಯ. ಅಪಚಾರ ಮಾಡಿದ ಆರೋಪಿಗಳ ವಿರುದ್ಧ ಕಠಿಣ ಕ್ರಮವನ್ನೂ ಕೈಗೊಳ್ಳಬೇಕು. ಆದರೆ, ಆರೋಪಿಗಳನ್ನು ಜನರ ಗುಂಪುಗಳು ಹೊಡೆದು ಕೊಲ್ಲುವುದು ಕಾನೂನಿನ ಬಗ್ಗೆ ಇರುವ ಅಸಡ್ಡೆಯನ್ನು ತೋರುತ್ತದೆ. ಯಾವುದೇ ಪ್ರಕರಣದಲ್ಲಿ ಯಾವುದೇ ವ್ಯಕ್ತಿಗೆ ದೈಹಿಕ ಹಿಂಸೆಯ ಶಿಕ್ಷೆ ನೀಡುವ ಹಕ್ಕು ಯಾರಿಗೂ ಇಲ್ಲ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪಿಗಳನ್ನು ಪೊಲೀಸರಿಗೆ ಒಪ್ಪಿಸಿ, ಅವರು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಡುವುದು ಸರಿಯಾದ ಕ್ರಮ. ಧಾರ್ಮಿಕ ಸಂಕೇತಗಳಿಗೆ ಅಪಚಾರ ಎಸಗಿದ ವ್ಯಕ್ತಿಗಳು ಮಾನಸಿಕ ಸಮತೋಲನ ಕಳೆದುಕೊಂಡವರು ಎಂಬುದು ಬಹಳಷ್ಟು ಪ್ರಕರಣಗಳಲ್ಲಿ ತಿಳಿದುಬಂದಿದೆ. ಧಾರ್ಮಿಕ ಭಾವನೆಗಳಿಗೆ ನೋವು ಉಂಟು ಮಾಡುವ ಘಟನೆಯು ಉದ್ದೇಶಪೂರ್ವಕ ಅಥವಾ ಪಿತೂರಿಯ ಭಾಗವೇ ಆಗಿದ್ದರೂ ಆರೋಪಿಯನ್ನು ಕೊಂದು ಸಾಕ್ಷ್ಯವನ್ನು ನಾಶ ಮಾಡುವುದು ಕಾನೂನುಬಾಹಿರ ನಡವಳಿಕೆ. ಧಾರ್ಮಿಕ ಸಂಕೇತಗಳಿಗೆ ಅವಮಾನ ಆಗಿದೆ ಎಂಬ ಗುಲ್ಲು ಎದ್ದಾಗ ಅದನ್ನು ಸರಿಯಾದ ರೀತಿಯಲ್ಲಿ ನಿಭಾಯಿಸುವಲ್ಲಿ ಸ್ವರ್ಣ ಮಂದಿರದ ಆಡಳಿತ ಮಂಡಳಿಯು ವಿಫಲವಾಗಿದೆ. ಕಪುರ್ತಲದ ಘಟನೆಯಲ್ಲಿ, ಧಾರ್ಮಿಕ ಸಂಕೇತಗಳಿಗೆ ಅವಮಾನ ಆಗಿದೆಯೇ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಿಲ್ಲ.



ಧಾರ್ಮಿಕ ಮತ್ತು ರಾಜಕೀಯ ನಾಯಕರು ಕೂಡ ಸಮೂಹ ಸನ್ನಿಗೆ ಒಳಗಾದ ಗುಂಪುಗಳ ರೀತಿಯಲ್ಲಿ ಯೋಚಿಸಿದರೆ, ವರ್ತಿಸಿದರೆ ಜನರಿಗೆ ತಿಳಿಹೇಳುವ ಕೆಲಸವನ್ನು ಯಾರು ಮಾಡಬೇಕು?

ಪಂಜಾಬ್‌ನ ರಾಜಕೀಯ ನಾಯಕರ ವರ್ತನೆ ಕೂಡ ಖಂಡನಾರ್ಹ. ಜನರ ಗುಂಪುಗಳು ಕಾನೂನನ್ನು ಕೈಗೆತ್ತಿಕೊಂಡು ವ್ಯಕ್ತಿಗಳ ಹತ್ಯೆ ಮಾಡಿದ್ದನ್ನು ಯಾವುದೇ ರಾಜಕೀಯ ಪಕ್ಷದ ನಾಯಕರು ಖಂಡಿಸಿಲ್ಲ. ಪವಿತ್ರ ಸಂಕೇತಗಳಿಗೆ ಅವಮಾನ ಮಾಡಿದ್ದಾರೆನ್ನಲಾದ ಪ್ರಕರಣಗಳನ್ನು ರಾಜಕೀಯ ನಾಯಕರು ಮತ್ತು ಧಾರ್ಮಿಕ ನಾಯಕರು ಕಟುವಾಗಿ ಖಂಡಿಸಿದ್ದಾರೆ. ಆದರೆ, ಗುಂಪು ಹಲ್ಲೆ ಮತ್ತು ಹತ್ಯೆ ಬಗ್ಗೆ ಅವರು ಏನನ್ನೂ ಹೇಳಿಲ್ಲ. ಕಾಂಗ್ರೆಸ್ ಪಕ್ಷದ ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರಂತೂ ಆರೋಪಿಗಳನ್ನು ಬಹಿರಂಗವಾಗಿ ಗಲ್ಲಿಗೇರಿಸಬೇಕು ಎಂಬ ಹೇಳಿಕೆ ಕೊಟ್ಟಿದ್ದಾರೆ. ಅವಹೇಳನ ಪ್ರಕರಣಗಳ ಹಿಂದೆ ಪಿತೂರಿ ಇದೆ ಎಂದು ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಮತ್ತು ವಿರೋಧ ಪಕ್ಷದ ನಾಯಕರು ಯಾವುದೇ ತನಿಖೆ ನಡೆಸದೆಯೇ ತೀರ್ಪು ಕೊಟ್ಟಿದ್ದಾರೆ. ಸಮತೋಲನ ಇಲ್ಲದ ಇಂತಹ ನಡವಳಿಕೆಯು ಸಾಮಾಜಿಕ ಸುವ್ಯವಸ್ಥೆಗೆ ಭಾರಿ ಅಪಾಯಕಾರಿ. ಧಾರ್ಮಿಕ ಮತ್ತು ರಾಜಕೀಯ ನಾಯಕರು ಕೂಡ ಸಮೂಹ ಸನ್ನಿಗೆ ಒಳಗಾದ ಗುಂಪುಗಳ ರೀತಿಯಲ್ಲಿ ಯೋಚಿಸಿದರೆ, ವರ್ತಿಸಿದರೆ ಜನರಿಗೆ ತಿಳಿ ಹೇಳುವ ಕೆಲಸವನ್ನು ಯಾರು ಮಾಡಬೇಕು? ಪವಿತ್ರ ಸಂಕೇತಗಳಿಗೆ ಅವಮಾನ ಎಸಗುವುದು ಪಂಜಾಬ್‌ನಲ್ಲಿ ಅತ್ಯಂತ ಸೂಕ್ಷ್ಮ ವಿಚಾರವಾಗಿದೆ. ಇಂತಹ ಘಟನೆಗಳು ಕೋಮು, ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿವೆ. ಪಂಜಾಬ್ ವಿಧಾನಸಭೆಗೆ 2015ರಲ್ಲಿ ನಡೆದ ಚುನಾವಣೆಗೂ ಮೊದಲಿನ ಅಪಚಾರ ಕೃತ್ಯಗಳ ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಚುನಾವಣೆಗೆ ಮುಂಚಿನ ದಿನಗಳಲ್ಲಿ ಅದೇ ರೀತಿಯ ಕೃತ್ಯಗಳು ಮತ್ತೆ ನಡೆದಿವೆ. ಇದು ಅತ್ಯಂತ ಕಳವಳಕಾರಿ ವಿದ್ಯಮಾನ. ಚುನಾವಣೆಯ ಹೊಸ್ತಿಲಲ್ಲಿ ಈ ಕೃತ್ಯಗಳು ನಡೆದಿರುವುದರಿಂದ ಅದರ ಹಿಂದೆ ರಾಜಕೀಯ ಪಿತೂರಿ ಇರಬಹುದು ಎಂಬ ಅನುಮಾನ ಇದೆ. ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳುವುದಕ್ಕಾಗಿ ರಾಜಕೀಯ ನಾಯಕರು ಧಾರ್ಮಿಕ ಭಾವನೆಗಳನ್ನು ಕೆರಳಿಸುವುದು ಭಾರತದಲ್ಲಿ ಹೊಸತೇನೂ ಅಲ್ಲ. ಜನರ ಗುಂಪುಗಳು ಕಾನೂನನ್ನು ಕೈಗೆತ್ತಿಕೊಂಡು ಅಪರಾಧ ಎಸಗುವುದನ್ನು ಬೆಂಬಲಿಸುವುದು ಕೂಡ ಇಲ್ಲಿ ವಿರಳ ಏನಲ್ಲ. ಇಂತಹ ನಡವಳಿಕೆಗೆ ಪಂಜಾಬ್ ಈ ಹಿಂದೆಯೂ ಬಹುದೊಡ್ಡ ಬೆಲೆ ತೆತ್ತಿದೆ. ಅದು ಎಲ್ಲರಿಗೂ ಪಾಠವಾಗಬೇಕು. ಧಾರ್ಮಿಕ ಸಂಕೇತಗಳಿಗೆ ಅವಮಾನದಂತಹ ಸೂಕ್ಷ್ಮ ವಿಚಾರಗಳಲ್ಲಿ ಹೆಚ್ಚು ಎಚ್ಚರದ ನಡೆ ಅಗತ್ಯ. ರಾಜಕಾರಣಿಗಳು, ಧಾರ್ಮಿಕ ನಾಯಕರು ಸೇರಿದಂತೆ ಎಲ್ಲರೂ ವಿವೇಕದಿಂದ ವರ್ತಿಸಿದರೆ ಸಾಮಾಜಿಕ ಬಿಕ್ಕಟ್ಟು ಉಂಟಾಗುವುದನ್ನು ತಡೆಯಬಹುದು.

ದಿನದ ಟ್ವೀಟ್

ರೈತನ ಏಳ್ಗೆಗೆ ಆದ್ಯತೆಯಿರಲಿ



ಡಿಸೆಂಬರ್ 23: ರೈತರ ದಿನ! ರೈತನ ಬಳಿ ಕೆಲಸ ಮಾಡುವವನ ಕೂಲಿ ಫಿಕ್ಸ್! ಬೀಜ, ಗೊಬ್ಬರ, ಕೀಟ/ಕಳೆನಾಶಕ, ಬಳಸುವ ಯಂತ್ರಗಳ ಬಾಡಿಗೆ ಎಲ್ಲಾ ಫಿಕ್ಸ್! ಬೆಳೆಯ ಸಾಗಾಟ, ದಲ್ಲಾಳಿ ಶುಲ್ಕ, ಉತ್ಪನ್ನ ಹಾಳಾಗುವ ಪ್ರಮಾಣ ಕೂಡಾ ಫಿಕ್ಸ್! ಆದರೆ ರೈತನ ಉತ್ಪನ್ನಕ್ಕೆ ಕೊಡುವ ಬೆಲೆ ಮಾತ್ರ ಫಿಕ್ಸ್ ಅಲ್ಲ! ಹತ್ತು ಜನರಿಗೆ ಕೆಲಸ ಕೊಡುವ ರೈತ ಮಾತ್ರ ಅತಂತ್ರ!

ಪ್ರಹ್ಲಾದ್ ಕೆ. ಹನುಮಂತಯ್ಯ, ಎಂಜಿನಿಯರ್

ಕಿಡಿನುಡಿ



ಗುಜರಾತ್, ಉತ್ತರಪ್ರದೇಶ ಸರ್ಕಾರಗಳ ಮತಾಂತರ ನಿಷೇಧ ಕಾಯ್ದೆಯಲ್ಲಿ ಬಳಕೆ ಮಾಡಿರುವ ಪದಗಳು, ವಾಕ್ಯಗಳೇ ಇಲ್ಲಿಯೂ ಯಥಾವತ್ತಾಗಿವೆ. ಈ ಎಲ್ಲಾ ಸರ್ಕಾರಗಳ ಕರಡು ತಯಾರಿಕೆಯ ಹಿಂದೆ ಯಾವುದೋ ಒಂದು ಕಾಣದ ಕೈ ಇದೆ ಎಂಬ ಅನುಮಾನ ನನಗಿದೆ. ಅದು ಯಾವುದು ಎಂದು ಬಿಜೆಪಿಯ ರಾಜ್ಯ ಮುಖಂಡರು ಬಹಿರಂಗಪಡಿಸಬೇಕು.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 24-12-1996

• ರಾಜ್ ಉದ್ಘಾಟನೆ ತಪ್ಪಿದರೆ ಚಿತ್ರೋತ್ಸವಕ್ಕೆ ಬಹಿಷ್ಕಾರ

ಬೆಂಗಳೂರು, ಡಿ. 23– ತಿರುವನಂತಪುರದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಡಾ. ರಾಜ್‌ಕುಮಾರ್ ಅವರು ಭಾಗವಹಿಸದಿದ್ದಲ್ಲಿ ಕನ್ನಡ ಚಿತ್ರರಂಗ ಚಿತ್ರೋತ್ಸವವನ್ನು ಬಹಿಷ್ಕರಿಸಲಿದೆ.

‘ಚಿತ್ರೋತ್ಸವ ಉದ್ಘಾಟನೆಗೆ ಡಾ. ರಾಜ್‌ಕುಮಾರ್ ಅವರ ಬದಲಿಗೆ, ಶಬಾನಾ ಅಜ್ಮಿ, ಶ್ಯಾಮ್ ಬೆನಗಲ್ ಅಥವಾ ದಿಲೀಪ್ ಕುಮಾರ್ ಅವರಲ್ಲಿ ಒಬ್ಬರನ್ನು ಆಹ್ವಾನಿಸಬೇಕೆಂದು ಕೇರಳ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಅರ್ಥಹೀನ’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಚಂದ್ರಶೇಖರ ರಾಜು ಹೇಳಿದ್ದಾರೆ.

• ಮನೆ ತೆರವಿಗೆ ಕೋರ್ಟ್ ಆದೇಶ

ನವದೆಹಲಿ, ಡಿ. 23 (ಯುಎನ್‌ಐ)– ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ವಿವೇಚನಾ ಕೋಟಾದಲ್ಲಿ ದೆಹಲಿಯಲ್ಲಿ ಕೇಂದ್ರ ಸರ್ಕಾರಿ ನೌಕರರು ಪಡೆದಿರುವ ಮನೆಗಳನ್ನು 90 ದಿನಗಳಲ್ಲಿ ಖಾಲಿ ಮಾಡಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಇಂದು ಆದೇಶ ನೀಡಿತು.

ಹಗರಣದ ಆರೋಪ ಕೇಳಿಬಂದಿರುವ ಸುಮಾರು ಎರಡು ಸಾವಿರ ಉದ್ಯೋಗಿಗಳ ವಸತಿ ತೆರವಿಗೆ ಆಜ್ಞೆ ಮಾಡಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 24-12-1971

• ಮತ್ತೊಂದು ಭಾರತ- ಪಾಕ್ ಸಮರ ಅಸಂಭವ: ರಾಂ

ನವದೆಹಲಿ, ಡಿ. 23– ಭಾರತ – ಪಾಕಿಸ್ತಾನಗಳ ನಡುವೆ ಮತ್ತೊಂದು ಸಮರದ ಸಾಧ್ಯತೆ ತಮಗೆ ಕಾಣಬರುತ್ತಿಲ್ಲವೆಂದು ರಕ್ಷಣಾ ಸಚಿವ ಜಗಜೀವನ ರಾಂ ತಿಳಿಸಿದ್ದಾರೆ.

‘ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಅವರು ಮಾಡಿದ ಪ್ರಥಮ ಪ್ರಸಾರ ಭಾಷಣದಲ್ಲಿ ಸಮರದ ಬೆದರಿಕೆ ಹಾಕಿದರು. ಆದರೆ ಆನಂತರ ಮಾಡಲಾದ ಭಾಷಣಗಳಲ್ಲಿ ಭುಟ್ಟೊ ಅವರೇ ಸಮರದ ಬೆದರಿಕೆಯನ್ನು ಕಡಿಮೆ ಮಾಡಿದ್ದಾರೆ’ ಎಂದು ಅವರು ಹೇಳಿದ್ದಾರೆ.

• ಕಬ್ಬಿನ ಕನಿಷ್ಠ ಬೆಲೆ ಏರಿಸಲು ಒಪ್ಪಿಗೆ

ನವದೆಹಲಿ, ಡಿ. 23– ಕಬ್ಬು ಬೆಳೆಗಾರರಿಗೆ ಶಾಸನ ಬದ್ಧ ಕನಿಷ್ಠ ದರಕ್ಕಿಂತ ಹೆಚ್ಚು ನೀಡಲು ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸುವ ಬಳಕೆದಾರರ ಸಕ್ಕರೆ ಬೆಲೆಯನ್ನು ಕಿಲೊಗೆ ಎರಡು ರೂ.ಗೆ ಇಳಿಸಲು ರಾಷ್ಟ್ರದಲ್ಲಿನ ಸಕ್ಕರೆ ಗಿರಣಿ ಮಾಲೀಕರು ಒಪ್ಪಿಕೊಂಡಿರುವುದಾಗಿ ಸರ್ಕಾರ ಇಂದು ಲೋಕಸಭೆಯಲ್ಲಿ ತಿಳಿಸಿದೆ.

‘ಕವಿರಾಜ ಮಾರ್ಗಕಾರ’ನ ದಾರಿಯಲ್ಲಿ ‘ಕನ್ನಡಿಗ’ನ ಸೃಜನಶೀಲ ಪುಟ್ಟ ಹೆಜ್ಜೆಗುರುತು

ಧರ್ಮ ರಾಜಕಾರಣ ಹಾಗೂ ಕನ್ನಡಿ–ಗ



ಪಡಸಾಲೆ

ರಘುನಾಥ ಚ.ಹ.

ಕನ್ನಡ ಪದಕೋಶ ಪರಂಪರೆಗೆ ಮುನ್ನುಡಿ ಬರೆದ ಫರ್ಡಿನೆಂಡ್ ಕಿಟ್ಟೆಲ್‌ರ ಸ್ಮರಣೆ (ನಿಧನ: ಡಿ. 18) ಹಾಗೂ ಕ್ರಿಸ್ತ ಜಯಂತಿ (ಡಿ. 25) ಸಂದರ್ಭಗಳನ್ನು ಹಿಂದುಮುಂದಿಟ್ಟುಕೊಂಡು ರಾಜ್ಯ ಸರ್ಕಾರವು ರೂಪಿಸಿರುವ ‘ಮತಾಂತರ ನಿಷೇಧ ಮಸೂದೆ’ಗೆ ವಿಧಾನಸಭೆ ಅನುಮೋದನೆಯ ಮುದ್ರೆ ಒತ್ತಿದೆ. ಇದೇ ಸಮಯದಲ್ಲಿ, ಮತಾಂತರದ ಬಗ್ಗೆ ಸೂಕ್ಷ್ಮವಾಗಿ ಮಾತನಾಡುವ ‘ಕನ್ನಡಿಗ’ ಹೆಸರಿನ ಸಿನಿಮಾ ‘ಜೀ 5’ ಒಟಿಟಿಯಲ್ಲಿ ತೆರೆಕಂಡಿದೆ. ಮತಾಂತರವನ್ನು ಹೇಗೆ ನೋಡಬೇಕು ಎನ್ನುವುದಕ್ಕೆ ಅಗತ್ಯವಾದ ಮಾದರಿಯೊಂದನ್ನು ಮುಂದಿಡುತ್ತಿರುವ ಕಾರಣದಿಂದಾಗಿ ‘ಕನ್ನಡಿಗ’ ಸಿನಿಮಾಕ್ಕೆ ವಿಶೇಷ ಮಹತ್ವವಿದೆ.


ಬಿ.ಎಂ. ಗಿರಿರಾಜ್ ನಿರ್ದೇಶನದ ‘ಕನ್ನಡಿಗ’ ಚರಿತ್ರೆ ಹಾಗೂ ಐತಿಹ್ಯಗಳು ಹಾಸುಹೊಕ್ಕಾಗಿರುವ ವಿಶಿಷ್ಟ ಕಥನ. ಪರ ವಿಚಾರ ಮತ್ತು ಪರ ಧರ್ಮದ ಕುರಿತ ಸೈರಣೆಯನ್ನು ಕನ್ನಡಿಗರ ಗುಣಗಳಲ್ಲೊಂದಾಗಿ ಗುರ್ತಿಸಿರುವ ಕವಿರಾಜ ಮಾರ್ಗಕಾರನ ಮಾರ್ಗದಲ್ಲಿ ಗಿರಿರಾಜ್‌ರ ಸಿನಿಮಾ ಹೆಜ್ಜೆ ಇಟ್ಟಂತಿದೆ.

‘ಕನ್ನಡಿಗ’ ಸಿನಿಮಾ ಮೇಲ್ನೋಟಕ್ಕೆ ಕನ್ನಡದ ಅಗ್ಗಳಿಕೆಯನ್ನು ಸಾರುತ್ತದೆ ಹಾಗೂ ಕನ್ನಡದ ವಿವೇಕವನ್ನು ಸಂರಕ್ಷಿಸುವ ಕಥೆ ಒಳಗೊಂಡಿದೆ. ಇಷ್ಟೇ ಆಗಿದ್ದರೆ, ನಾಡು ನುಡಿಯನ್ನು ಭಾವುಕ ನೆಲೆಗಟ್ಟಿನಲ್ಲಿ ಕಟ್ಟಿಕೊಡುವ ಸಿದ್ಧಸೂತ್ರದ ಸಿನಿಮಾಗಳ ಸಾಲಿಗೆ ‘ಕನ್ನಡಿಗ’ ಸೇರುತ್ತಿತ್ತು. ಈ ಸಿನಿಮಾ ಭಿನ್ನವಾಗುವುದು, ಕನ್ನಡ ನುಡಿಯ ಚೆಲುವಿಗಿಂತಲೂ ಮಿಗಿಲಾಗಿ ವಿವೇಕ ಹಾಗೂ ಅಂತಃಕರಣದ ಸಾಧ್ಯತೆಗಳನ್ನು ಮನಗಾಣಿಸುವುದರಲ್ಲಿ. ಜರ್ಮನಿಯಿಂದ ಕರ್ನಾಟಕಕ್ಕೆ ಬಂದ ಕಿಟ್ಟೆಲ್ ಅವರಿಗೆ ತಾವು ಭೇಟಿಯಾಗುವ ಗುಣಭದ್ರನ ವ್ಯಕ್ತಿತ್ವದ ಸೊಗಸು ಹಾಗೂ ಕನ್ನಡ ಬೇರೆ ಬೇರೆ ಅನ್ನಿಸುವುದಿಲ್ಲ. ಬುಳ್ಳನ ಮೀನು ಹಿಡಿಯುವ ಚಾತುರ್ಯ, ಒಡೆಯನ ಬಗೆಗಿನ ನೆಚ್ಚುಗೆ ಹಾಗೂ ಅವನ ಕನ್ನಡವು ಮೊಗ್ಲಿಂಗ್‌ರ ಪಾಲಿಗೆ ಬೇರೆಯೆನ್ನಿಸುವುದಿಲ್ಲ. ಭಾಷೆಯೊಂದು ತನ್ನ ಸಂವಹನದ ಸಾಧ್ಯತೆಯಾಚೆಗೆ ಮಾನವೀಯ ಮೌಲ್ಯಗಳ ನಾಡಿಯೂ ಆಗಬಹುದಾದ ನುಡಿಪವಾಡವನ್ನು ಹಿಡಿದಿಡಲು ‘ಕನ್ನಡಿಗ’ ಪ್ರಯತ್ನಿಸಿದೆ.

ಇತಿಹಾಸದ ವ್ಯಕ್ತಿತ್ವಗಳೊಂದಿಗೆ ನಿರ್ದೇಶಕರ ಸೃಜನಶೀಲತೆಯಲ್ಲಿ ಮೂಡಿದ ಪಾತ್ರಗಳನ್ನು ಒಳಗೊಂಡಿರುವ ಸಿನಿಮಾದ ಕಥೆ, ಮೂರು ಶತಮಾನಗಳ ಹರಹನ್ನು ಹೊಂದಿದೆ. ಹದಿನಾರನೇ ಶತಮಾನದ ರಾಣಿ ಚೆನ್ನಭೈರಾದೇವಿಯಿಂದ ದ್ವೀಪವೊಂದನ್ನು ಕನ್ನಡ ದೀಕ್ಷೆಯ ರೂಪದಲ್ಲಿ ಪಡೆವ ಸಮಂತಭದ್ರ ಎನ್ನುವ ಲಿಪಿಕಾರನಿಂದ ಆರಂಭವಾಗುವ ಸಿನಿಮಾ, ಆತನ ವಂಶಸ್ಥನಾದ ಹತ್ತೊಂಬತ್ತನೇ ಶತಮಾನದ ಗುಣಭದ್ರ ಎನ್ನುವ ವ್ಯಕ್ತಿ ‘ಕನ್ನಡಧರ್ಮದೊಂದಿಗೆ ಮನುಷ್ಯಧರ್ಮ’ವನ್ನು ಒಟ್ಟಿಗೆ ಎತ್ತಿಹಿಡಿಯುವ ಮೂಲಕ ಕೊನೆಗೊಳ್ಳುತ್ತದೆ.

ಮತಾಂತರದ ಉದ್ದೇಶದಿಂದ ಕನ್ನಡದ ನೆಲಕ್ಕೆ ಬಂದ ಫರ್ಡಿನೆಂಡ್ ಕಿಟ್ಟೆಲ್ ಹಾಗೂ ಮೊಗ್ಲಿಂಗ್ ಅಂಥವರು ಕನ್ನಡ ಕಟ್ಟುವ ಕೆಲಸದಲ್ಲಿ ತೊಡಗಿಕೊಂಡಿದ್ದನ್ನು ಕಾಣಿಸುವ ಸಿನಿಮಾ, ಇನ್ನೊಂದೆಡೆ ಮತದ ಸೊಕ್ಕಿನಲ್ಲಿ ನಡೆಯುವ ವರ್ಗದ ಕ್ರೌರ್ಯವನ್ನೂ ಚಿತ್ರಿಸಿದೆ. ಧರ್ಮದ ದಾರಿಯಲ್ಲಿ ನಮ್ಮ ನಡೆ ಮತ್ತು ಆಯ್ಕೆ ಯಾವುದಾಗಿರಬೇಕು ಎನ್ನುವುದನ್ನು ‘ಕನ್ನಡಿಗ’ ಮಾರ್ಮಿಕವಾಗಿ ಹೇಳುತ್ತದೆ. ಭಾಷೆ, ಮತ, ಧರ್ಮ, ಸ್ವಾತಂತ್ರ್ಯ ಚಳವಳಿ– ಹೀಗೆ ಅನೇಕ ಸಂಗತಿಗಳನ್ನು ತಳುಕು ಹಾಕಿಕೊಂಡಿರುವ ಸಿನಿಮಾ, ಮನುಷ್ಯ ಧರ್ಮದ ಅಗತ್ಯವನ್ನು ಪ್ರತಿಪಾದಿಸುವುದರೊಂದಿಗೆ ಕೊನೆಗೊಳ್ಳುತ್ತದೆ.

ಗಿರಿರಾಜ್‌ರ ಈ ಸಿನಿಮಾವನ್ನು ಕನ್ನಡದ ಹೆಸರಿನಲ್ಲಿ ಹಾಗೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ವರ್ತಮಾನದ ರಾಜಕಾರಣದ ಹಿನ್ನೆಲೆಯಲ್ಲಿ ನೋಡುವುದು ಸಾಧ್ಯವಿದೆ. ಸಿನಿಮಾದಲ್ಲಿ, ಕನ್ನಡ ಕಟ್ಟುವ ಕೆಲಸ ಹಾಗೂ ಕ್ರಿಸ್ತನ ಮಂದಿರ ನಿರ್ಮಾಣ ಎರಡೂ ಜೊತೆಜೊತೆಗೇ ಸಾಗುತ್ತವೆ. ಕಿಟ್ಟೆಲ್‌ರಿಗೆ ಕನ್ನಡ ಸಂಸ್ಕೃತಿ ತನ್ನದೆನ್ನಿಸುವಂತೆ, ಗುಣಭದ್ರನಿಗೆ ಏಸುವಿನ ವಿಚಾರಧಾರೆಗೂ ತಾನು ರೂಢಿಸಿಕೊಂಡ ಜೀವನನೋಟಕ್ಕೂ ವ್ಯತ್ಯಾಸ ಕಾಣಿಸುವುದಿಲ್ಲ. ಬುಳ್ಳನಂಥ ಕನಿಷ್ಠನ ಕುರಿತು ‘ಮಂಗಳೂರು ಸಮಾಚಾರ’ ಪತ್ರಿಕೆಯಲ್ಲಿ ಟಿಪ್ಪಣಿ ಬರೆಯುವ ಮೊಗ್ಲಿಂಗ್, ಅವನಿಗೆ ಕೊರಳಿನಲ್ಲಿನ ಚಿನ್ನದ ಶಿಲುಬೆ ಸರವನ್ನು ಮೆಚ್ಚುಗೆಯಿಂದ ನೀಡುತ್ತಾರೆ. ‘ದಯೆಯೇ ಧರ್ಮದ ಮೂಲ’ ಎನ್ನುವಂತಹ ಈ ನಿರ್ವ್ಯಾಜ ಪ್ರೇಮದ ಇನ್ನೊಂದು ತುದಿಯಲ್ಲಿ, ಮೈಮನಗಳ ತುಂಬ ಧರ್ಮದ ಸೊಕ್ಕು ತುಂಬಿಕೊಂಡವರ ಅಮಾನವೀಯ ನಡವಳಿಕೆಯಿದೆ. ಆ ದೌರ್ಜನ್ಯಕ್ಕೆ ನಲುಗಿದ ಗುಣಭದ್ರನ ತಮ್ಮ ಪ್ರತೀಕಾರದ ದಾರಿಯನ್ನು ನಂಬುತ್ತಾನೆ. ಹಿಂಸೆಗೆ ಗುಣಭದ್ರನ ಮಗಳು ಬಲಿಯಾಗುತ್ತಾಳೆ; ಕಿಟ್ಟೆಲ್ ಜರ್ಮನಿಗೆ ತೆರಳಿದ ನಂತರ ಒಂಟಿಯಾಗಿದ್ದ ಜರ್ಮನ್ ಹೆಣ್ಣುಮಗಳು ದಹಿಸಿಹೋಗುತ್ತಾಳೆ. ಅಮಾಯಕ ಹೆಣ್ಣುಮಕ್ಕಳ ಸಾವು ಹಾಗೂ ಬುಳ್ಳನ ಮೇಲೆ ನಡೆಯುವ ದೌರ್ಜನ್ಯ ‘ಧರ್ಮಭೀರು’ಗಳ ಸಾಧನೆ–ಸಾಹಸದ ಫಲ. ಧರ್ಮ ಸಂರಕ್ಷಣೆಯ ಸಂಘರ್ಷಗಳಲ್ಲಿ ಸಾಮಾನ್ಯವಾಗಿ ಮಿಕಗಳಂತೆ ಬಲಿಯಾಗುವುದು ದುರ್ಬಲ ವರ್ಗಗಳೇ ಎನ್ನುವ ಕಠೋರಸತ್ಯಕ್ಕೆ ಸಿನಿಮಾ ಅಡಿಗೆರೆ ಎಳೆದಿದೆ.



ಜರ್ಮನ್ ಹೆಣ್ಣುಮಗಳ ಮೌನವ್ರತ ಹಾಗೂ ಗಂಡನ ಬಗ್ಗೆ ನಂಬಿಕೆ ಕಳೆದುಕೊಳ್ಳುವ ಗುಣಭದ್ರನ ಹೆಂಡತಿ ಮೂಕಳಾಗುವುದನ್ನು ಮಾತಿನ ನಿರರ್ಥಕತೆಯ ಹಿನ್ನೆಲೆಯಲ್ಲಷ್ಟೇ ನೋಡಬೇಕಿಲ್ಲ. ಮೌನದ ಆ ಚಿತ್ರಣ, ಸಮಾಜದ ದುರ್ಬಲ ವರ್ಗಗಳ ಮಾತು ಶಕ್ತಿ ಕಳೆದುಕೊಂಡಿರುವುದರ ಚಿತ್ರಣವೂ ಹೌದು.

ಗುಣಭದ್ರನ ಕನ್ನಡ ಕೈಂಕರ್ಯಕ್ಕೆ ಯಾವ ನೆರವನ್ನೂ ನೀಡದ ಮಠ ಹಾಗೂ ಅಧಿಕಾರಶಾಹಿಗೆ, ಆತ ಸಾಲದಲ್ಲೇ ಉಳಿಯುವುದು –ಯಥಾಸ್ಥಿತಿಯ ರಕ್ಷಣೆ– ಮುಖ್ಯವಾಗಿದೆ. ಕಿಟ್ಟೆಲ್‌ರ ಸ್ನೇಹದ ಮೂಲಕ ತನ್ನ ಭೂಮಿಯನ್ನು ಗುಣಭದ್ರ ಮರಳಿ ಪಡೆದಾಗ ಉಂಟಾಗುವ ಬದಲಾವಣೆಯು ವ್ಯವಸ್ಥೆಗೆ ಅಸಹನೆ ಮೂಡಿಸುತ್ತದೆ. ಜನಸಾಮಾನ್ಯರು ಹಾಗೂ ದುರ್ಬಲ ವರ್ಗದವರ ಹಿತಾಸಕ್ತಿ ಸಂದರ್ಭದಲ್ಲಿ ಮೆಳ್ಳೆಗಣ್ಣಿನಿಂದ ವರ್ತಿಸುವ ಮಠ ಹಾಗೂ ಅಧಿಕಾರಶಾಹಿ, ಧರ್ಮದ ವಿಷಯ ಬಂದಾಗ ಎಲ್ಲರ ಪ್ರತಿನಿಧಿಯಂತೆ ವರ್ತಿಸುವುದರ ಜೊತೆಗೆ ಪೂರ್ಣ ಕುರುಡಾಗಿಬಿಡುತ್ತವೆ.

ಇತಿಹಾಸದ ಘಟನೆಗಳನ್ನು ಬಿಡಿ ಬಿಡಿಯಾಗಿ ಹೆಕ್ಕಿ ಅವುಗಳನ್ನು ವರ್ತಮಾನದ ಅಗ್ನಿಕುಂಡಕ್ಕೆ ತುಪ್ಪದ ರೀತಿಯಲ್ಲಿ ಬಳಸಲಾಗುತ್ತಿರುವ ಸಂದರ್ಭದಲ್ಲಿ, ಮನಸ್ಸುಗಳನ್ನು ಕಟ್ಟುವ ನಿಟ್ಟಿನಲ್ಲಿ ಚರಿತ್ರೆಯನ್ನು ಬಳಸಿಕೊಳ್ಳುವ ಮಾನವೀಯ ವಿಧಾನಗಳ ಬಗ್ಗೆ ‘ಕನ್ನಡಿಗ’ ಮಾತನಾಡುತ್ತಿದೆ. ಸಿನಿಮಾದ ಅಂತ್ಯದಲ್ಲಿ, ಧರ್ಮಾಂಧರ ಕಿಚ್ಚಿಗೆ ಸಿಕ್ಕ ಕ್ರಿಶ್ಚಿಯನ್ ಧರ್ಮ ಪ್ರಚಾರಕಿಯ ಮಗುವನ್ನು ಬುಟ್ಟಿಯಲ್ಲಿಟ್ಟುಕೊಂಡ ಗುಣಭದ್ರ ನದಿಯಲ್ಲಿ ಸಾಗುವ ದೃಶ್ಯ, ಬಾಲಕೃಷ್ಣನೊಂದಿಗೆ ಯಮುನೆಗಿಳಿದ ವಸುದೇವನನ್ನು ನೆನಪಿಸುತ್ತದೆ. ಮಗುವಿನೊಂದಿಗೆ ನದಿಗಿಳಿದ ಗುಣಭದ್ರನಿಗೆ ತೆಪ್ಪದೊಂದಿಗೆ ಬರುವ ಭೂತದೈವ ಆಸರೆಯಾಗಿ ಎದುರಾಗುತ್ತದೆ. ಕೆಳವರ್ಗದ ದೈವ, ಮೇಲ್ವರ್ಗಕ್ಕೆ ಸೇರಿದ ಗುಣಭದ್ರ, ವಿದೇಶಿ ಜೀನ್ಸ್‌ನ ಕಂದಮ್ಮ – ಚಲನಶೀಲ ನದಿಯ ನಡುವಿನ ಈ ತ್ರಿವೇಣಿ ಸಂಗಮ ಕಾವ್ಯನ್ಯಾಯದಂತಿದೆ. ಸಿನಿಮಾದ ‘ಬಾಲ ಕನ್ನಡಿಗ’ನ ಜೀನ್ಸ್‌ನಲ್ಲಿ ಕನ್ನಡದ ಕಣಗಳೇ ಇಲ್ಲವೆನ್ನುವುದನ್ನು ನೆನಪಿಸಿಕೊಳ್ಳಬೇಕು. ಕನ್ನಡತನದ ಚಹರೆ ಕಾಣಬೇಕಿರುವುದು ಜೀನ್ಸ್‌ಗಳಲ್ಲಲ್ಲ; ‘ಕವಿರಾಜ ಮಾರ್ಗಕಾರ’ ಹೇಳಿದ ಸಾಟಿ ಮನುಷ್ಯನ ಬಗೆಗಿನ ಸೈರಣೆಯಲ್ಲಿ ಎನ್ನುವುದನ್ನು ಸಾವಿನ ಗರ್ಭದಿಂದ ಉಳಿದುಬರುವ ‘ಬಾಲ ಕನ್ನಡಿಗ’ನ ರೂಪಕ ಹೇಳುವಂತಿದೆ.

ನಾವು ಬದುಕುತ್ತಿರುವ ಸಮಾಜಕ್ಕೂ ಸಿನಿಮಾಕ್ಕೂ ಹೆಚ್ಚಿನ ವ್ಯತ್ಯಾಸ ಇಲ್ಲದಂತಿರುವ ಸನ್ನಿವೇಶದಲ್ಲಿ, ಮತಾಂತರದ ಕುರಿತು ರೋಷಾವೇಶದಿಂದ ಮಾತನಾಡುತ್ತಿರುವವರನ್ನು ನೋಡಿದರೆ ಬಾಯಿ ಬಂದಾಗುತ್ತದೆ. ತಮ್ಮ ಸಮಾಜದ ಬಹುಸಂಖ್ಯಾತ ವರ್ಗ ಅಸ್ಪೃಶ್ಯರಾಗಿ ಬಾಳುತ್ತಿರುವಲ್ಲಿ ತಮ್ಮ ಪಾಲೂ ಇರಬಹುದು ಎನ್ನುವ ಸಣ್ಣ ಪಾಪಪ್ರಜ್ಞೆಯನ್ನೂ ಈ ಧರ್ಮನಿಷ್ಠರು ಉಳಿಸಿಕೊಂಡಿಲ್ಲ. ಪಾಪಪ್ರಜ್ಞೆ ನಮ್ಮನ್ನು ದೇವರಿಗೆ ಹತ್ತಿರವಾಗಿಸುತ್ತದೆಯೇ ಹೊರತು ಧರ್ಮದ ಬಗೆಗಿನ ಹಮ್ಮಲ್ಲ ಎನ್ನುವ ಅರಿವಿನಿಂದಲೂ ಅವರು ದೂರವಾದಂತಿದೆ. ಪಾಪಪ್ರಜ್ಞೆಯಿಂದ ದೂರವಾದಾಗಲಷ್ಟೇ ನಮ್ಮ ಜನರ ಸಂಕಷ್ಟಗಳಿಗೆ ಕುರುಡಾಗುತ್ತೇವೆ, ಅವರ ಧರ್ಮದ ಚಹರೆಗಳು ಮಾತ್ರ ಸೂರ್ಯಸ್ಪಷ್ಟವಾಗಿ ಕಾಣತೊಡಗುತ್ತವೆ. ಈ ವೈರುಧ್ಯವನ್ನು ‘ಕನ್ನಡಿಗ’ ಮಾರ್ಮಿಕವಾಗಿ ಚಿತ್ರಿಸಿದೆ.

ಚುರುಮುರಿ



ಇಪ್ಪತ್ತೊಂದಕ್ಕೆ ವಿದಾಯ

• ಕೆ.ವಿ.ರಾಜಲಕ್ಷ್ಮಿ

‘21 ಇನ್ನೇನು ಮುಗಿದೇ ಹೋಗುತ್ತೆ… ಈ ವರ್ಷವಂತೂ ಭಯಂಕರವಾಗೇ ಇತ್ತು. ಅದೇನು ಮಳೆ, ಎಲ್ಲೆಲ್ಲೂ ಬರೇ ನೀರು. ಮನೆಯಿಂದ ರಸ್ತೆಗೆ ಬರೋಕ್ಕೆ ಬೋಟ್ ಬಳಸುವಷ್ಟು! ಓ ಮೈ ಗಾಡ್’ ಅತ್ತೆ ಕ್ಯಾಲೆಂಡರ್ ನೋಡಿದರು.

‘ಓ ಮೈಕ್ರಾನ್ ಅನ್ನಿ ಅಜ್ಜಿ’ ಪುಟ್ಟಿ ಕಿಸಕ್ಕನೆ ನಕ್ಕಳು. ‘ಹ್ಞೂಂ, ಡೆಲ್ಟಾ ಆಯಿತು ಈಗ ಈ ಅವತಾರದಲ್ಲಿ… ನಾವು ನಮ್ಮ ಜಾಗ್ರತೆಯಲ್ಲಿ ಇರಬೇಕು’ ಅತ್ತೆಯವರ ಮಾತು ಮುಗಿಯುವ ಮೊದಲೇ ಕಂಠಿ ಹಾಜರ್, ಉಣ್ಣೆಯ ಮಫ್ಲರ್‌ನಿಂದ ಮುಖ, ತಲೆಯನ್ನು ಬಿಗಿದು, ಕಣ್ಣು ಮಾತ್ರ ಕಾಣುವಷ್ಟು ಉಳಿಸಿ!

‘ಅಬ್ಬಾ ಅದೇನು ಚಳಿ’ ಎನ್ನುತ್ತಾ ಚೇರಿನಲ್ಲಿ ಮುದುರಿದ. ‘ನಾಲ್ಕು ದಿನದಿಂದ ನಾಪತ್ತೆ? ಎಲ್ಲಿತ್ತೋ ಸವಾರಿ?’ ಛೇಡಿಸಿದೆ.

‘ಇಪ್ಪತ್ತೊಂದಕ್ಕೆ ವಿದಾಯ- ಹೊಸ ವರ್ಷಕ್ಕೆ ಸ್ವಾಗತ’ ಕಾರ್ಯಕ್ರಮ ಬಾಸ್ ಮನೇಲಿ, ಅದಕ್ಕೇ ಬಿಝಿ’ ಬೀಗಿದ.

‘ಏನು ಆಚರಣೆನೋ? ಈ ವರ್ಷ ಕಷ್ಟಗಳ ಸರಮಾಲೆಯೇ ಆಯಿತು, ಕೊನೆಗೆ ತಿನ್ನೋ ತರಕಾರೀನೂ ಬಿಡಲಿಲ್ಲ, ಒಂದಕ್ಕಿಂತ ಒಂದರ ರೇಟು ಪೈಪೋಟಿಯಲ್ಲಿ ನೂರನ್ನು ದಾಟಿದವು!’

‘ಸಡಗರಪಡೋಕ್ಕೆ ಹಲವು ಸಂಗತಿಗಳಿವೆ. ಒಲಿಂಪಿಕ್ಸ್, ಪ್ಯಾರಾ ಒಲಿಂಪಿಕ್ಸ್‌ಗಳಲ್ಲಿ ನಾವು ಜಯಭೇರಿ ಬಾರಿಸಿದ್ದೀವಿ, ಕೋವಿಡ್‌ನ ಕಂಟ್ರೋಲ್‌ನಲ್ಲಿ ಇಟ್ಟಿದ್ದೀವಿ, ಮಕ್ಕಳು ಶಾಲೆ ಮುಖ ಕಂಡಿವೆ, ಮನೆಯವರಿಗೆ ಅಷ್ಟರ ಮಟ್ಟಿಗೆ ರಿಲೀಫ್ ಅಲ್ವೇ’ ನಾನು ನನ್ನ ಅನಿಸಿಕೆ ಹೊರಬಿಟ್ಟೆ.

‘ಎಲ್ಲಕ್ಕಿಂತ ಮುಖ್ಯವಾಗಿ ಭುವನ ಸುಂದರಿ ಪಟ್ಟ ನಮ್ಮ ಭಾರತದ ಸುಂದರಿಯ ಪಾಲು’ ಪುಟ್ಟಿ ಭುಜ ಕುಣಿಸಿದಳು.

‘ಬಾಸ್ ಮನೇಲಿ ಲಿಮಿಟೆಡ್ ಗೆಸ್ಟ್‌ಗಳು. ವಿಶೇಷ ಅಂದ್ರೆ ಬಾಸ್ ಮಿಸೆಸ್ ‘ಬೆಸ್ಟ್ ಹೋಮ್ ಮೇಕರ್’ ಬಿರುದು ಕೊಟ್ಟು ನಾಲ್ಕೈದು ಮಂದಿಗೆ ಸನ್ಮಾನ ಇಟ್ಕೊಂಡಿದ್ದಾರೆ. ಶ್ರೀಮತಿ ಹೆಸರೂ ಲಿಸ್ಟ್‌ನಲ್ಲಿ ಇದೆ…’ ನನ್ನವಳ ಕಣ್ಣಲ್ಲಿ ಸಣ್ಣ ಕಿಡಿ.

‘ಯಾಕೋ ಬಲಗಣ್ಣು ಅದುರಿದಾಗಲೇ ಅಂದುಕೊಂಡೆ ಏನೋ ಸಿಹಿಸುದ್ದಿ ಇರುತ್ತೆ ಅಂತ’ ನನ್ನವಳತ್ತ ನೋಡಿದೆ. ನನ್ನವಳು ನಾಚಿ, ‘ಕಾಫಿ ತಂದೆ’ ಎನ್ನುತ್ತಾ ಅಡುಗೆಮನೆಯತ್ತ ಹೋದಳು.

ಸಂಗತ

ಶಾಲೆಗೆ ಬೇಕು ಶಿಸ್ತು ನೀತಿ

ಈ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನೂ ತೊಡಗಿಸಿಕೊಳ್ಳುವುದು ಪರಿಣಾಮಕಾರಿ

• ಡಾ. ಎಚ್.ಬಿ.ಚಂದ್ರಶೇಖರ್

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದ ಪ್ರೌಢಶಾಲೆಯ ವಿದ್ಯಾರ್ಥಿಗಳು ಇತ್ತೀಚೆಗೆ ಶಿಕ್ಷಕರೊಬ್ಬರಿಗೆ ಕಿರುಕುಳ ನೀಡಿ ಪುಂಡಾಟಿಕೆ ಮೆರೆದ ಪ್ರಕರಣವು ಮಕ್ಕಳು ತೋರುವ ಅಶಿಸ್ತಿನ ವರ್ತನೆ ಹಾಗೂ ಅದಕ್ಕೆ ಪ್ರತಿಯಾಗಿ ಶಾಲೆಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತಂತೆ ಎಲ್ಲೆಡೆ ಚರ್ಚೆಗಳನ್ನು ಹುಟ್ಟುಹಾಕಿದೆ. ಮಕ್ಕಳ ಇಂಥ ವರ್ತನೆಗೆ ಕೆಲವರು ಉಗ್ರ ಶಿಕ್ಷೆಯ ಅಗತ್ಯವನ್ನು ಪ್ರತಿಪಾದಿಸಿದರೆ, ಇನ್ನು ಕೆಲವರು ಮಕ್ಕಳಿಗೆ ಶಿಕ್ಷೆಯ ಭಯವಿಲ್ಲದೇ ಇರುವುದರಿಂದ ಅವರ ವರ್ತನೆ ಮಿತಿ ಮೀರುತ್ತಿದೆ ಎನ್ನುತ್ತಿದ್ದಾರೆ.

ಸಂಬಂಧಿಸಿದ ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡಿರಬಹುದಾದ ಅತಿ ಸಲುಗೆ, ಔದಾರ್ಯದ ಕಾರಣದಿಂದ ಕೆಲ ಮಕ್ಕಳು ಇಂಥ ವರ್ತನೆಯನ್ನು ತೋರ್ಪಡಿಸಿರಬಹುದೇ ಎಂಬ ಸಂಶಯವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ.

ನಲ್ಲೂರು ಪ್ರಕರಣದ ವಿಡಿಯೊ ಎಲ್ಲೆಡೆ ಹರಿದಾಡಿದ ಪರಿಣಾಮ, ಸಂಬಂಧಿಸಿದ ಶಾಲೆಯ ಶಿಕ್ಷಕರು, ಪೋಷಕರು, ಸ್ಥಳೀಯ ಸಮುದಾಯದ ಮೇಲೆ ತೀವ್ರ ಒತ್ತಡ ಸೃಷ್ಟಿಯಾಯಿತು. ಇದರ ಪರಿಣಾಮ ಸಭೆಗಳು ನಡೆದು, ತಪ್ಪು ಮಾಡಿದರೆನ್ನಲಾದ ವಿದ್ಯಾರ್ಥಿಗಳು ಶಿಕ್ಷಕರ ಕಾಲಿಗೆ ಬಿದ್ದು ಕ್ಷಮೆ ಕೇಳಿದ ಘಟನೆಯ ವಿಡಿಯೊ ಸಹ ಮಾಧ್ಯಮಗಳಲ್ಲಿ ಪ್ರಸಾರವಾಯಿತು. ಸೂಕ್ಷ್ಮ ಸಂವೇದನೆಗಳಿಂದ ಹೊರತಾಗಿಸಿ ಎಲ್ಲವನ್ನೂ ಚಿತ್ರೀಕರಿಸಿ ವಿಡಿಯೊ ಹರಿಬಿಡುವ ಅಭ್ಯಾಸವು ಒಳಿತಲ್ಲ.


ತಪ್ಪೆಸಗುವ ಮಕ್ಕಳ ಚಿತ್ರಗಳನ್ನು ಮಸುಕು ಮಾಡಿ ತೋರಿಸಬೇಕೆಂಬ ನಿಯಮ ಮೀರಿ ವಿಡಿಯೊಗಳನ್ನು ಪ್ರಸಾರ, ಪುನಃ ಪ್ರಸಾರ ಮಾಡುವುದು ಸಂಬಂಧಿಸಿದ ಮಕ್ಕಳು, ಪೋಷಕರು ಹಾಗೂ ಶಿಕ್ಷಕರ ಮನಸ್ಸಿಗೆ ಗಾಸಿಯುಂಟು ಮಾಡುವ ಜೊತೆಗೆ ಅನೇಕ ಪೂರಕ ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಪ್ರತೀ ಶಾಲೆಯು ಶಿಸ್ತಿಗೆ ಸಂಬಂಧಿಸಿದಂತೆ ತನ್ನದೇ ಆದ ಕಾರ್ಯನೀತಿಯನ್ನು ಹೊಂದುವುದು ಅಗತ್ಯ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಶಾಲೆಯ ವಿವಿಧ ಸನ್ನಿವೇಶಗಳಲ್ಲಿ ಯಾವ ರೀತಿ ವರ್ತಿಸಬೇಕು ಎಂಬ ನಿರೀಕ್ಷೆಗಳ ಪಟ್ಟಿಯನ್ನು ಶಾಲೆಯ ಶಿಸ್ತಿನ ಕಾರ್ಯನೀತಿಯು ಹೊಂದಿರಬೇಕಾಗುತ್ತದೆ. ಇದರ ಜೊತೆ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಯಾವ ರೀತಿ ವರ್ತಿಸಬೇಕು ಎಂಬ ಕುರಿತ ಉಲ್ಲೇಖವೂ ಇದರಲ್ಲಿರಬೇಕು. ಒಂದೊಮ್ಮೆ ಶಾಲೆಯು ನಿಗದಿಪಡಿಸಿದ ಶಿಸ್ತಿನ ನಿಯಮಗಳನ್ನು ವಿದ್ಯಾರ್ಥಿಗಳು ಉಲ್ಲಂಘಿಸಿದರೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನೂ ಈ ನೀತಿಯು ಒಳಗೊಂಡಿರಬೇಕು.

ಶಿಸ್ತಿನ ನೀತಿಯನ್ನು ರೂಪಿಸುವ ಮೊದಲ ಹಂತವಾಗಿ ಶಾಲೆಯ ಎಲ್ಲಾ ಶಿಕ್ಷಕರ ಜೊತೆ ಮುಖ್ಯ ಶಿಕ್ಷಕರು ಸಮಾಲೋಚನೆ ನಡೆಸಬೇಕು. ನಂತರ ವಿದ್ಯಾರ್ಥಿಗಳ ಜೊತೆಯೂ ಸಮಾಲೋಚನೆ ನಡೆಸಿ, ಅವರ ಅಭಿಪ್ರಾಯಗಳನ್ನೂ ಸಂಗ್ರಹಿಸಬೇಕು. ಸಾಮಾನ್ಯವಾಗಿ ನಿಯಮ ರೂಪಿಸುವಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು ಅವುಗಳನ್ನು ಉಲ್ಲಂಘಿಸುವ ಪ್ರಕರಣಗಳು ವಿರಳ.

ಶಾಲೆಯು ಶಿಸ್ತಿನ ಕುರಿತಾಗಿ ರೂಪಿಸಿದ ಕರಡು ನೀತಿಯನ್ನು ಪೋಷಕರ ಜೊತೆ ಚರ್ಚಿಸಿ ಅಂತಿಮಗೊಳಿಸಬೇಕು. ಅಂತಿಮಗೊಂಡ ನೀತಿಯನ್ನು ಸಂಬಂಧಿಸಿದ ಎಲ್ಲರಿಗೂ ತಿಳಿಯುವಂತೆ ಪ್ರಕಟಿಸಬೇಕು. ಈ ನೀತಿಯಲ್ಲಿ ವಿದ್ಯಾರ್ಥಿಗಳು ತೋರುವ ಅಶಿಸ್ತಿನ ವರ್ತನೆಗಳಿಗೆ ಮನೋವೈಜ್ಞಾನಿಕ ಹಿನ್ನೆಲೆಗಳಿಂದ ನೀಡಬಹುದಾದ ಲಘು ದಂಡನೆಗಳನ್ನು ವಿಧಿಸುವ ಅಂಶಗಳು ಇರುವಂತೆ ನೋಡಿಕೊಳ್ಳಬೇಕು. ದೈಹಿಕ ಶಿಕ್ಷೆ ನೀಡಿಕೆಯ ಅಂಶಗಳು ಇಲ್ಲದಂತೆ ಎಚ್ಚರ ವಹಿಸಬೇಕು.

ಶಾಲೆಯು ಅಳವಡಿಸಿಕೊಳ್ಳುವ ಶಿಸ್ತಿನ ಕಾರ್ಯನೀತಿಯ ಜೊತೆ ಶಿಕ್ಷಕರು ತರಗತಿಯೊಳಗೆ ಹಾಗೂ ತರಗತಿಯಾಚೆ ವಿದ್ಯಾರ್ಥಿಗಳೊಂದಿಗೆ ಯಾವ ರೀತಿ ಒಡನಾಟ ಹೊಂದಿರುತ್ತಾರೆ ಹಾಗೂ ವಿದ್ಯಾರ್ಥಿಗಳಿಂದ ಯಾವ ರೀತಿಯ ಶಿಸ್ತಿನ ವರ್ತನೆಯನ್ನು ನಿರೀಕ್ಷಿಸುತ್ತಾರೆ ಎಂಬ ಅಂಶವು ಪ್ರಮುಖವಾಗುತ್ತದೆ. ಅಶಿಸ್ತನ್ನು ಸಹಿಸುವುದಿಲ್ಲ ಎಂಬ ಸಂದೇಶವನ್ನು ಆರಂಭದಿಂದಲೂ ವಿದ್ಯಾರ್ಥಿಗಳಿಗೆ ರವಾನಿಸುವುದು ಅಗತ್ಯ. ಕಠಿಣ ಸಂದೇಶಗಳನ್ನು ರವಾನಿಸುವ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳು ಸುಲಭವಾಗಿ ಅಶಿಸ್ತಿನ ವರ್ತನೆ ತೋರುವುದಿಲ್ಲ ಎಂಬುದನ್ನು ನಾವು ಗಮನಿಸಬಹುದು.



ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಅದಮ್ಯ ಶಕ್ತಿ, ಉತ್ಸಾಹ ಮತ್ತು ಧೈರ್ಯ ಇರುತ್ತವೆ. ಇವು ಸರಿಯಾದ ದಿಕ್ಕಿನಲ್ಲಿ ಪ್ರವಹಿಸುವಂತೆ ಮಾಡಲು ವಿದ್ಯಾರ್ಥಿಗಳನ್ನು ದೈಹಿಕ ಚಟುವಟಿಕೆ, ಆಟೋಟಗಳಲ್ಲಿ ಸಕ್ರಿಯವಾಗಿ ತೊಡಗಿಸಿ, ಅವರು ಆರೋಗ್ಯಕರವಾಗಿ ದಣಿಯುವಂತೆ ಮಾಡಬೇಕು. ಶಾಲೆಯ ಪ್ರಾರ್ಥನೆಯ ವೇಳೆ ಕೆಲ ನಿಮಿಷಗಳ ಕಾಲ ಮಕ್ಕಳಿಗೆ ಧ್ಯಾನದ ಅಭ್ಯಾಸವನ್ನು ಮಾಡಿಸುವುದೂ ಪರಿಣಾಮಕಾರಿಯಾಗುತ್ತದೆ.

ಶಿಕ್ಷೆ ನೀಡಿಕೆಗಿಂತಲೂ ಮನೋವೈಜ್ಞಾನಿಕ ಕ್ರಮಗಳು ಶಿಸ್ತು ಕಾಪಾಡಲು ನೆರವಾಗುತ್ತವೆ ಎಂಬ ನಂಬಿಕೆ, ವಿಶ್ವಾಸ ಶಿಕ್ಷಕರಿಗೆ ಇರುವುದು ಬಹಳ ಮುಖ್ಯವಾದ ಅಂಶ. ವಿದ್ಯಾರ್ಥಿಗಳ ಅಶಿಸ್ತು, ಪುಂಡಾಟಿಕೆ ಮಿತಿಮೀರಿದ ಬಿಡಿ ಪ್ರಕರಣಗಳ ಬಗ್ಗೆ ಶೈಕ್ಷಣಿಕ ಹಾಗೂ ಮನೋವೈಜ್ಞಾನಿಕ ಹಿನ್ನೆಲೆಗಳಿಂದ ಪ್ರಕರಣವಾರು ಅಧ್ಯಯನ ಕೈಗೊಂಡು ಅಶಿಸ್ತನ್ನು ಕೊನೆಗಾಣಿಸಲು ಸಾಮಾನ್ಯವಾದ ದೂರಗಾಮಿ ಪರಿಹಾರಗಳ ಕುರಿತಂತೆ ತೆಗೆದುಕೊಳ್ಳಬಹುದಾದ ಕಾರ್ಯತಂತ್ರ ಮತ್ತು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಅಗತ್ಯ ಇದೆ.

ವಾಚಕರ ವಾಣಿ

ವರ್ಷಾಚರಣೆಗೆ ನಿರ್ಬಂಧ: ಸೂಕ್ತ ನಿರ್ಧಾರ

ಕೋವಿಡ್ ರೂಪಾಂತರ ತಳಿ ಓಮೈಕ್ರಾನ್ ಹರಡುವಿಕೆ ತಡೆಯಲು ಸರ್ಕಾರವು ರಾಜ್ಯದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ನಿರ್ಬಂಧ ಹೇರಿರುವುದು ಸೂಕ್ತ ನಿರ್ಧಾರವಾಗಿದೆ. ಹೊಸ ವರ್ಷದ ಸಂಭ್ರಮದ ನೆಪದಲ್ಲಿ ಯುವಜನ ಮೈಮರೆತು ಗುಂಪು ಗುಂಪಾಗಿ, ಸಾಮಾಜಿಕ ಅಂತರ ಕಾಪಾಡಿಕೊಳ್ಳದೆ ಒಂದೆಡೆ ಸೇರಿ ಸಂಭ್ರಮಿಸುವುದು ಸಾಮಾನ್ಯ. ಓಮೈಕ್ರಾನ್ ಹರಡುವಿಕೆ ಕುರಿತು ಆತಂಕ ಇರುವ ಈ ಸಂದರ್ಭದಲ್ಲಿ ನಾಡಿನ ಜನರ ಸುರಕ್ಷತೆ ದೃಷ್ಟಿಯಿಂದ ತಜ್ಞರ ಸಲಹೆ ಮೇರೆಗೆ, ಕಟ್ಟುನಿಟ್ಟಿನ ಮಾರ್ಗಸೂಚಿ ಜಾರಿ ಮಾಡಿರುವುದು ಸರಿಯಾಗಿದೆ.

ಎರಡು ವರ್ಷಗಳಿಂದಲೂ ಕೊರೊನಾ ವೈರಸ್ಸಿನ ಅಟ್ಟಹಾಸದಿಂದ ಜನಜೀವನ ಬಸವಳಿದಿದೆ. ಇದನ್ನು ನೆನಪಿನಲ್ಲಿ ಇಟ್ಟುಕೊಂಡು ಸಾರ್ವಜನಿಕರು ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತಮ್ಮ ಸುರಕ್ಷತೆಯೊಂದಿಗೆ ಪರರ ಸುರಕ್ಷತೆಗೂ ಆದ್ಯತೆ ನೀಡಿ ಸಾಮಾಜಿಕ ಹೊಣೆಗಾರಿಕೆ ನಿರ್ವಹಿಸಬೇಕು. ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುರುತರ ಜವಾಬ್ದಾರಿ ಪ್ರತಿಯೊಬ್ಬರದ್ದೂ ಆಗಿದೆ ಎಂಬುದನ್ನು ಮರೆಯಬಾರದು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಗ್ರಾಹಕ ಜಾಗೃತಿ ಆಂದೋಲನವಾಗಲಿ

‘ಬದಲಾಗಬೇಕಿದೆ ಬಳಕೆದಾರರ ಧೋರಣೆ’ ಎಂಬ, ಗ್ರಾಹಕ ಹಕ್ಕುಗಳ ತಜ್ಞ ವೈ.ಜಿ.ಮುರಳೀಧರನ್ ಅವರ ಲೇಖನ (ಪ್ರ.ವಾ., ಡಿ. 23) ಆಲೋಚನೆಗೆ ಪ್ರಚೋದಿಸುವಂತಿದೆ. ಇಂದಿನ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಗ್ರಾಹಕ ತನಗರಿವಿಲ್ಲದಂತೆಯೇ ಬಹುಮುಖ ವಂಚನೆಗೆ ಒಳಗಾಗುತ್ತಿದ್ದಾನೆ. ಒಂದೆಡೆ ಗ್ರಾಹಕನನ್ನು ವಂಚಿಸುವ ವ್ಯವಸ್ಥೆಯಿದ್ದರೆ, ಮತ್ತೊಂದೆಡೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಗ್ರಾಹಕ ತಾನಾಗಿಯೇ ವಂಚನೆಯ ಜಾಲಕ್ಕೆ ಸಿಲುಕಿಕೊಳ್ಳುತ್ತಿದ್ದಾನೆ. ಗ್ರಾಹಕನ ರಕ್ಷಣೆಗಾಗಿ ಕಾನೂನುಗಳು, ಗ್ರಾಹಕ ನ್ಯಾಯಾಲಯಗಳಿದ್ದರೂ ಆ ಬಗ್ಗೆ ಅರಿತುಕೊಳ್ಳುವ ವ್ಯವಧಾನವೇ ಇಂದಿನ ಪೀಳಿಗೆಯಲ್ಲಿಲ್ಲ. ಅಷ್ಟೇ ಅಲ್ಲದೆ ಅನ್ಯಾಯದ ವಿರುದ್ಧ ದನಿಯೆತ್ತುವ, ಪ್ರಶ್ನಿಸುವ, ಪ್ರತಿಭಟಿಸುವ ಮನೋಭಾವವನ್ನೂ ಈಗಿನ ಪೀಳಿಗೆ ಕಳೆದುಕೊಂಡಿರುವುದರಿಂದ ನಿತ್ಯ ಜೀವನದ ವ್ಯವಹಾರಗಳಲ್ಲಿ ಗ್ರಾಹಕ ಒಂದಲ್ಲ ಒಂದು ರೀತಿಯ ಶೋಷಣೆಗೆ, ವಂಚನೆಗೆ ಒಳಗಾಗುತ್ತಲೇ ಇದ್ದಾನೆ.

ಇದು ತಪ್ಪಬೇಕಾದರೆ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಂದೋಲನದ ರೂಪದಲ್ಲಿ ಹೆಚ್ಚಾಗಬೇಕು. ವಿಶೇಷವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕು.

ಆರ್.ಎಸ್.ಅಯ್ಯರ್, ತುಮಕೂರು

ಶುದ್ಧ ಭಾಷೆ: ವಾದವಿವಾದ ಬೇಡವೆಂದರೆ…

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರ ‘ಶುದ್ಧ ಕನ್ನಡ’ ಕುರಿತ ಅಭಿಪ್ರಾಯಕ್ಕೆ ಅನೇಕ ಪ್ರತಿಕ್ರಿಯೆಗಳು ಬಂದಿವೆ. ಭಾಷೆಯ ಶುದ್ಧತೆಯ ಬಗ್ಗೆ ಹಿಂದಿನಿಂದಲೂ ಅನೇಕರು ಹೇಳುತ್ತಲೇ ಬಂದಿದ್ದಾರೆ. ಪ್ರೊ. ಅಬ್ದುಲ್ ರೆಹಮಾನ್ ಪಾಷ ಅವರು ಹೇಳಿದಂತೆ (ಸಂಗತ, ಡಿ. 10) ಒಂದು ಭಾಷೆ ಹರಿಯುವ ನದಿಯಿದ್ದಂತೆ ಎಂಬ ಮಾತು ನಿಜ. ಹೀಗೆಯೇ ಕನ್ನಡವೂ ಬೆಳೆದಿದೆ. ಪ್ರಾದೇಶಿಕ ವ್ಯತ್ಯಾಸದಿಂದ ಹಲವು ಬಗೆಯ ಕನ್ನಡಗಳು ಬಂದಿರುವುದೂ ಉಂಟು. ಹಾಗೆಯೇ ಪ್ರತೀ ಕುಟುಂಬದಲ್ಲಿ ಒಬ್ಬೊಬ್ಬರಿಗೂ ಅವರದ್ದೇ ಆದ ಶಬ್ದಕೋಶ, ಉಚ್ಚಾರಣೆಯಲ್ಲಿ ವ್ಯತ್ಯಾಸವಿರುತ್ತದೆ. ಹಾಗೆಂದೇ ಯಾವುದನ್ನೂ ‘ಶುದ್ಧ’ ಅಥವಾ ‘ಅಶುದ್ಧ’ ಎನ್ನಲಾಗುವುದಿಲ್ಲ ಎಂಬುದು ಒಂದು ದೃಷ್ಟಿಯಿಂದ ನಿಜ. ಆದರೆ, ಒಟ್ಟಾರೆ ಎಲ್ಲ ಪ್ರದೇಶಗಳ ಕನ್ನಡಿಗರಿಗೂ ಅರ್ಥವಾಗುವ ಒಂದು ರೂಪ ಇರುತ್ತದೆ ಮತ್ತು ಅದು ಬೇಕೂ ಆಗುತ್ತದೆ. ಅದು ಪತ್ರಿಕಾಭಾಷೆಯ ರೀತಿಯದೂ ಇರಬಹುದು ಇಲ್ಲವೆ ಅಕಡೆಮಿಕ್ ರೀತಿಯದೂ ಇರಬಹುದು.

ಧಾರವಾಡದ ವ್ಯಕ್ತಿಯೋ ಕಲಬುರಗಿಯ ವ್ಯಕ್ತಿಯೋ ಬೆಂಗಳೂರಿನಲ್ಲಿ ಮಾತನಾಡುವಾಗ, ಉಪನ್ಯಾಸ ಕೊಡುವಾಗ ತನ್ನ ಮಾತು ಎಲ್ಲರಿಗೂ ಅರ್ಥವಾಗಲಿ ಎಂದು ಪ್ರಾದೇಶಿಕ ವೈಲಕ್ಷಣ ಬದಿಗಿಟ್ಟು ಒಂದು ಏಕರೂಪದ ಭಾಷೆಯಲ್ಲಿ ಮಾತನಾಡಬೇಕಾಗುತ್ತದೆ. ಹಾಗೆಯೇ ಪ್ರಾದೇಶಿಕ ಭಿನ್ನತೆಯ ಜನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದಾಗ, ಅವರ ಕಡೆಯ ಭಾಷೆ ಅಲ್ಲಿಯವರಿಗೆ ಅರ್ಥವಾಗಲು ಕಷ್ಟವಾಗಬಹುದು. ಇದೆಲ್ಲವೂ ಸಹಜವೇ. ಜೊತೆಗೆ ಬೇರೆ ಭಾಷೆಯ ಶಬ್ದಗಳು ಕನ್ನಡಕ್ಕೆ ಬಂದಾಗ ಅವು ತಮ್ಮ ಮೂಲ ರೂಪದಲ್ಲೋ ಅಥವಾ ತದ್ಭವ ರೂಪದಲ್ಲೋ ಬರುವುದು ಸಹಜ. ಅಂಥ ರೂಪಗಳು ಎಲ್ಲರಿಂದಲೂ ಒಪ್ಪಿತವಾಗಿರುತ್ತವೆ. ಅವನ್ನು ಅದೇ ರೂಪದಲ್ಲಿ ಬರೆಯುವುದಾಗಲೀ ಉಚ್ಚರಿಸುವುದಾಗಲೀ ಮಾಡಿದರೆ ಅವಕ್ಕೆ ನ್ಯಾಯ ಸಲ್ಲಿಸಿದಂತಾಗುತ್ತದೆ. ಉಚ್ಚಾರಣೆಯ ವ್ಯತ್ಯಾಸ ಶಬ್ದರೂಪವನ್ನು ಕೆಡಿಸುತ್ತದೆ. ಉಚ್ಚಾರಣೆಯನ್ನೇ ಬರಹವು ಅನುಸರಿಸಿದರೆ, ಅರ್ಥವು ಅನರ್ಥವಾಗುತ್ತದೆ. ಧನ ಎಂಬುದನ್ನು ದನ ಎಂದು ಉಚ್ಚರಿಸಿದಂತೆಯೇ ಬರೆದರೆ ಆಗುವ ಅನರ್ಥದ ಬಗ್ಗೆ ಹೇಳಬೇಕಾಗಿಲ್ಲ. ಹಾಗೆಯೇ ಆಸನವನ್ನು ಹಾಸನವೆಂದೂ ಅಥವಾ ಹಾಸನವನ್ನು ಆಸನವೆಂದೂ ಭಾಷೆ ಎನ್ನುವುದನ್ನು ಬಾಸೆ ಎಂದೂ ಬಡವ ಎಂಬುದನ್ನು ಭಡವ ಎಂದೂ ಬರೆದರೆ ಅಥವಾ ಉಚ್ಚರಿಸಿದರೆ ಏನೇನು ವೈಪರೀತ್ಯಗಳಾಗಬಹುದು ಎಂಬುದನ್ನು ವಿವರಿಸಬೇಕಾಗಿಲ್ಲ. ಆ ಕಾರಣದಿಂದಲೇ ಭಾಷೆಯ ವಿಚಾರದಲ್ಲಿ ಮಹೇಶ್ ಜೋಶಿಯವರು ಹೇಳಿರುವುದರಲ್ಲಿ ಅಸಂಗತವೇನೂ ಇಲ್ಲ.

‘ಅ’ಕಾರ ‘ಹ’ಕಾರಗಳ ವ್ಯತ್ಯಾಸವಿಲ್ಲದೆ ಬರೆದರೆ ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡುವುದು ಹೇಗೆ? ಇಂದಿನ ದಿನಗಳಲ್ಲಿ ಇಂಗ್ಲಿಷ್ ಮಾಧ್ಯಮ ಪ್ರಧಾನವಾಗಿ, ಅದರ ಕ್ಲಿಷ್ಟ ಶಬ್ದಗಳನ್ನು ಉಚ್ಚರಿಸುವುದು ಕಷ್ಟವೆನಿಸದಿರುವಾಗ, ಕನ್ನಡದ ‘ಅ’ಕಾರ ‘ಹ’ಕಾರಗಳ ಉಚ್ಚಾರಣೆ ಕಷ್ಟವಾಗುವುದು ಹೇಗೆ? ಕನ್ನಡ ಶಬ್ದಗಳ ಉಚ್ಚಾರಣೆ ಕಷ್ಟ ಎನ್ನುವವರು ಇದನ್ನೆಲ್ಲ ಯೋಚಿಸಬೇಕಲ್ಲವೇ? ಪ್ರಾಥಮಿಕ ತರಗತಿಯಲ್ಲಿಯೇ ಉಚ್ಚಾರಣಾ ವ್ಯತ್ಯಾಸಗಳ ಬಗ್ಗೆ ತಿಳಿಸಿ ತಿದ್ದಬೇಕಲ್ಲವೇ? ವರ್ಣಮಾಲೆಯನ್ನಂತೂ ಬದಲಿಸಲಾಗದಷ್ಟೆ? ಅತಿಮುಖ್ಯ ವಿಚಾರವೆಂದರೆ, ಕನ್ನಡ ಭಾಷೆಯಲ್ಲಿಯ ಉಚ್ಚಾರಣೆಯ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಪ್ರಾರಂಭದಲ್ಲೇ ಮನಸ್ಸಿಟ್ಟು ತಿದ್ದಿದರೆ, ತಿದ್ದಿಕೊಂಡರೆ ಆಗ ಉಚ್ಚಾರಣೆಯೂ ಸರಿಯಾಗಿರುತ್ತದೆ, ಉಚ್ಚಾರಣೆಯನ್ನು ಅನುಸರಿಸುವ ಬರವಣಿಗೆಯೂ ಸರಿಯಾಗಿರುತ್ತದೆ. ಆಗ, ಈಗಿನಂಥ ವಾದವಿವಾದಗಳಿಗೆ ಆಸ್ಪದವೇ ಇರುವುದಿಲ್ಲ.


ಡಾ. ಬಿ.ರಾಜಶೇಖರಪ್ಪ, ಡಾ. ಪಿ.ಯಶೋದಾ, ಚಿತ್ರದುರ್ಗ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.


ಅಪೌಷ್ಟಿಕತೆ ನಿವಾರಣೆಗೆ ಅನುದಾನ ಬಳಕೆ ಅಲ್ಪ, ಸ್ಮಾರ್ಟ್‌ಫೋನ್ ಖರೀದಿಗೇ ಹೆಚ್ಚು ವೆಚ್ಚ


ಪೋಷಣ ಅಭಿಯಾನ ನಿತ್ರಾಣ


ಇತರೆ ವೆಚ್ಚಗಳು | ಒಟ್ಟು ವೆಚ್ಚ | ಸ್ಮಾರ್ಟ್‌ಫೋನ್ ಖರೀದಿ ವೆಚ್ಚ | ಉಳಿಕೆ ಮೊತ್ತ

















• ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ದೇಶದ ಮಕ್ಕಳಲ್ಲಿ ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು 2018ರ ಸೆಪ್ಟೆಂಬರ್‌ನಲ್ಲಿ 'ಪೋಷಣ ಅಭಿಯಾನ'ವನ್ನು ಆರಂಭಿಸಿತ್ತು. ಅಭಿಯಾನ ಆರಂಭವಾದ ದಿನದಿಂದ 2021ರ ಮಾರ್ಚ್ ಅಂತ್ಯದವರೆಗೆ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಒಟ್ಟು ₹5,312 ಕೋಟಿ ಅನುದಾನವನ್ನು ಮಂಜೂರು ಮಾಡಿದೆ. ಆದರೆ, ಇದರಲ್ಲಿ ₹2,985 ಕೋಟಿಯನ್ನಷ್ಟೇ ರಾಜ್ಯ ಸರ್ಕಾರಗಳು ವೆಚ್ಚ ಮಾಡಿವೆ. ಒಟ್ಟು ಅನುದಾನದಲ್ಲಿ ವೆಚ್ಚದ ಪ್ರಮಾಣ ಶೇ 56ರಷ್ಟು ಮಾತ್ರ.

ಯೋಜನೆ ಅನುಷ್ಠಾನದ ಪ್ರಗತಿಯನ್ನು ದಾಖಲಿಸಲು 'ಪೋಷಣ ಟ್ರ್ಯಾಕರ್' ಅನ್ನು ಅಭಿವೃದ್ಧಿಪಡಿಸಲಾಗಿದೆ. ದತ್ತಾಂಶಗಳನ್ನು ಈ ಟ್ರ್ಯಾಕರ್‌ನಲ್ಲಿ ನಮೂದಿಸಲು ಅಂಗನವಾಡಿ ಕಾರ್ಯಕರ್ತೆಯರು, ಸಂಬಂಧಿತ ಅಧಿಕಾರಿಗಳಿಗಾಗಿ ಸ್ಮಾರ್ಟ್‌ಫೋನ್ ಖರೀದಿಸಲಾಗಿದೆ. ಶೇ 12ರಷ್ಟು ಜಿಎಸ್‌ಟಿ ಸೇರಿ ಒಂದು ಫೋನ್‌ಗೆ ₹8,960 ವೆಚ್ಚದಲ್ಲಿ, ಒಟ್ಟು 8.65 ಲಕ್ಷ ಸ್ಮಾರ್ಟ್‌ಫೋನ್‌ಗಳನ್ನು ಖರೀದಿಸಲಾಗಿದೆ. ಇದಕ್ಕಾಗಿ ₹775.5 ಕೋಟಿ ವೆಚ್ಚ ಮಾಡಲಾಗಿದೆ. ಇದು ಒಟ್ಟು ವೆಚ್ಚದ ಶೇ 26ರಷ್ಟು. ಇದನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳು ಒಟ್ಟು ₹2,209 ಕೋಟಿ ವೆಚ್ಚ ಮಾಡಿವೆ. ಇದರಲ್ಲಿ ಪವರ್ ಬ್ಯಾಂಕ್, ಸ್ಮಾರ್ಟ್‌ಫೋನ್‌ಗಳಿಗೆ ಸಿಮ್‌ಕಾರ್ಡ್ ಮತ್ತು ಡೇಟಾ ಪ್ಯಾಕ್ ಖರೀದಿ, ದಾಖಲಾತಿ ಮತ್ತು ಲೆಡ್ಜರ್ ಪುಸ್ತಕ ಖರೀದಿ ಮತ್ತು ಅಭಿಯಾನದ ಅಡಿ ಮಕ್ಕಳಿಗೆ ಪೌಷ್ಟಿಕ ಆಹಾರ ಖರೀದಿಗೆ ಮಾಡಿದ ವೆಚ್ಚಗಳು ಸೇರಿವೆ. ಇವೆಲ್ಲವನ್ನೂ ಹೊರತುಪಡಿಸಿ ರಾಜ್ಯಗಳ ಬಳಿ ಇನ್ನೂ ₹2,327 ಕೋಟಿಯಷ್ಟು ಅನುದಾನ ಉಳಿದಿದೆ.

ಅನುದಾನವನ್ನು ವೆಚ್ಚ ಮಾಡದೇ ಇರುವುದರ ಪರಿಣಾಮಗಳು, ದೇಶದ ಜನರಲ್ಲಿನ ಅಪೌಷ್ಟಿಕತೆಯಲ್ಲಿನ ಏರಿಳಿತದಲ್ಲಿ ಪ್ರತಿಬಿಂಬಿತವಾಗಿದೆ. ಯೋಜನೆ ಆರಂಭವಾದಾಗ, ದೇಶದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದ ಮಕ್ಕಳ ಪ್ರಮಾಣ ಶೇ 38.5ರಷ್ಟು ಇತ್ತು. 2022ರ ಅಂತ್ಯದ ವೇಳೆಗೆ ಈ ಪ್ರಮಾಣವನ್ನು ಶೇ 35ಕ್ಕೆ ಇಳಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಆದರೆ, 2021ರ ಮಾರ್ಚ್ ಅಂತ್ಯದ ವೇಳೆಗೆ ಈ ಪ್ರಮಾಣವನ್ನು ಶೇ 35.5ರಷ್ಟಕ್ಕೆ ಇಳಿಸಲು ಸಾಧ್ಯವಾಗಿದೆ. ಅಭಿಯಾನ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗದೇ ಇರುವ ಕಾರಣ, ಅಪೌಷ್ಟಿಕತೆಯನ್ನು ಕಡಿಮೆ ಮಾಡುವ ಗುರಿಯ ಪ್ರಗತಿಯೂ ಕುಂಠಿತವಾಗಿದೆ.

ರಕ್ತಹೀನತೆಯಿಂದ ಬಳಲುವ ಮಕ್ಕಳು, ಮಹಿಳೆಯರ ಪ್ರಮಾಣ

ಪೋಷಣ ಅಭಿಯಾನದಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿದ ಹಣವನ್ನು ಕೆಲವು ರಾಜ್ಯಗಳು ಸದ್ಬಳಕೆ ಮಾಡಿಕೊಳ್ಳದ ಕಾರಣ, ಅಪೌಷ್ಟಿಕತೆ ಪ್ರಮಾಣ ಹೆಚ್ಚಾಗಿದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳು ಹೇಳುತ್ತವೆ. ಅನುದಾನ ಖರ್ಚು ಮಾಡದ ರಾಜ್ಯಗಳಲ್ಲಿ, ಕುಂಠಿತ ಬೆಳವಣಿಗೆ ಹೊಂದಿರುವ ಹಾಗೂ ರಕ್ತಹೀನತೆಯಿಂದ ಬಳಲುವ 5 ವರ್ಷದೊಳಗಿನ ಮಕ್ಕಳ ಪ್ರಮಾಣ ಅಧಿಕವಾಗುತ್ತಿದೆ. ಹಾಗೆಯೇ ರಕ್ತಹೀನತೆಯಿಂದ ಬಳಲುವ 15ರಿಂದ 49 ವರ್ಷದೊಳಗಿನ ಮಹಿಳೆಯರ ಪ್ರಮಾಣದಲ್ಲಿ ಏರಿಕೆ ದಾಖಲಾಗಿದೆ. ಹೀಗಾಗಿ, ಮಕ್ಕಳು ಹಾಗೂ ಮಹಿಳೆಯರಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ರೂಪಿಸಿರುವ ಈ ಯತ್ನಕ್ಕೆ ಹಿನ್ನಡೆಯಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ 2015–16 ಹಾಗೂ 2019–21ರ ವರದಿಗಳನ್ನು ಹೋಲಿಸಿದಾಗ ಸಾಕಷ್ಟು ವ್ಯತ್ಯಾಸಗಳು ಕಂಡುಬಂದಿವೆ.


ಕುಂಠಿತ ಬೆಳವಣಿಗೆ ಕಂಡುಬಂದಿರುವ 5 ವರ್ಷದೊಳಗಿನ ಮಕ್ಕಳ ಪ್ರಮಾಣ | ರಕ್ತಹೀನತೆ ಕಂಡುಬಂದಿರುವ 6-59 ತಿಂಗಳ ಒಳಗಿನ ಮಕ್ಕಳ ಪ್ರಮಾಣ | ರಕ್ತಹೀನತೆಯಿಂದ ಬಳಲುತ್ತಿರುವ 15-49 ವರ್ಷದೊಳಗಿನ ಮಹಿಳೆಯರ ಪ್ರಮಾಣ | 2015-16 | 2019-21

(ಎಲ್ಲಾ ದತ್ತಾಂಶಗಳು ಶೇಕಡವಾರು ಪ್ರಮಾಣದಲ್ಲಿ)




ಆಂಧ್ರಪ್ರದೇಶ

ಆಂಧ್ರಪ್ರದೇಶದಲ್ಲಿ ಕುಂಠಿತ ಬೆಳವಣಿಗೆ ಕಂಡುಬಂದಿರುವ ಐದು ವರ್ಷದೊಳಗಿನ ಮಕ್ಕಳ ಪ್ರಮಾಣದಲ್ಲಿ ಕಳೆದ ಬಾರಿಗೆ (2015-16) ಹೋಲಿಸಿದರೆ, ಈ ಬಾರಿ ಅತ್ಯಲ್ಪ ಪ್ರಗತಿ ಕಂಡುಬಂದಿದೆ. ರಕ್ತಹೀನತೆ ಹೊಂದಿರುವ ಐದು ವರ್ಷದೊಳಗಿನ ಮಕ್ಕಳ ಪ್ರಮಾಣವು 5 ಶೇಕಡವಾರು ಅಂಶಗಳಷ್ಟು ಏರಿಕೆ ಕಂಡಿದೆ. ಆದರೆ, ರಕ್ತಹೀನತೆಯಿಂದ ಬಳಲುವ ಮಹಿಳೆಯರ (15-49 ವರ್ಷ) ಪ್ರಮಾಣ ಕೊಂಚ ಸುಧಾರಿಸಿದೆ.




ಅಸ್ಸಾಂ

ಅಸ್ಸಾಂನಲ್ಲಿ ರಕ್ತಹೀನತೆಯಿಂದ ಬಳಲುವ 5 ವರ್ಷದೊಳಗಿನ ಮಕ್ಕಳ ಪ್ರಮಾಣವು ದುಪ್ಪಟ್ಟಾಗಿದೆ. 2015-16ರಲ್ಲಿ ಶೇ 35.7ರಷ್ಟು ಮಕ್ಕಳಲ್ಲಿ ರಕ್ತಹೀನತೆ ಇತ್ತು. ಈ ಪ್ರಮಾಣವು 2019-21ರಲ್ಲಿ ಶೇ 68.4ಕ್ಕೆ ಹೆಚ್ಚಳವಾಗಿದ್ದು, ಆತಂಕ ಮೂಡಿಸಿದೆ. ರಕ್ತಹೀನತೆಯಿಂದ ಬಳಲುವ ಮಹಿಳೆಯರ ಪ್ರಮಾಣದಲ್ಲಿಯೂ 9.4 ಶೇಕಡವಾರು ಅಂಶಗಳಷ್ಟು ಹೆಚ್ಚಳ ವರದಿಯಾಗಿದೆ.




ಬಿಹಾರ

ಬಿಹಾರದಲ್ಲಿ ರಕ್ತಹೀನತೆಯಿಂದ ಬಳಲುವ ಮಕ್ಕಳು ಹಾಗೂ ಮಹಿಳೆಯರ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದೆ. ಕಳೆದ ಬಾರಿ ಶೇ 63ರಷ್ಟು ಮಕ್ಕಳ ರಕ್ತದಲ್ಲಿ ಬಿಳಿರಕ್ತ ಕಣಗಳ ಅಂಶ ಕಡಿಮೆಯಿತ್ತು. ಈ ಪ್ರಮಾಣವು ಈ ಬಾರಿ ಶೇ 69ಕ್ಕೆ ಏರಿಕೆಯಾಗಿದೆ. ಇದೇ ಸಮಸ್ಯೆ ಎದುರಿಸುತ್ತಿರುವ ಮಹಿಳೆಯರ ಪ್ರಮಾಣವು 3 ಶೇಕಡವಾರು ಅಂಶಗಳಷ್ಟು ಅಧಿಕವಾಗಿದೆ.




ಕರ್ನಾಟಕ

ಕುಂಠಿತ ಬೆಳವಣಿಗೆ ಕಂಡುಬಂದಿರುವ ಐದು ವರ್ಷದೊಳಗಿನ ಮಕ್ಕಳ ಪ್ರಮಾಣವು ಕರ್ನಾಟಕದಲ್ಲಿ ಅಲ್ಪ ಕುಸಿದಿದ್ದು, ಸುಧಾರಣೆ ಕಂಡುಬಂದಿದೆ. ಆದರೆ ರಕ್ತಹೀನತೆಯು ಮಕ್ಕಳು ಹಾಗೂ ಮಹಿಳೆಯರನ್ನು ಕಾಡುತ್ತಿದೆ. ಈ ಸಮಸ್ಯೆಯಿರುವ 5 ವರ್ಷದೊಳಗಿನ ಮಕ್ಕಳ ಪ್ರಮಾಣವು ಶೇ 60.9ರಿಂದ ಶೇ 65.5ಕ್ಕೆ ಏರಿಕೆಯಾಗಿದ್ದರೆ, ಮಹಿಳೆಯರಲ್ಲೂ ಇದು ಶೇ 44.8ರಿಂದ ಶೇ 47.8ಕ್ಕೆ ಹೆಚ್ಚಿರುವುದು ಅಂಕಿ-ಅಂಶಗಳಿಂದ ದೃಢಪಟ್ಟಿದೆ.




ಮಧ್ಯಪ್ರದೇಶ

ಮಧ್ಯಪ್ರದೇಶದಲ್ಲಿ, ಕುಂಠಿತ ಬೆಳವಣಿಗೆ ಹೊಂದಿರುವ ಮಕ್ಕಳ ಪ್ರಮಾಣವು 7 ಶೇಕಡವಾರು ಅಂಶಗಳಷ್ಟು ಕುಸಿದಿದ್ದು, ಗಮನಾರ್ಹ ಸಾಧನೆ ಕಂಡುಬಂದಿದೆ. ಆದರೆ ರಕ್ತಹೀನತೆ ಹೊಂದಿರುವ ಐದು ವರ್ಷದೊಳಗಿನ ಮಕ್ಕಳ ಪ್ರಮಾಣವು ಶೇ 68.9ರಿಂದ ಶೇ 72.7ಕ್ಕೆ ಹೆಚ್ಚಳವಾಗಿದೆ. ಹಾಗೆಯೇ ರಕ್ತಹೀನತೆಯಿರುವ ಮಹಿಳೆಯರ ಪ್ರಮಾಣ 2 ಶೇಕಡವಾರು ಅಂಶಗಳಷ್ಟು ಹೆಚ್ಚಳವಾಗಿದೆ.




ಉತ್ತರ ಪ್ರದೇಶ

ಕುಂಠಿತ ಬೆಳವಣಿಗೆ ಹೊಂದಿರುವ ಐದು ವರ್ಷದೊಳಗಿನ ಮಕ್ಕಳ ಸಂಖ್ಯೆ, ರಕ್ತಹೀನತೆ ಇರುವ ಮಹಿಳೆಯರ ಸಂಖ್ಯೆಯು ಉತ್ತರ ಪ್ರದೇಶದಲ್ಲಿ ಇಳಿಕೆಯಾಗಿದೆ. ಆದರೆ ರಕ್ತಹೀನತೆಯಿಂದ ಬಳಲುವ ಐದು ವರ್ಷದೊಳಗಿನ ಮಕ್ಕಳ ಪ್ರಮಾಣದಲ್ಲಿ ಅಲ್ಪ ಏರಿಕೆ ಕಂಡುಬಂದಿದೆ.



ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳ ಸರ್ಕಾರವು ಪೋಷಣ ಅಭಿಯಾನದಡಿ ಬಿಡುಗಡೆಯಾದ ಅನುದಾನದಲ್ಲಿ ಒಂದು ರೂಪಾಯಿಯನ್ನೂ ಬಳಸಿಲ್ಲ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮಾಹಿತಿ ನೀಡಿದೆ. ಸಂಬಂಧಿತ ದಾಖಲೆಗಳಲ್ಲಿಯೂ ರಾಜ್ಯ ಸರ್ಕಾರವು ಮಾಡಿದ ವೆಚ್ಚ ಶೂನ್ಯ ಎಂದೇ ಇದೆ. ಇದಕ್ಕೆ ಪೂರಕವಾಗಿ ರಾಜ್ಯದಲ್ಲಿ ರಕ್ತಹೀನತೆಯಿಂದ ಬಳಲುವ ಮಕ್ಕಳ ಪ್ರಮಾಣವು 14 ಶೇಕಡವಾರು ಅಂಶಗಳಷ್ಟು ಹೆಚ್ಚಳವಾಗಿದೆ. ರಕ್ತಹೀನತೆ ಇರುವ ಶೇ 71ರಷ್ಟು ಮಹಿಳೆಯರು ರಾಜ್ಯದಲ್ಲಿದ್ದಾರೆ ಎನ್ನುತ್ತವೆ ಅಂಕಿ-ಅಂಶಗಳು.



ಆಧಾರ: ಪೋಷಣ ಅಭಿಯಾನ ಟ್ರ್ಯಾಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿ–04 ಮತ್ತು 05

ಪ್ರಜಾವಾಣಿ ಗ್ರಾಫಿಕ್ಸ್



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 5

ಪುಣ್ಯಫಲಗಳ ಆಗರ ಶಿವಪುರಾಣ

ಸೂತಪುರಾಣಿಕ ಹೇಳುವ ಪ್ರಕಾರ, ಶಿವಪುರಾಣ ಶ್ರವಣ ಮತ್ತು ಪಠಣ ಮಾಡುವುದರ ಹೊರತು ಮನುಷ್ಯರು ಮುಕ್ತಿ ಪಡೆಯಲು ಬೇರೊಂದು ಧರ್ಮಮಾರ್ಗವೇ ಕಲಿಯುಗದಲ್ಲಿ ಇಲ್ಲ. ಶಿವಪುರಾಣವನ್ನ ಕೇಳುವ ಮೂಲಕ ಮನುಷ್ಯ ತನ್ನ ಕರ್ಮಬಂಧ ಕಳೆದುಕೊಂಡು ಮುಕ್ತಿ ಪಡೆಯುತ್ತಾನೆ. ಎಲ್ಲ ರೀತಿಯ ದಾನ, ಯಜ್ಞಗಳನ್ನು ಮಾಡಿದರೆ ಯಾವ ಪುಣ್ಯ ಸಿಗುತ್ತೋ, ಅಂತಹ ಪುಣ್ಯ ಶಿವಪುರಾಣ ಕೇಳುವುದರಿಂದ ಖಂಡಿತ ಸಿಗುತ್ತೆ. ಶಿವಪುರಾಣದಲ್ಲಿ ಬರುವ ಶಂಭುವಿನ ಕತೆ ಕೇಳಿದವರು ಮತ್ತು ಕೇಳಿದವರ ಕುಲದವರೆಲ್ಲಾ ಜರಾಮರಣರಹಿತರಾಗಿ ಸದ್ಗತಿ ಪಡೆಯುತ್ತಾರೆ. ಶಿವಪುರಾಣದಲ್ಲಿ ಹೇಳಿರುವ ಕಥೆಗಳು, ಉಪಾಖ್ಯಾನಗಳು, ಇತಿಹಾಸಗಳೆಲ್ಲವೂ ಪರಮಪವಿತ್ರವಾದವು. ಆದ್ದರಿಂದ ಇವುಗಳನ್ನೆಲ್ಲಾ ಯಾವಾಗಲೂ ಕೇಳಬೇಕು. ಇದನ್ನ ಸರ್ವ ಕಾಲಗಳಲ್ಲಿ ಕೇಳಿದರೆ ಪುಣ್ಯ ಹೆಚ್ಚಾಗುತ್ತೆ ಅಂತ ಸೂತಮುನಿ ಬಣ್ಣಿಸಿದ್ದಾನೆ.


ಭೂಲೋಕದಲ್ಲಿ ಅನೇಕ ಶಾಸ್ತ್ರಗಳೂ ಪುರಾಣಗಳೂ ಬೇಕಾದಷ್ಟಿವೆ. ಆದರೆ, ಶಿವಪುರಾಣ ಅವುಗಳಿಗಿಂತ ಸರ್ವಶ್ರೇಷ್ಠವಾದುದು. ಶಿವಪುರಾಣ ಅದೆಷ್ಟು ಪರಮ ಪವಿತ್ರವಾದುದೆಂದರೆ, ಒಂದು ಕ್ಷಣ ಶಿವಪುರಾಣ ಕೇಳಿದರೂ ಮುಕ್ತಿಯೇ ಸಿಕ್ಕಿಬಿಡುತ್ತೆ. ಅಂಥದರಲ್ಲಿ ಶಿವಪುರಾಣವನ್ನ ಸಂಪೂರ್ಣ ಕೇಳುವುದು, ಹೇಳುವುದು ಮಾಡುವುದರಿಂದ ಅದೆಷ್ಟು ಪುಣ್ಯ ಸಿಗುತ್ತೆ ಅನ್ನೋದನ್ನ ಊಹಿಸಬಹುದು. ಇದಕ್ಕಾಗಿ ಸದ್ಗತಿ ಬಯಸುವವರು ಪ್ರತಿನಿತ್ಯ ಶಿವಪುರಾಣದ ಒಂದು ಶ್ಲೋಕವನ್ನಾಗಲೀ, ಅಥವಾ ಅರ್ಧಶ್ಲೋಕವನ್ನಾಗಲೀ, ಭಕ್ತಿಯಿಂದ ಪಠಿಸಬೇಕು. ಶಿವಪುರಾಣವನ್ನು ಯಾರು ಪ್ರತಿನಿತ್ಯ ಭಕ್ತಿಯಿಂದ ಪಠಿಸುವರೋ, ಅಥವಾ ಅರ್ಥಾನುವಾದ ಮಾಡುವರೋ, ಅವರು ಪುಣ್ಯಾತ್ಮರೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಸಾಕ್ಷಾತ್ ಶಿವನ ಸ್ವರೂಪವಾದ ಶಿವಪುರಾಣವನ್ನ ಎಷ್ಟೇ ಕಷ್ಟವಾದರೂ ಬಿಡದೆ ಕೇಳಿ, ಶಿವನನ್ನ ಒಲಿಸಿಕೊಳ್ಳಬೇಕು.

> ವೇದ, ಇತಿಹಾಸ, ಶಾಸ್ತ್ರ ಮೊದಲಾದ ಉತ್ತಮ ಗ್ರಂಥಗಳಲ್ಲೆಲ್ಲಾ ಶಿವಪುರಾಣವೇ ಬಹಳ ಶ್ರೇಷ್ಠವಾದದ್ದು.

ವೇದ, ಇತಿಹಾಸ, ಶಾಸ್ತ್ರ ಮೊದಲಾದ ಉತ್ತಮ ಗ್ರಂಥಗಳಲ್ಲೆಲ್ಲಾ ಶಿವಪುರಾಣವೇ ಬಹಳ ಶ್ರೇಷ್ಠವಾದದ್ದು. ಮೋಕ್ಷವನ್ನ ಬಯಸುವವರು, ಶಿವಪುರಾಣವನ್ನ ಅಧ್ಯಯನ ಮಾಡಬೇಕು. ಶಿವಪುರಾಣವನ್ನ ಬಹಳ ಭಕ್ತಿಯಿಂದ ಕೇಳಬೇಕು. ಸ್ವಯಂಪಠನ ಮಾಡಿದರಂತೂ ಇನ್ನೂ ವಿಶೇಷ ಫಲ ಸಿಗುವುದು. ಇಂಥ ಸರ್ವ ಶ್ರೇಷ್ಠವಾದ ಶೈವಪುರಾಣವನ್ನ ಕೇಳುವವರಿಗೆ ಧರ್ಮಾದಿ ಚತುರ್ವಿಧ ಪುರುಷಾರ್ಥಗಳು ದೊರೆಯುವುದು. ಶಿವಪುರಾಣ ಗ್ರಂಥವನ್ನ ನಿತ್ಯ ಪಟ್ಟೆವಸ್ತ್ರಗಳಿಂದ ಯಾರು ಅಲಂಕರಿಸಿ ಪೂಜಿಸುವರೋ, ಅವರು ಯಾವಾಗಲೂ ಸುಖವಾಗಿರುತ್ತಾರೆ. ಉತ್ತಮ ಶಾಸ್ತ್ರಗ್ರಂಥವಾದ ಶೈವಪುರಾಣವನ್ನ ಕೇಳುವ ಮನುಷ್ಯರು ಸಾಕ್ಷಾತ್ ರುದ್ರಸ್ವರೂಪರೇ ಆಗುವರು. ಇದರಲ್ಲಿ ಯಾವುದೇ ಸಂಶಯವಿಲ್ಲ ಅಂತ ಸೂತಮುನಿ ಸ್ಪಷ್ಟವಾಗಿ ಹೇಳುತ್ತಾನೆ.

ವೇದವ್ಯಾಸರೇ ತಮ್ಮ ಸ್ಕಂದಪುರಾಣದಲ್ಲಿ ಹೇಳಿರುವ ಶಿವಪುರಾಣ ಮಹಾತ್ಮೆಯ ಮೊದಲ ಅಧ್ಯಾಯದಲ್ಲಿ ಶಿವಮಹಿಮೆ ವರ್ಣನೆ ಇದ್ದರೆ, ಎರಡನೇ ಅಧ್ಯಾಯದಲ್ಲಿ ಕೆಟ್ಟ ಬುದ್ಧಿಯ ಜನ ಹೇಗೆ ಶಿವಪುರಾಣ ಕೇಳಿ ಪುನೀತರಾಗುತ್ತಾರೆಂಬ ವಿವರ ಇದೆ. ಇದನ್ನ ದೇವರಾಜನೆಂಬ ದುಷ್ಟ ಬ್ರಾಹ್ಮಣನ ಕಥೆ ಮೂಲಕ ತಿಳಿಸಲಾಗಿದೆ. ಮೂರು ಮತ್ತು ನಾಲ್ಕನೇ ಅಧ್ಯಾಯದಲ್ಲಿ ಪಾಪಿಯಾದ ಚಂಚುಲೆ ಶಿವಸಾನ್ನಿಧ್ಯ ಪಡೆದ ಕಥೆ ಇದೆ. ಐದನೇ ಅಧ್ಯಾಯದಲ್ಲಿ ಕೈಲಾಸವಾಸಿಯಾದ ಚಂಚುಲೆ ಜಗನ್ಮಾತೆ ಪಾರ್ವತಿ ಮೂಲಕ ಪಿಶಾಚಿಯಾಗಿದ್ದ ತನ್ನ ಪತಿ ಬಿಂದುಗನನ್ನ ಪುನೀತನನ್ನಾಗಿಸಿ, ಕೈಲಾಸಕ್ಕೆ ಕರೆಸಿಕೊಂಡ ದೃಷ್ಟಾಂತವಿದೆ. ಆರನೇ ಅಧ್ಯಾಯದಲ್ಲಿ ಶಿವಪುರಾಣ ಪ್ರವಚನವನ್ನ ಎಲ್ಲಿ, ಹೇಗೆ, ಹೇಳಬೇಕು, ಕೇಳಬೇಕು – ಎಂದು ತಿಳಿಸಲಾಗಿದೆ. ಅಂತಿಮವಾದ ಏಳನೇ ಅಧ್ಯಾಯದಲ್ಲಿ ಶಿವಪುರಾಣ ಕೇಳಿ, ಹೇಗೆ ಅದನ್ನ ಸಾರ್ಥಕ ಪಡಿಸಿಕೊಳ್ಳಬೇಕೆಂಬ ವಿವರ ತಿಳಿಸಲಾಗಿದೆ. ಹೀಗಾಗಿ ನಾವು ವೇದವ್ಯಾಸರ ಶಿವಪುರಾಣದ ಏಳು ಸಂಹಿತೆಗಳನ್ನು ತಿಳಿಯುವ ಮುನ್ನ, ಸ್ಕಂದಪುರಾಣದಲ್ಲಿ ಹೇಳಲಾಗಿರುವ ಶಿವಪುರಾಣದ ಮಹಿಮೆಯನ್ನ ತಿಳಿಯಬೇಕು. ಮುಂದೆ ನಾವು ಸ್ಕಂದಪುರಾಣದ ಏಳು ಅಧ್ಯಾಯಗಳಲ್ಲಿ ತಿಳಿಸಿರುವ ಶಿವಪುರಾಣದ ಮಹಿಮೆಯನ್ನು ತಿಳಿಯೋಣ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಡಿಸೆಂಬರ್ 24, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಮೂಲ ಪಂಚಮಿ ಗಂ. 22-19 (ಹ. 3-40) ಶುಕ್ರವಾರ ನಿತ್ಯ ನಕ್ಷತ್ರ ಮಖೆ ಗಂ. 45-31 (ರಾ. 12-57) ವಿಷ್ಕಂಭ ನಾಮ ಯೋಗ ಗಂ. 7-18 ತೈತಲ ಕರಣ ಗಂ. 22-19 ವಿಷ ಗಂ. 14-3 ಅಮೃತ ಗಂ. 38-45 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-41 ಸೂರ್ಯಾಸ್ತ: 5-55 ಅದೃಷ್ಟ ಸಂಖ್ಯೆ 3, 9

ಮೇಷ: ವಿದೇಶದಿಂದ ಪಡೆದ ಮಾಹಿತಿ ಅನುಭವಗಳನ್ನು ಕಾರ್ಯರೂಪಕ್ಕೆ ತರುವ ಸಾಧ್ಯತೆ. ಪ್ರಪಂಚದ ಕಡೆಗಿನ ನಿಮ್ಮ ದೃಷ್ಟಿ ಬದಲಾಗಲಿದೆ. ಹೊಸ ಯೋಜನೆಗಳನ್ನು ರೂಪಿಸಲು ಅನುಕೂಲಕರ ವಾತಾವರಣ.

ವೃಷಭ: ಪ್ರಮುಖ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸಣ್ಣಪುಟ್ಟ ತೊಡಕುಗಳು ಎದುರಾದರೂ, ತಾಳ್ಮೆಯ ಪ್ರಯತ್ನದಿಂದ ತೊಡಕುಗಳು ನಿವಾರಣೆಯಾಗಿ ಕೆಲಸಗಳು ನೆರವೇರುವವು.

ಮಿಥುನ: ಹೆಮ್ಮೆಪಡುವಂತಹ ಕೆಲಸಗಳನ್ನು ಯಶಸ್ವಿಯಾಗಿ ನೆರವೇರಿಸುವಿರಿ. ವಿದ್ಯಾರ್ಥಿಗಳಿಗೆ ಅಮೋಘ ಸಾಧನೆಯ ಸಂಭ್ರಮ. ಗೃಹ ಸೌಖ್ಯ. ಸಂಗಾತಿಯೊಂದಿಗಿನ ಕುಶಲ ಸಂಭಾಷಣೆ ಮನ ಗೆಲ್ಲುವ ಅವಕಾಶ ತರಲಿದೆ.

ಕರ್ಕಾಟಕ: ಕಚೇರಿಯ ಕೆಲಸಗಳನ್ನು ಮನೆಯಲ್ಲಿಯೇ ಕುಳಿತು ಯಶಸ್ವಿಯಾಗಿ ಪೂರೈಸುವ ಸುಯೋಗ. ಸಾರಿಗೆ ಉದ್ಯಮವನ್ನು ನಡೆಸುತ್ತಿರುವವರಿಗೆ ಹೆಚ್ಚಿನ ಆದಾಯ. ವಿಮಾ ಏಜೆಂಟರಿಂದ ಉಪಯುಕ್ತ ಸಲಹೆ ದೊರೆಯಲಿದೆ.

ಸಿಂಹ: ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ. ಆಭರಣ ಖರೀದಿಸುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಗಮನ ವಹಿಸಬೇಕಾಗುವುದು. ಆರೋಗ್ಯದಲ್ಲಿ ಸುಧಾರಣೆ.

ಕನ್ಯಾ: ವಾಣಿಜ್ಯ ವ್ಯವಹಾರಗಳು ಕೈಗೂಡಿ ಹೆಚ್ಚಿನ ಆದಾಯ ತರಲಿದೆ. ಶುಭ ಸಮಾರಂಭಗಳಿಗಾಗಿ ವಿಶೇಷ ಖರ್ಚು. ಮಕ್ಕಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಸರ್ಕಾರಿ ನೌಕರರಿಗೆ ಬಿಡುವಿಲ್ಲದ ದಿನವಾಗಲಿದೆ.

ತುಲಾ: ನಿಶ್ಚಿತ ಗುರಿ ಸಾಧನೆಗಾಗಿ ಶ್ರಮ ವಹಿಸಬೇಕಾದೀತು. ತೈಲ ವ್ಯಾಪಾರಿಗಳಿಗೆ ಬೇಡಿಕೆ ಹೆಚ್ಚಳದಿಂದಾಗಿ ವಿಶೇಷ ಲಾಭ. ಮಿಶ್ರ ಭಾವನೆಯ ದಿನವಾಗಲಿದೆ. ಪತ್ನಿಯಿಂದ ಸಂಪೂರ್ಣ ಸಹಕಾರ ದೊರಕಿ ನೆಮ್ಮದಿ.

ವೃಶ್ಚಿಕ: ರಾಜಕೀಯ ವ್ಯಕ್ತಿಗಳೊಂದಿಗೆ ಬಿರುಸಿನ ಒಡನಾಟದಲ್ಲಿ ಭಾಗಿಯಾಗಬೇಕಾದೀತು. ಆಪ್ತ ವ್ಯಕ್ತಿಗಳ ಕೆಲಸವೊಂದನ್ನು ನೆರವೇರಿಸಲು ಜವಾಬ್ದಾರಿ ವಹಿಸುವಿರಿ. ಮನೆಮಂದಿಯ ಆಸೆ ಆಕಾಂಕ್ಷೆಗಳ ಬಗ್ಗೆ ನಿರಾಸಕ್ತಿ ತೋರದಿರಿ.

ಧನು: ವೃತ್ತಿಯಲ್ಲಿ ಹೆಚ್ಚಿನ ಪೈಪೋಟಿ ಎದುರಿಸಬೇಕಾದೀತು. ಪ್ರಬಲ ಪ್ರತಿಸ್ಪರ್ಧೆಯ ನಡುವೆಯೂ ಪ್ರಯತ್ನದಿಂದಾಗಿ ಗೆಲುವು. ಕ್ರೀಡಾಪಟುಗಳಿಗೆ ಹೆಚ್ಚಿನ ಅವಕಾಶ ಸಾಧ್ಯತೆ. ಮಹಿಳೆಯರಿಗೆ ನೆಮ್ಮದಿಯ ದಿನ.

ಮಕರ: ಅನಾವಶ್ಯಕ ಮಾತುಗಳಿಂದಾಗಬಹುದಾದ ಅವಘಡಕ್ಕಿಂತ ದಿನದ ಮಟ್ಟಿಗೆ ಮೌನ ವಹಿಸುವುದೇ ಲೇಸು. ಅಭಿಪ್ರಾಯಗಳನ್ನು ನೀಡುವಾಗ ಅತ್ಯಂತ ಜಾಗರೂಕರಾಗಿರಿ. ಆರ್ಥಿಕ ಅನುಕೂಲ.

ಕುಂಭ: ಇತರರಿಗೆ ನೆರವಾಗುವ ಮೂಲಕ ಸ್ವಯಂ ಆನಂದವನ್ನು ಅನುಭವಿಸುವಿರಿ. ಕೃಷಿ ಉತ್ಪನ್ನಗಳಿಂದ ಹೆಚ್ಚಿನ ಆದಾಯ. ಆರ್ಥಿಕ ಸಂಕಷ್ಟಗಳು ದೂರವಾಗಿ ನೆಮ್ಮದಿ. ವಿದ್ಯಾರ್ಥಿಗಳಿಗೆ ಸಾಧನೆಯ ದಿನ.

ಮೀನ: ಕಟ್ಟಡ ಸಾಮಗ್ರಿ ಖರೀದಿ ಸಾಧ್ಯತೆ. ಆಭರಣ ವ್ಯಾಪಾರದಿಂದ ಹೆಚ್ಚಿನ ಲಾಭ. ಉದ್ಯೋಗ ರಂಗದಲ್ಲಿ ಅತ್ಯಂತ ಯಶಸ್ವಿ ದಿನವಾಗಿ ಪರಿಣಮಿಸಲಿದೆ. ಅನ್ಯ ರೀತಿಯ ಆದಾಯ ನಿರೀಕ್ಷೆ.

ನಿಮ್ಮ ಜನ್ಮದಿನ 24-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಯೋಜನೆಗಳೆಲ್ಲವೂ ಸುಗಮವಾಗಿ ಸಾಗುತ್ತವೆ. ಮಕ್ಕಳ ಬಗ್ಗೆ ಅಧಿಕ ಶಿಸ್ತು ಮತ್ತು ಗಮನ ಅಗತ್ಯ. ಸಾಮಾಜಿಕ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವುದರಿಂದ ಉದ್ಯೋಗ ಸ್ಥಳದಲ್ಲಿ ಉತ್ತಮ ಸಂಪರ್ಕಗಳು ಬೆಳೆದು ವ್ಯವಹಾರದಲ್ಲಿ ಉನ್ನತಿಯನ್ನು ಕಾಣುವಿರಿ. ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ.



ಧರ್ಮದ ಮರ

ಸೆರೆಬಿದ್ದು ಧರ್ಮಪಾದಪ ನಿಲದು ಮತಗಳಲಿ |
ಜರೆಯಿಂದ ಬರಡಹುದು ಮತದ ನೆರಳಿನಲಿ ||
ಪರಸತ್ತ್ವರಸ ವಿಶ್ವಜೀವನದ ಬೇರ್ಗಳಿಂ |
ನೆರೆಯಲಾ ತರು ಸೊಂಪು – ಮಂಕುತಿಮ್ಮ || 526||

ಪದ-ಅರ್ಥ: ಸೆರೆಬಿದ್ದು = ಕೈದಿಯಾಗಿ, ಧರ್ಮಪಾದಪ = ಧರ್ಮ + ಪಾದಪ(ಮರ), ಜರೆ = ಮುದಿತನ, ವೃದ್ಧಾಪ್ಯ, ಬರಡಹುದು = ಬರಡು(ಸೊರಗು, ಒಣಗು) + ಅಹುದು, ಬೇರ್ಗಳಿಂ = ಬೇರುಗಳಿಂದ, ನೆರೆಯಲಾ = ನೆರೆಯಲು (ಸೇರಲು) + ಆ.

ವಾಚ್ಯಾರ್ಥ: ಧರ್ಮವೆಂಬ ಮರ, ಮತಗಳ ಸೆರೆಯಲ್ಲಿ ಬಿದ್ದು ನಿಲ್ಲಲಾರದು. ಮತದ ಬಿಗಿ ನೆರಳಿನಲ್ಲಿ ಅದು ಮುದಿಯಾಗಿ, ಬರಡಾಗುತ್ತದೆ. ಪರಸತ್ವದ ರಸ ವಿಶ್ವಜೀವನವೆಂಬ ಬೇರುಗಳಲ್ಲಿ ಸೇರಿದಾಗ ಧರ್ಮದ ಮರ ಸೊಂಪಾಗಿ ಬೆಳೆಯುತ್ತದೆ.

ವಿವರಣೆ: ಈ ನಾಲ್ಕು ಸಾಲಿನ ಚೌಪದಿ ನಮ್ಮನ್ನು ಬಹಳ ಚಿಂತನೆಗೆ ಹಚ್ಚುತ್ತದೆ, ಹಚ್ಚಬೇಕು. ಮೊದಲನೆಯ ಎರಡು ಸಾಲುಗಳು, ಬೆರಗು ಹುಟ್ಟಿಸುತ್ತವೆ. ಧರ್ಮವೆಂಬ ಮರ ಮತಗಳ ಸೆರೆಯಲ್ಲಿ ಸಿಕ್ಕು ಹಾಕಿಕೊಂಡು ನಿಲ್ಲಲಾರದು. ಹೌದು, ಮರ ಬಂಧನದಲ್ಲಿ ಹೇಗೆ ಬೆಳೆದೀತು? ಯಾವುದು ಈ ಬಂಧನ? ದಯವಿಟ್ಟು ಈ ಚಿಂತನೆಯನ್ನು ಗಮನಿಸಿ. ನನಗೆ ಒಂದು ವಿಷಯದ ಬಗ್ಗೆ ನಂಬಿಕೆ ಬಂದಿತು. ಅದು ನನ್ನ ವೈಯಕ್ತಿಕ ನಂಬಿಕೆ. ಮುಂದೆ ಕೆಲದಿನಗಳ ನಂತರ ಅದೇ ನಂಬಿಕೆಯನ್ನು ಹೊಂದಿದ ಮತ್ತೊಬ್ಬರು ಸಿಕ್ಕರು. ನಾವು ಸ್ನೇಹಿತರಾದೆವು. ಹೀಗೆಯೇ ನಾಲ್ಕಾರು ಜನರ ಗುಂಪಾದ ಮೇಲೆ, ನಮಗೊಂದು ವಿಚಾರ ಬಂದಿತು. ನಮ್ಮ ನಂಬಿಕೆ ತುಂಬ ಉದಾತ್ತವಾದದ್ದರಿಂದ ಅದನ್ನು ಎಲ್ಲರಿಗೂ ತಿಳಿಸಬೇಕು, ಅದನ್ನು ಪ್ರಸಾರಗೊಳಿಸಬೇಕು. ಈ ಪ್ರಯತ್ನದಲ್ಲಿ ಬೇರೆ ನಂಬಿಕೆಯುಳ್ಳವರು, ಅದರಲ್ಲೂ, ನಮ್ಮ ನಂಬಿಕೆಗೆ ವಿರುದ್ಧವಾದ ನಂಬಿಕೆಯುಳ್ಳವರನ್ನು ಕಂಡಾಗ ಕಸಿವಿಸಿಯಾಯಿತು, ಅವರನ್ನು ಖಂಡಿಸಿದೆವು. ನಮ್ಮ ಮತವೇ ಶ್ರೇಷ್ಠವಾದ್ದರಿಂದ ಉಳಿದವುಗಳು ಕನಿಷ್ಠ. ನಮ್ಮದೇ ಒಂದು ಮತವನ್ನೋ ವ್ಯವಸ್ಥೆಯನ್ನೋ ಕಟ್ಟಿಕೊಂಡೆವು. ನಮಗೀಗ ಎರಡು ಕಾರ್ಯಗಳು-ಮೊದಲನೆಯದು ನಮ್ಮ ಮತವನ್ನು ಉಳಿಸಿಕೊಳ್ಳುವುದು ಮತ್ತು ಎರಡನೆಯದು ಉಳಿದ ಮತಗಳನ್ನು ಖಂಡಿಸುವುದು. ಹೀಗೆ ಒಂದು ಮತಕ್ಕೇ ಜೋತುಬಿದ್ದು ನಾವು ಬಂಧಿಗಳಾದೆವು. ಹೊಸಮತದ ಚಿಂತನೆಗಳು ನಮ್ಮ ಹೃದಯವನ್ನು ಸೇರದಂತೆ ಗಟ್ಟಿಯಾಗಿ ಬಾಗಿಲು ಭದ್ರಪಡಿಸಿ ಅದನ್ನೊಂದು ಜೈಲನ್ನಾಗಿ ಮಾಡಿಕೊಂಡೆವು. ವೈಯಕ್ತಿಕ ನಂಬಿಕೆ ಸಮುದಾಯದ ನಂಬಿಕೆಯಾದಾಗ ಅದು ಉಗ್ರವಾಗುತ್ತದೆ. ಸಾಮ್ರಾಜ್ಯಶಾಹಿಯಾಗುತ್ತದೆ, ನಕರಾತ್ಮಕವಾಗುತ್ತದೆ, ಬಂಧಿಯಾಗುತ್ತದೆ. ಹೀಗೆ ಚಿಂತನೆ ಬಂಧಿಯಾದಾಗ ಹೊರಗಿನ ಚಿಂತನೆಗಳ ಪುಷ್ಠಿ ದೊರೆಯದೆ ಸೊರಗುತ್ತದೆ, ಬೇಗನೆ ಮುದಿಯಾಗುತ್ತದೆ. ಅದನ್ನೇ ಕಗ್ಗ ಹೇಳುತ್ತದೆ, 'ಮತಗಳ ನೆರಳಿನಲ್ಲಿ ಧರ್ಮ ಬರಡಾಗಿ ಮುದಿಯಾಗುತ್ತದೆ!'.

ಹಾಗಾದರೆ ಪರಿಹಾರವೇನು? ಯಾವುದೇ ಮತದ ಅಂಚುಗಳಿಲ್ಲದ, ಎಲ್ಲವನ್ನು ತೆಕ್ಕೆ ಹಾಕಿ ಪ್ರೀತಿಸುವ ಪರಸತ್ವದ ರಸ ನಮ್ಮ ಲೋಕಜೀವನದಲ್ಲಿ ಓತಪ್ರೋತವಾಗಿ ಹರಿಯಬೇಕು. ಅಲ್ಲಿ ಜಾತಿ ಇಲ್ಲ, ಮತ ಇಲ್ಲ, ನಾವೇ ಸರಿ ಎಂಬ ಹಮ್ಮು ಇಲ್ಲ, ಮೇಲು-ಕೀಳು ಇಲ್ಲ. ಅಂಥ ರಸ ಜೀವನದಲ್ಲಿ ಹರಿದರೆ ಧರ್ಮದ ಮರದ ಬೇರಿಗೆ ಸತ್ವ ದೊರೆತು, ಆ ಮರ ಸೊಂಪಾಗಿ ಹರಡಿ, ಎಲ್ಲರಿಗೂ ಶಾಂತಿಯ ನೆರಳು ಕೊಡುತ್ತದೆ.

ಪದಬಂಧ 4817


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಂಭಾಷಣೆ ಹೀಗೆ ಬಂದಿದೆ (3)
4.ಹಸನ್ಮುಖ ವದನ (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8. ಮುಸಲ್ಮಾನರ ಕಾಲಗಣನೆ (3)
11.ಕುದುರೆಯನ್ನೇರುವ ಬಳೆ (3)
13.ಸೂರ್ಯನ ಇನ್ನೊಂದು ಹೆಸರು (4)
17.ಯಕ್ಷಿಣಿಗಾರನಿಲ್ಲಿ ತಿರುಗಿದ್ದಾನಲ್ಲಾ! (4)
18.ಯೋಗವಿರುವ ಅದೃಷ್ಟ! (3)

ಮೇಲಿಂದ ಕೆಳಕ್ಕೆ

1.ನಿಕಟ ಸಂಪರ್ಕ (3)
2.ಈತ ದನಗಳನ್ನು ಕಾಯುವವನು (4)
3.ಕಾವ್ಯದ ನವರಸಗಳಲ್ಲಿ ಒಂದು (3)
5.ಪಗಡೆಯಾಟದಲ್ಲಿ ದಾಳಗಳಿಂದ ಸೂಚಿತವಾಗುವ ಸಂಖ್ಯೆ (2)
7.ವಿಸ್ತಾರವಾದ ನಿರೂಪಣೆ (3)
9.ದುರಸ್ತಿಯನ್ನು ಹೀಗೆನ್ನಿ (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ಚಿಲ್ಲರೆ ಹಣವಿದು (4)
14.ಹಿತವಾದ ಮಾತು (3)
15.ತಿರುಗಿದಾಗ ಆಶ್ರಯ ಸ್ಥಾನ ಕಾಣುತ್ತಿದೆಯಲ್ಲಾ? (2)
16.ಹೂವಿನಲ್ಲಿರುವ ಹುಡಿ ಇಲ್ಲಿದೆ (3)



4816ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಸ್ತಸಾಮುದ್ರಿಕೆ 4.ರಸಾಭಾಸ 5.ರಥಿಕ 7.ಕತ್ತರಿ 10.ತ್ರಿಕೋಣ 11.ತಿರುಕ 13.ಬಾಲರವಿ 15.ಪ್ರಣಯಕಲಹ

ಮೇಲಿಂದ ಕೆಳಕ್ಕೆ: 1.ಹಗುರ 2.ಕೆರ 3.ಮಸಲತ್ತು 6.ಕವಯಿತ್ರಿ 7.ಕರಣ 8.ರಿಯಾಯಿತಿ 9.ಕಾರುಬಾರು 12.ಕಲಹ 14.ವಿಪ್ರ

ಸುಡೊಕು 5203

	9	2		3			6	8
4					7	3		9
		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5202 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,955
ಇಂದಿನ ಅಂತ್ಯ	17,072
▲	117
ದಿನದ ಗರಿಷ್ಠ	17,118

ವಿನಿಮಯ ದರ

$ ಡಾಲರ್	75.26
£ ಪೌಂಡ್	100.72
€ ಯುರೊ	85.54
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1280 (1280)
ಸೋಯಾ (ರಿಫೈನ್ಡ್)	₹1170 (1175)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹1127 (1133)

ಕೊಬ್ಬರಿ ಧಾರಣೆ

ಮಂಗಳೂರು	₹8000-15000
ಪುತ್ತೂರು	₹4500-11500
ತುರುವೇಕೆರೆ	₹17900-17900

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹20000-27000
2ನೇ ದರ್ಜೆ ₹10000-18000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹3000-3500
ಮಧ್ಯಮ	₹2000-3000
ಸಣ್ಣ	₹1000-2000

‘ರಾಜ್ಯದಲ್ಲಿ ಶೀಘ್ರವೇ ಉದ್ಯೋಗ ನೀತಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದಲ್ಲಿ ಶೀಘ್ರದಲ್ಲೇ ಉದ್ಯೋಗ ನೀತಿ ಜಾರಿಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಬೆಳಗಾವಿ ಉದ್ಯೋಗ ಮೇಳ’ಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ‘ಉದ್ಯೋಗ ಮಾರ್ಗದರ್ಶನ, ವ್ಯಕ್ತಿತ್ವ ವಿಕಸನ ಹಾಗೂ ಕೌಶಲ ತರಬೇತಿ ಇಂದಿನ ಅಗತ್ಯ. ದೇಶದಲ್ಲೇ ಮೊದಲ ಬಾರಿಗೆ ಉದ್ಯೋಗ ನೀತಿ ತರಲಿದ್ದೇವೆ. ಹೆಚ್ಚು ಉದ್ಯೋಗ ಕೊಟ್ಟವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು’ ಎಂದರು.

‘ನನ್ನ ಸರ್ಕಾರ ರಾಜ್ಯದ ಜನರ ಭವಿಷ್ಯ ರೂಪಿಸುವ ಉದ್ದೇಶ ಹೊಂದಿದೆ. ಅದನ್ನು ಎಲ್ಲ ಕಾರ್ಯಕ್ರಮಗಳಲ್ಲೂ ನಿರೂಪಿಸಿ ತೋರಿಸುತ್ತೇವೆ. ಎಲ್ಲ ಜಿಲ್ಲೆಗಳಲ್ಲೂ ಉದ್ಯೋಗ ಮೇಳ ನಡೆಸಲಾಗುವುದು’ ಎಂದರು.

‘ಅಮೃತ ಕೌಶಲ ಅಭಿವೃದ್ಧಿ ಕಾರ್ಯಕ್ರಮ’ದಲ್ಲಿ ವರ್ಷದಲ್ಲಿ 75 ಸಾವಿರ ಒಬಿಸಿ ಹಾಗೂ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ನೀಡಲಾಗುವುದು’ ಎಂದು ಹೇಳಿದರು.



ಉದ್ಯಮಪತಿಗಳು ಉದ್ಯೋಗ ಒದಗಿಸಿ ಸಂಪತ್ತನ್ನು ಹಂಚಿಕೆ ಮಾಡಬೇಕು. ರಾಜ್ಯದ ಅಭಿವೃದ್ಧಿಗೆ ಕೈಜೋಡಿಸಬೇಕು
ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

63 ಕಂಪನಿಗಳಿಂದ ₹ 1.18 ಲಕ್ಷ ಕೋಟಿ ಸಂಗ್ರಹ

ಐಪಿಒ: ದಾಖಲೆಯ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮಾರುಕಟ್ಟೆ ಚಟುವಟಿಕೆಯು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಈವರೆಗೆ 63 ಕಂಪನಿಗಳು ಐಪಿಒ ಮೂಲಕ ಒಟ್ಟಾರೆ ₹ 1.18 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ ಎಂದು ಪ್ರೈಮ್ ಡೇಟಾಬೇಸ್ ಸಮೂಹ ಹೇಳಿದೆ. ಈ ಸಮೂಹವು ಐಪಿಒಗೆ ಸಂಬಂಧಿಸಿದ ದತ್ತಾಂಶ ನಿರ್ವಹಣೆ ಮಾಡುತ್ತದೆ.

2020ರಲ್ಲಿ 15 ಕಂಪನಿಗಳು ₹ 26,613 ಕೋಟಿ ಬಂಡವಾಳ ಸಂಗ್ರಹಿಸಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ನಾಲ್ಕೂವರೆ ಪಟ್ಟು ಹೆಚ್ಚು ಬಂಡವಾಳ ಸಂಗ್ರಹ ಆಗಿದೆ.

2017ರಲ್ಲಿ ಸಂಗ್ರಹ ಆಗಿದ್ದ ₹ 68,827 ಕೋಟಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ ಎಂದು ಅದು ತಿಳಿಸಿದೆ. ಸಣ್ಣ ಹೂಡಿಕೆದಾರರ ಜೊತೆಗೆ ಹೊಸ ಪೀಳಿಗೆಯ ತಂತ್ರಜ್ಞಾನ ನವೋದ್ಯಮಗಳಿಂದಾಗಿ ಈ ಬಾರಿ ಐಪಿಒ ಮಾರುಕಟ್ಟೆಯಲ್ಲಿ ದಾಖಲೆ ಮಟ್ಟದ ವಹಿವಾಟು ನಡೆಯುವಂತಾಗಿದೆ ಎಂದು ಪ್ರೈಮ್ ಡೇಟಾಬೇಸ್ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಪ್ರಣವ್ ಹಲ್ದಿಯಾ ಹೇಳಿದ್ದಾರೆ.

ಪ್ರಮುಖ ಐಪಿಒ (ಕೋಟಿಗಳಲ್ಲಿ)
₹18,300 ಪೇಟಿಎಂ
₹9,300 ಜೊಮ್ಯಾಟೊ



ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆಯು ಈ ವರ್ಷ ಗರಿಷ್ಠ ಮಟ್ಟದಲ್ಲಿದೆ. 2021ರಲ್ಲಿ ಈವರೆಗೆ 14.36 ಲಕ್ಷ ರಿಟೇಲ್ ಅರ್ಜಿಗಳು ಸಲ್ಲಿಕೆ ಆಗಿವೆ. 2020ರಲ್ಲಿ 12.77 ಲಕ್ಷ ಹಾಗೂ 2019ರಲ್ಲಿ 4.05 ಲಕ್ಷ ಅರ್ಜಿಗಳು ಸಲ್ಲಿಕೆ ಆಗಿದ್ದವು. ಗ್ಲೆನ್‌ಮಾರ್ಕ್ ಲೈಫ್ ಸೈನ್ಸಸ್‌ಗೆ ಗರಿಷ್ಠ 33.95 ಲಕ್ಷ ರಿಟೇಲ್ ಅರ್ಜಿಗಳು ಸಲ್ಲಿಕೆ ಆಗಿದ್ದವು. ದೇವಯಾನಿ ಇಂಟರ್‌ನ್ಯಾಷನಲ್‌ಗೆ 32.67 ಲಕ್ಷ ಹಾಗೂ ಲೇಟೆಂಟ್ ವೀವ್‌ಗೆ 31.87 ಲಕ್ಷ ಅರ್ಜಿಗಳು ಸಲ್ಲಿಕೆ ಆಗಿದ್ದವು ಎಂದು ಮಾಹಿತಿ ನೀಡಿದೆ.


ಐಪಿಒದಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ಮೊತ್ತದಲ್ಲಿ ರಿಟೇಲ್ ಹೂಡಿಕೆದಾರರಿಗೆ ಒಟ್ಟಾರೆ ₹ 24,292 ಕೋಟಿ ಮೊತ್ತದ ಷೇರು ಹಂಚಿಕೆ ಆಗಿದೆ. 2020ರಲ್ಲಿ ಹಂಚಿಕೆ ಆಗಿದ್ದ ಮೊತ್ತಕ್ಕಿಂತ ಇದು ಶೇ 30ರಷ್ಟು ಕಡಿಮೆ. 58 ಕಂಪನಿಗಳಲ್ಲಿ 34 ಕಂಪನಿಗಳ ಐಪಿಒ ಶೇ 10ಕ್ಕಿಂತಲೂ ಹೆಚ್ಚಿನ ಗಳಿಕೆ ತಂದುಕೊಟ್ಟಿವೆ (ಷೇರುಪೇಟೆ ಪ್ರವೇಶಿಸಿದ ದಿನ ವಹಿವಾಟಿನ ಅಂತ್ಯದ ವೇಳೆಗೆ ಇದ್ದ ಕಂಪನಿಯ ಷೇರು ಮೌಲ್ಯ ಆಧರಿಸಿ) ಎಂದು ಹಲ್ದಿಯಾ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಷೇರುಪೇಟೆ: ಮುಂದುವರಿದ ಸಕಾರಾತ್ಮಕ ವಹಿವಾಟು

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿನ ಗಳಿಕೆ ಮತ್ತು ದೇಶಿ ಷೇರುಪೇಟೆಗಳಲ್ಲಿ ಐ.ಟಿ, ಹಣಕಾಸು ಹಾಗೂ ವಿದ್ಯುತ್ ವಲಯದ ಷೇರುಗಳ ಖರೀದಿ ಭರಾಟೆಯಿಂದಾಗಿ ಗುರುವಾರದ ವಹಿವಾಟಿನಲ್ಲಿ ದೇಶಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡವು.

ರೂಪಾಯಿ ಮೌಲ್ಯ ವೃದ್ಧಿಯಾಗಿರುವುದು ಸಹ ಹೂಡಿಕೆದಾರರಲ್ಲಿ ವಿಶ್ವಾಸ ಮೂಡಿಸಿತು ಎಂದು ವರ್ತಕರು ಹೇಳಿದ್ದಾರೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 385 ಅಂಶ ಏರಿಕೆ ಕಂಡಿದ್ದು 57,315 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 117 ಅಂಶಗಳಷ್ಟು ಏರಿಕೆ ಕಂಡು 17,072 ಅಂಶಗಳಿಗೆ ತಲುಪಿತು.



ರಿಯಲ್ ಎಸ್ಟೇಟ್, ಹಣಕಾಸು ಮತ್ತು ಐ.ಟಿ. ವಲಯದ ಷೇರುಗಳ ಗಳಿಕೆಯ ಜೊತೆಗೆ ಜಾಗತಿಕ ಮಾರುಕಟ್ಟೆಗಳ ಏರುಮುಖ ಚಲನೆಯನ್ನು ಅನುಸರಿಸಿ ದೇಶಿ ವರ್ತಕರು ವಹಿವಾಟು ನಡೆಸಿದ್ದಾರೆ ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸತತ ಆರನೇ ದಿನವೂ ಏರಿಕೆ ಕಂಡಿತು. ಗುರುವಾರ 28 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 75.26ರಂತೆ ವಿನಿಮಯಗೊಂಡಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.20ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 75.14 ಡಾಲರ್‌ಗಳಿಗೆ ತಲುಪಿತು.

ಜನವರಿಯಿಂದ ಫೋಕ್ಸ್‌ವ್ಯಾಗನ್, ಹೀರೊ ವಾಹನಗಳ ಬೆಲೆ ಏರಿಕೆ

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವ ಕಾರಣ ಜನವರಿಯಿಂದ ವಾಹನಗಳ ಬೆಲೆ ಏರಿಕೆ ಮಾಡುವುದಾಗಿ ಹೀರೊ ಮೋಟೊಕಾರ್ಪ್ ಮತ್ತು ಫೋಕ್ಸ್‌ವ್ಯಾಗನ್ ಕಂಪನಿಗಳು ಗುರುವಾರ ಹೇಳಿವೆ.

ತನ್ನ ಎಲ್ಲ ಮಾದರಿಯ ವಾಹನಗಳ ಎಕ್ಸ್ ಷೋರೂಂ ದರವು ಜನವರಿ 4ರಿಂದ ಜಾರಿಗೆ ಬರುವಂತೆ ₹ 2 ಸಾವಿರದವರೆಗೆ ಏರಿಕೆ ಆಗಲಿದೆ ಎಂದು ಹೀರೊ ಮೋಟೊಕಾರ್ಪ್ ಪ್ರಕಟಣೆಯಲ್ಲಿ ತಿಳಿಸಿದೆ.

ಪೋಲೊ, ವೆಂಟೊ ಮತ್ತು ಟೈಗುನ್ ಮಾದರಿಗಳ ಬೆಲೆಯು ಶೇಕಡ 2ರಿಂದ ಶೇ 5ರವರೆಗೂ ಏರಿಕೆ ಆಗಲಿದೆ ಎಂದು ಫೋಕ್ಸ್‌ವ್ಯಾಗನ್ ಕಂಪನಿ ಹೇಳಿದೆ.

ರೇಷ್ಮೆ ಮಂಡಳಿಗೆ ನಾರಾಯಣ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಸದಸ್ಯರಾದ ಕೆ. ನಾರಾಯಣ ಮತ್ತು ಸಂಪತಿಯಾ ಉಯಿಕೆ ಅವರನ್ನು ಕೇಂದ್ರ ರೇಷ್ಮೆ ಮಂಡಳಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.



ಕೆ. ನಾರಾಯಣ

ನಾರಾಯಣ ಅವರು ಮಂಗಳೂರಿನವರು. ಸಂಪತಿಯಾ ಅವರು ಮಧ್ಯಪ್ರದೇಶ ರಾಜ್ಯಕ್ಕೆ ಸೇರಿದವರು. ಈ ಇಬ್ಬರು ಸದಸ್ಯರ ಆಯ್ಕೆಯು ಬುಧವಾರ ನಡೆದಿದೆ.

ಮುಂಬೈ ಧಾರಣೆ

ಶೇಂಗಾ
23-12-2021

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1290 (1290)
ಒಂದು ವಾರದ ಡೆಲಿವರಿ	1285 (1285)
ಸೋಯಾ ಕಚ್ಚಾ	1125 (1132)
ಪಾಮ್ ವಾರದ ಡೆಲಿವರಿ	1125 (1131)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,200 (47,900)
ಬೆಳ್ಳಿ ಕೆ.ಜಿ	61,800 (61,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಓಮೈಕ್ರಾನ್‌ನಿಂದ ವಾಹನ ಪೂರೈಕೆಗೆ ಇನ್ನಷ್ಟು ಅಡ್ಡಿ’

ನವದೆಹಲಿ (ಪಿಟಿಐ): ಓಮೈಕ್ರಾನ್ ಹರಡುವುದನ್ನು ತಡೆಯಲು ಸೆಮಿಕಂಡಕ್ಟರ್ ಚಿಪ್ ತಯಾರಿಸುವ ದೇಶಗಳು ಲಾಕ್‌ಡೌನ್ ಜಾರಿಗೊಳಿಸಿದಲ್ಲಿ ಭಾರತದಲ್ಲಿ ಪ್ರಯಾಣಿಕ ವಾಹನಗಳ ಪೂರೈಕೆ ಮೇಲೆ ತೀವ್ರ ಪರಿಣಾಮ ಉಂಟಾಗಲಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಆತಂಕ ವ್ಯಕ್ತಪಡಿಸಿದೆ.

ಮುಂದಿನ ವರ್ಷದ ದ್ವಿತೀಯಾರ್ಧದಲ್ಲಿ ಚಿಪ್ ಕೊರತೆಯ ಸಮಸ್ಯೆ ನಿವಾರಣೆ ಆಗುವ ಆಗುವ ನಿರೀಕ್ಷೆ ಇದೆ. ಆದರೆ, ಓಮೈಕ್ರಾನ್ ನಿಯಂತ್ರಿಸಲು ಚಿಪ್ ತಯಾರಿಕಾ ದೇಶಗಳು ಲಾಕ್‌ಡೌನ್ ಜಾರಿಗೊಳಿಸಿದರೆ ಅಥವಾ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆಗೆ ಬೇಕಾದ ಸಾಧನಗಳಿಗೆ ಮಾತ್ರವೇ ಚಿಪ್ ತಯಾರಿಸಲು ಆದ್ಯತೆ ನೀಡಿದಲ್ಲಿ ಪ್ರಯಾಣಿಕ ವಾಹನಗಳ ಪೂರೈಕೆ ಸಮಸ್ಯೆಯು ಇನ್ನಷ್ಟು ಬಿಗಡಾಯಿಸಲಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ಹೇಳಿದ್ದಾರೆ.



ಕೋವಿಡ್ ಸಂಪೂರ್ಣವಾಗಿ ಇಲ್ಲವಾದರೆ 2023ರ ವೇಳೆಗೆ ವಾಹನೋದ್ಯಮವು ಸಂಪೂರ್ಣವಾಗಿ ಚೇತರಿಸಿಕೊಳ್ಳಲಿದ್ದು ಕೋವಿಡ್ ಪೂರ್ವದ ಮಟ್ಟಕ್ಕೆ ಮರಳುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ. ಕೋವಿಡ್‌ನ ಮೂರನೇ ಅಲೆಯು ಬಂದಲ್ಲಿ ದ್ವಿಚಕ್ರ ವಾಹನ ಬೇಡಿಕೆಯು ಇನ್ನಷ್ಟು ಕುಸಿತ ಕಾಣಲಿದೆ ಎಂದು ಅವರು ತಿಳಿಸಿದ್ದಾರೆ.

ಕಾಬೂಲ್: ದಾಳಿಕೋರನ ಹತ್ಯೆ

ಕಾಬೂಲ್ (ರಾಯಿಟರ್ಸ್): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನ ಪಾಸ್‌ಪೋರ್ಟ್ ಕಚೇರಿಯ ಪ್ರವೇಶ ದ್ವಾರದ ಬಳಿ ಆತ್ಮಹತ್ಯಾ ದಾಳಿಕೋರನನ್ನು ಗುರುವಾರ ಹತ್ಯೆ ಮಾಡಲಾಗಿದೆ.

ಪಾಸ್‌ಪೋರ್ಟ್ ಕಚೇರಿ ಒಳಗೆ ಪ್ರವೇಶಿಸಲು ದಾಳಿಕೋರ ಯತ್ನಿಸುತ್ತಿದ್ದಾಗ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಇದೇ ವೇಳೆ ಸ್ಫೋಟದಲ್ಲಿ ಹಲವರು ಗಾಯಗೊಂಡಿದ್ದಾರೆ ಎಂದು ಗೃಹ ಸಚಿವಾಲಯದ ವಕ್ತಾರರು ಮಾಹಿತಿ ನೀಡಿದ್ದಾರೆ.

ಈ ಪ್ರದೇಶದ ಸುತ್ತಲಿನ ಕಟ್ಟಡಗಳು ಮತ್ತು ರಸ್ತೆಗಳನ್ನು ತಾಲಿಬಾನ್‌ನ ಭದ್ರತಾ ಪಡೆಗಳು ಲಾಕ್‌ಡೌನ್ ಮಾಡಿವೆ ಎಂದು ವಕ್ತಾರರು ಹೇಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ವಾತಾವರಣವು ಸಹಜ ಸ್ಥಿತಿಗೆ ಮರಳಿದ ಬಳಿಕ, ಪಾಸ್‌ಪೋರ್ಟ್ ಕಚೇರಿಗೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಅವರನ್ನು ಗುರಿಯಾಗಿಸಿ ದಾಳಿ ಮಾಡುವುದು ಆತನ ಉದ್ದೇಶವಾಗಿರಬಹುದು ಎಂದು ಹೇಳಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	520
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	26039-42319
ಕೋಕ	18860-34200
ಹಳೆಚಾಲಿ	48409-49659
ಹೊಸಚಾಲಿ	35669-41424
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	28699-38612
ಚಾಲಿ	44099-49209
ಕೋಕ	26699-38299
ಹೊಸಚಾಲಿ	31899-39399
ಕೆಂಪುಗೋಟು	21699-34499
ರಾಶಿ	44649-48399
ತಟ್ಟಿಬೆಟ್ಟೆ	30012-48099
ಶಿರಸಿ	
ಬೆಟ್ಟೆ	36899-46309
ಬಿಳಿಗೋಟು	25399-43239
ಚಾಲಿ	39129-50509
ರಾಶಿ	46599-49189
ಯಲ್ಲಾಪುರ	
ಬಿಳಿಗೋಟು	29299-39669
ಚಾಲಿ	40311-50050
ಕೋಕ	21899-31899
ಕೆಂಪುಗೋಟು	31542-36109
ರಾಶಿ	46299-51990
ತಟ್ಟಿಬೆಟ್ಟೆ	38042-45818
ರಾಮನಗರ ರೇಷ್ಮೆ	
ಮಿಶ್ರತಳಿ	396-634
ದ್ವಿತಳಿ	411-870

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15300	15400	15450	233.55ಸೆಂಟ್ಸ್
ಎಸಿ	7000	6700	6500	
ಆರ್‌ಪಿ	6300	6500	---	ಲಂಡನ್
ಆರ್‌ಸಿ	3900	3800	---	2446 ಡಾಲರ್ಸ್

ಸಿಂಗಪುರ: ಭಾರತದ ವಿದ್ಯಾರ್ಥಿಗೆ 6 ತಿಂಗಳ ಜೈಲು ಶಿಕ್ಷೆ

ಸಿಂಗಪುರ(ಪಿಟಿಐ): ಸಿಂಗಪುರದಲ್ಲಿ ಭಾರತದ ವಿದ್ಯಾರ್ಥಿಯೊಬ್ಬರು ಪರವಾನಗಿ ಪಡೆಯದ ಪಾವತಿ ಸೇವೆಯ ವ್ಯವಹಾರವನ್ನು ಮುಂದುವರಿಸಲು ಸಂಚು ರೂಪಿಸಿದಕ್ಕೆ ಸಂಬಂಧಿಸಿ ತಪ್ಪೊಪ್ಪಿಕೊಂಡ ಬಳಿಕ ಗುರುವಾರ ಆರು ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು.

ಜಸ್ಪ್ರೀತ್ ಸಿಂಗ್ (26) ಶಿಕ್ಷೆಗೆ ಒಳಗಾದ ವಿದ್ಯಾರ್ಥಿ. ಈತ ಎಂಟು ಮಂದಿ ಸಹಚರರನ್ನು ಹೊಂದಿದ್ದು ಅವರೆಲ್ಲರೂ ಭಾರತೀಯರು ಎಂದು ನ್ಯಾಯಾಲಯವು ಹೇಳಿರುವುದಾಗಿ ಚಾನೆಲ್ ನ್ಯೂಸ್ ಏಷ್ಯಾ ವರದಿ ಮಾಡಿದೆ. ಆತಿಥ್ಯ ಮತ್ತು ಪ್ರವಾಸೋದ್ಯಮ ನಿರ್ವಹಣೆಯಲ್ಲಿ ಡಿಪ್ಲೊಮಾ ಪಡೆಯಲು ಸಿಂಗ್ 2019ರ ಸೆಪ್ಟೆಂಬರ್‌ನಲ್ಲಿ ಸಿಂಗಪುರಕ್ಕೆ ತೆರಳಿದ್ದರು.

ಭಾರತೀಯ ಮೂಲದ ದಂಪತಿ ದೋಷಿ

ಲಂಡನ್(ಪಿಟಿಐ): ಇಂಗ್ಲೆಂಡ್ ಸರ್ಕಾರ ನೀಡುವ ಸಾಲವನ್ನು ಪಡೆಯಲು ಸುಳ್ಳು ಮಾಹಿತಿ ನೀಡಿದಕ್ಕಾಗಿ ಭಾರತೀಯ ಮೂಲದ ಮಾಜಿ ರಾಜಕಾರಣಿ ಮತ್ತು ಅವರ ಪತ್ನಿಯನ್ನು ದೋಷಿ ಎಂದು ಘೋಷಿಸಲಾಗಿದ್ದು, ಶಿಕ್ಷೆಯ ಪ್ರಮಾಣವನ್ನು ಜನವರಿ 14ರಂದು ಪ್ರಕಟಿಸಲಾಗುತ್ತದೆ.

ಹರ್ಮನ್ ಬಂಗೇರ್(40) ಮತ್ತು ಪತ್ನಿ ನೀನಾ ಕುಮಾರಿ(38) ಅವರು ದೋಷಿಗಳು. ಪಿಜ್ಜಾಪ್ಲಸ್ ಮಾಲೀಕತ್ವವನ್ನು ಹಂಚಿಕೊಂಡು, ವ್ಯಾಪಾರಕ್ಕಾಗಿ ಬ್ಯಾಂಕಿನಿಂದ ₹ 10 ಕೋಟಿ ಸಾಲ ಪಡೆಯಲು ಅರ್ಜಿ ಸಲ್ಲಿಸಿದ್ದರು. ಕಂಪನಿಯು 2019ರ ಅಕ್ಟೋಬರ್‌ನಿಂದಲೇ ಕಾರ್ಯನಿರ್ವಹಿಸುತ್ತಿದೆ ಎನ್ನುವ ತಪ್ಪು ಮಾಹಿತಿ ನೀಡಿದ್ದರು ಎಂದು ದಾಖಲೆಗಳ ಪರಿಶೀಲನೆಯಿಂದ ಗೊತ್ತಾಗಿದೆ.

ಕಾರ್ಡ್ ವಿವರ ಸಂಗ್ರಹ: ಗಡುವು 6 ತಿಂಗಳು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ವಿವರಗಳನ್ನು ಪಾವತಿ ವಹಿವಾಟಿನ ಪಾಲುದಾರರು ‘ಟೋಕನ್’ ರೂಪದಲ್ಲಿ ಮಾತ್ರ ಸಂಗ್ರಹಿಸುವ ವ್ಯವಸ್ಥೆ ಜಾರಿಗೆ ತರಲು ನೀಡಿದ್ದ ಗಡುವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಆರು ತಿಂಗಳ ಮಟ್ಟಿಗೆ ಮುಂದೂಡಿದೆ.

ಈ ವ್ಯವಸ್ಥೆಯು ಜುಲೈ 1ರಿಂದಲೇ ಜಾರಿಗೆ ಬರಬೇಕಿತ್ತು. ಆದರೆ, ಹೊಸ ವ್ಯವಸ್ಥೆಯನ್ನು ಜಾರಿಗೆ ತರಲು ಆರು ತಿಂಗಳ ಕಾಲಾವಕಾಶವನ್ನು ಆರ್‌ಬಿಐ ನೀಡಿತ್ತು. ಅದರ ಅನ್ವಯ ಹೊಸ ವ್ಯವಸ್ಥೆಯು ಜನವರಿ 1ರಿಂದ ಜಾರಿಗೆ ಬರಬೇಕಿತ್ತು. ಆದರೆ, ಗಡುವನ್ನು ಮತ್ತೆ ವಿಸ್ತರಣೆ ಮಾಡಬೇಕು ಎಂದು ಬ್ಯಾಂಕಿಂಗ್ ವಲಯವು ಆರ್‌ಬಿಐಗೆ ಮನವಿ ಸಲ್ಲಿಸಿತ್ತು.



ಇದನ್ನು ಪರಿಗಣಿಸಿರುವ ಆರ್‌ಬಿಐ, ಈಗ ಗಡುವನ್ನು ಎರಡನೆಯ ಬಾರಿಗೆ ವಿಸ್ತರಣೆ ಮಾಡಿದೆ. ಇದರ ಅನ್ವಯ, ಹೊಸ ವ್ಯವಸ್ಥೆಯು 2022ರ ಜುಲೈ 1ರಿಂದ ಜಾರಿಗೆ ಬರಲಿದೆ ಎಂದು ಆರ್‌ಬಿಐ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. 2022ರ ಜೂನ್ 30ರ ನಂತರದಲ್ಲಿ, ಸಂಗ್ರಹಿಸಿ ಇಡಲಾದ ಕಾರ್ಡ್ ವಿವರಗಳನ್ನು ನಾಶಪಡಿಸಲಾಗುತ್ತದೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ. ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್ ನೀಡುವ ಕಂಪನಿಗಳು ಮಾತ್ರ ಕಾರ್ಡ್ ವಿವರಗಳನ್ನು ಸಂಗ್ರಹಿಸಿ ಇರಿಸಿಕೊಳ್ಳಲು ಜೂನ್ 30ರ ನಂತರ ಅವಕಾಶ ಇರಲಿದೆ.

ಮ್ಯಾನ್ಮಾರ್‌ಗೆ 10 ಲಕ್ಷ ಡೋಸ್ ಲಸಿಕೆ ನೀಡಿದ ಭಾರತ

ನೈಪಿತಾವ್, ಮ್ಯಾನ್ಮಾರ್ (ಪಿಟಿಐ): ಭಾರತವು ನೆರೆಯ ರಾಷ್ಟ್ರವಾದ ಮ್ಯಾನ್ಮಾರ್‌ಗೆ ಹತ್ತು ಲಕ್ಷ ಡೋಸ್ ಕೋವಿಡ್ ಲಸಿಕೆ, ಹತ್ತು ಸಾವಿರ ಟನ್ ಅಕ್ಕಿ ಮತ್ತು ಗೋಧಿಯನ್ನು ಕಳುಹಿಸಿಕೊಟ್ಟಿದೆ.

ಮ್ಯಾನ್ಮಾರ್‌ಗೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಭಾರತದ ವಿದೇಶಾಂಗ ಕಾರ್ಯದರ್ಶಿ ಹರ್ಷ ವರ್ಧನ್ ಶ್ರಿಂಗ್ಲಾ ಅವರು ಈ ವಿಷಯ ತಿಳಿಸಿದ್ದಾರೆ.

ಫೆಬ್ರುವರಿ 1ರಂದು ನಡೆದ ಸೇನಾ ದಂಗೆಯಲ್ಲಿ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ, ಆಂಗ್ ಸಾನ್ ಸೂಕಿ ಅವರನ್ನು ಬಂಧಿಸಿದ ಬಳಿಕ ಇದೇ ಮೊದಲ ಬಾರಿಗೆ ಭಾರತದ ಉನ್ನತ ಮಟ್ಟದ ನಿಯೋಗ ಮ್ಯಾನ್ಮಾರ್‌ಗೆ ಭೇಟಿ ನೀಡಿದೆ. ಮ್ಯಾನ್ಮಾರ್‌ನ ರೆಡ್ ಕ್ರಾಸ್ ಸೊಸೈಟಿಗೆ ಶ್ರಿಂಗ್ಲಾ ಅವರು ಬುಧವಾರ ಲಸಿಕೆಗಳನ್ನು ಹಸ್ತಾಂತರಿಸಿದರು.



ಹರ್ಷ ವರ್ಧನ್ ಶ್ರಿಂಗ್ಲಾ

‘ಭಾರತ ದೊಂದಿಗೆ ದೀರ್ಘವಾದ ಗಡಿಯನ್ನು ಹಂಚಿಕೊಂಡಿರುವ ಮ್ಯಾನ್ಮಾರ್ ಜನತೆಗೆ ಮಾನವೀಯ ನೆರವು ನೀಡುವುದನ್ನು ನಾವು ಮುಂದುವರಿಸುತ್ತೇವೆ. ಮ್ಯಾನ್ಮಾರ್ ಕೋವಿಡ್ ವಿರುದ್ಧ ಹೋರಾಡುತ್ತಿರುವುದರಿಂದ ಭಾರತದಲ್ಲಿ ತಯಾರಿಸಿದ 10 ಲಕ್ಷ ಡೋಸ್ ಲಸಿಕೆಗಳನ್ನು ಅಲ್ಲಿನ ರೆಡ್‌ಕ್ರಾಸ್ ಸೊಸೈಟಿಗೆ ಹಸ್ತಾಂತರಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಚಾರ್ಲ್ಸ್ ಶೋಭರಾಜ್ ಬಿಡುಗಡೆಗೆ ಅರ್ಜಿ: ಸರ್ಕಾರಕ್ಕೆ ನೋಟಿಸ್

ಕಠ್ಮಂಡು(ಪಿಟಿಐ): ಕುಖ್ಯಾತ ಸರಣಿ ಹಂತಕ ಚಾರ್ಲ್ಸ್ ಶೋಭರಾಜ್ ಅವರಿಗೆ 77 ವರ್ಷ ಆಗಿರುವುದರಿಂದ ಬಿಡುಗಡೆ ಮಾಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಮೂರು ದಿನಗಳಲ್ಲಿ ಉತ್ತರಿಸುವಂತೆ ನೇಪಾಳದ ಸುಪ್ರೀಂಕೋರ್ಟ್ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಶೋಭರಾಜ್ ಅವರು 18 ವರ್ಷಗಳಿಂದ ಜೈಲಿನಲ್ಲಿದ್ದಾರೆ. ವಯಸ್ಸಾಗಿರುವ ಕಾರಣ ಅವರನ್ನು ಬಿಡುಗಡೆ ಮಾಡಬೇಕು ಎಂಬುದು ಅರ್ಜಿದಾರರ ಬೇಡಿಕೆ. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಿಲ್‌ಕುಮಾರ್ ಸಿನ್ಹಾ ನೇತೃತ್ವದ ಪೀಠ, ಈ ಬಗ್ಗೆ ಸ್ಪಷ್ಟನೆ ನೀಡುವಂತೆ ಸರ್ಕಾರಕ್ಕೆ ಸೂಚಿಸಿದರು.

ಪ್ರೊ ಕಬಡ್ಡಿ ಲೀಗ್ : ಪಿಂಕ್ ಪ್ಯಾಂಥರ್ಸ್ ತಂಡಕ್ಕೆ ನಿರಾಶೆ; ದಬಂಗ್ ಡೆಲ್ಲಿ ತಂಡಕ್ಕೆ ಗೆಲುವು

ರಾಕೇಶ್ ಮಿಂಚು: ಗುಜರಾತ್ ಜಯಭೇರಿ

ಬೆಂಗಳೂರು: ರಾಕೇಶ್ ನರ್ವಾಲ್ ಮತ್ತು ಗಿರೀಶ ಎರ್ನಕ್ ಅವರ ಅಮೋಘ ಆಟದ ಬಲದಿಂದ ಗುಜರಾತ್ ಜೈಂಟ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ನಲ್ಲಿ ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗುರುವಾರ ಗುಜರಾತ್ ತಂಡವು 34–27ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ವಿರುದ್ಧ ಜಯಿಸಿತು.

ರಾಕೇಶ್ ನರ್ವಾಲ್ ರೇಡಿಂಗ್‌ನಲ್ಲಿ ಆರು ಮತ್ತು ಒಂದು ಬೋನಸ್ ಅಂಕ ಗಳಿಸಿದರು. ಗಿರೀಶ ಎರ್ನಕ್ ಟ್ಯಾಕಲ್‌ನಲ್ಲಿ ಏಳು ಪಾಯಿಂಟ್ಸ್ ಕಾಣಿಕೆ ನೀಡಿದರು.

ಪಿಂಕ್ ಪ್ಯಾಂಥರ್ಸ್ ತಂಡದ ಅರ್ಜುನ್ ದೇಶ್ವಾಲ್ ಕೂಡ ದಿಟ್ಟ ಹೋರಾಟ ಮಾಡಿದರು. ಅವರು ಮೂರು ಬೋನಸ್ ಸಹಿತ ಒಟ್ಟು 10 ಪಾಯಿಂಟ್‌ಗಳನ್ನು ರೇಡಿಂಗ್‌ನಲ್ಲಿ ಜೇಬಿಗಿಳಿಸಿದರು.

ಇದರಿಂದಾಗಿ ಪಂದ್ಯದ ಮೊದಲರ್ಧವು ರೋಚಕವಾಗಿತ್ತು. ಅರ್ಧವಿರಾಮದ ವೇಳೆಗೆ ಗುಜರಾತ್ ತಂಡವು 19–17ರಿಂದ ಅಲ್ಪ ಮುನ್ನಡೆ ಸಾಧಿಸಿತ್ತು.

ವಿರಾಮದ ನಂತರದಲ್ಲಿ ಆಟ ಮತ್ತಷ್ಟು ರಂಗೇರಿತು. ಈ ಹಂತದಲ್ಲಿ ಗುಜರಾತ್ ತಂಡ ಎರಡು ಬಾರಿ ಎದುರಾಳಿಯ ಅಂಕಣವನ್ನು ಖಾಲಿ ಮಾಡಿತು. ರಕ್ಷಣಾತ್ಮಕ ತಂತ್ರಗಳಲ್ಲಿ ಮೇಲುಗೈ ಸಾಧಿಸಿತು. ದಾಳಿಯಲ್ಲಿಯೂ ಮುಂಚೂಣಿಯಲ್ಲಿತ್ತು. ಒಂದು ಅಥವಾ ಎರಡು ಪಾಯಿಂಟ್‌ಗಳ ಮುನ್ನಡೆ ಕಾಯ್ದುಕೊಳ್ಳುತ್ತ ಸಾಗಿದ ಗುಜರಾತ್ ತಂಡವು ಅಂತಿಮವಾಗಿ ಏಳು ಪಾಯಿಂಟ್‌ಗಳ ಅಂತರದ ಜಯಗಳಿಸುವಲ್ಲಿ ಯಶಸ್ವಿಯಾಯಿತು. ತಂಡದ ರಾಕೇಶ್ ಸಂಗ್ರಾಯ್ ರೇಡಿಂಗ್‌ನಲ್ಲಿ ಮಿಂಚಿದರು. ಒಟ್ಟು ಅರ್ಧ ಡಜನ್ ಪಾಯಿಂಟ್‌ಗಳನ್ನು ತಂಡಕ್ಕೆ ಕಾಣಿಕೆ ನೀಡಿದರು. ಪ್ಯಾಂಥರ್ಸ್ ತಂಡದಲ್ಲಿ ದೀಪಕ್ ನಿವಾಸ್ ಹೂಡಾ ರೇಡಿಂಗ್‌ನಲ್ಲಿ ಮೂರು ಮತ್ತು ಒಂದು ಬೋನಸ್ ಪಾಯಿಂಟ್ ಗಳಿಸಿದರು.

ಸಂದೀಪ್ ಧುಳ್ ಮೂರು ಟ್ಯಾಕಲ್ ಪಾಯಿಂಟ್ ಗಳಿಸಿದರು. ನಿತಿನ್ ರಾವಳ್ ಮತ್ತು ಅಮಿತ್ ಹೂಡಾ ತಲಾ ಎರಡು ಪಾಯಿಂಟ್‌ಗಳ ಕಾಣಿಕೆ ನೀಡಿದರು. ಆದರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ.

VIVO PRO KABADDI

ಇಂದಿನ ಪಂದ್ಯ (ರಾತ್ರಿ)

- ದಬಂಗ್ ಡೆಲ್ಲಿ Vs ಯು ಮುಂಬಾ – 7.30
- ಬೆಂಗಳೂರು ಬುಲ್ಸ್ – ತಮಿಳ್ ತಲೈವಾಸ್ – 8.30
- ಬೆಂಗಾಲ್ ವಾರಿಯರ್ಸ್ – ಗುಜರಾತ್ ಜೈಂಟ್ಸ್ – 9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಹರಿಯಾಣ ಸ್ಟೀಲರ್ಸ್ ತಂಡದ ಆಟಗಾರರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಪಟ್ನಾ ಪೈರೇಟ್ಸ್ ಆಟಗಾರ ಸಚಿನ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಯು ಮುಂಬಾ	1	1	-	-	5
ದಬಂಗ್ ಡೆಲ್ಲಿ	1	1	-	-	5
ಗುಜರಾತ್ ಜೈಂಟ್ಸ್	1	1	-	-	5
ಬೆಂಗಾಲ್ ವಾರಿಯರ್ಸ್	1	1	-	-	5
ಪಟ್ನಾ ಪೈರೇಟ್ಸ್	1	1	-	-	5
ತೆಲುಗು ಟೈಟನ್ಸ್	1	-	-	1	3
ತಮಿಳ್ ತಲೈವಾಸ್	1	-	-	1	3
ಹರಿಯಾಣ ಸ್ಟೀಲರ್ಸ್	1	-	1	-	1
ಯು.ಪಿ.ಯೋಧಾ	1	-	1	-	1
ಜೈಪುರ ಪಿಂಕ್ ಪ್ಯಾಂಥರ್ಸ್	1	-	1	-	1
ಪುಣೇರಿ ಪಲ್ಟನ್	1	-	1	-	0
ಬೆಂಗಳೂರು ಬುಲ್ಸ್	1	-	1	-	0

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

ಪಟ್ನಾ ಪೈರೇಟ್ಸ್, ದಬಂಗ್ ಡೆಲ್ಲಿಗೆ ಗೆಲುವು

ಪಟ್ನಾ ಪೈರೇಟ್ಸ್ ಮತ್ತು ದಬಂಗ್ ಡೆಲ್ಲಿ ತಂಡಗಳು ಗುರುವಾರ ಗೆಲುವು ಸಾಧಿಸಿದವು. ಎರಡನೇ ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡವು 41–30ರಿಂದ ಪುಣೇರಿ ಪಲ್ಟನ್ ವಿರುದ್ಧ ಗೆಲುವು ಸಾಧಿಸಿತು. ನವೀನ್ ಕುಮಾರ್ 16 ಅಂಕಗಳನ್ನು ಗಳಿಸುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಆಲ್‌ರೌಂಡರ್ ವಿಜಯ್ ಒಟ್ಟು 9 ಅಂಕ ಗಳಿಸಿದರು.

ಪುಣೇರಿ ತಂಡದ ನಾಯಕ ನಿತಿನ್ ಥೋಮರ್ ಏಳು ಹಾಗೂ ರಾಹುಲ್ ಚೌಧರಿ ಐದು ಅಂಕಗಳನ್ನು ಗಳಿಸಿದರು.

ಕೊನೆಯ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ವಿರುದ್ಧ ಪಟ್ನಾ ಪೈರೇಟ್ಸ್ 42–39ರಲ್ಲಿ ಗೆದ್ದಿತು. ಪಟ್ನಾ ಪೈರೇಟ್ಸ್ ಪರವಾಗಿ ಮೋನು ಗೋಯತ್ 15 ಪಾಯಿಂಟ್ ಗಳಿಸಿದರು. ಇದರಲ್ಲಿ 11 ಟಚ್ ಪಾಯಿಂಟ್ಸ್ ಮತ್ತು 3 ಬೋನಸ್ ಪಾಯಿಂಟ್ಸ್ ಇದ್ದವು.

ಸಚಿನ್ ಮತ್ತು ನಾಯಕ ಪ್ರಶಾಂತ್ ಕುಮಾರ್ ತಲಾ 7 ಪಾಯಿಂಟ್ ಗಳಿಸಿದರು. ಸಚಿನ್ ರೈಡಿಂಗ್‌ನಲ್ಲಿ 6 ಟಚ್ ಪಾಯಿಂಟ್ ಕಲೆ ಹಾಕಿದರು. ಹರಿಯಾಣ ಸ್ಟೀಲರ್ಸ್‌ಗಾಗಿ ರೋಹಿತ್ ಕುಮಾರ್ 10 ಪಾಯಿಂಟ್ ಗಳಿಸಿದರು. ವಿಕಾಸ್ ಖಂಡೋಲ 6 ಮತ್ತು ಸುರೇಂದರ್ ನಾಡಾ 5 ಪಾಯಿಂಟ್ ಗಳಿಸಿದರು.

ಹರ್ನೂರ್ ಸಿಂಗ್ ಶತಕ

19 ವರ್ಷದೊಳಗಿನವರ ಏಷ್ಯಾಕಪ್: ಭಾರತ ಜಯಭೇರಿ

ದುಬೈ (ಪಿಟಿಐ): ಹರ್ನೂರ್ ಸಿಂಗ್ ಗಳಿಸಿದ ಭರ್ಜರಿ ಶತಕದ ಬಲದಿಂದ ಭಾರತ ಯುವ ತಂಡವು ಗುರುವಾರ ಇಲ್ಲಿ ಆರಂಭವಾದ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಐಸಿಸಿ ಅಕಾಡೆಮಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 154 ರನ್‌ಗಳಿಂದ ಯುನೈಟೆಡ್ ಅರಬ್ ಎಮಿರೇಟ್ಸ್ ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಯುಎಇ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಹರ್ನೂರ್ ಸಿಂಗ್ (120; 130ಎ, 11ಬೌಂಡರಿ) ಶತಕದ ಬಲದಿಂದ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 282 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಯುಎಇ 34.3 ಓವರ್‌ಗಳಲ್ಲಿ 128 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಭಾರತ ತಂಡದ ರಾಜ್ಯವರ್ಧನ್ ಹಂಗರ್ಗೇಕರ್ (24ಕ್ಕೆ3) ಅವರ ಬೌಲಿಂಗ್ ಮುಂದೆ ಯುಎಇ ತತ್ತರಿಸಿತು.


ಯಶ್ ಧುಳ್

ಭಾರತ ತಂಡವು ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ಮೊದಲ ವಿಕೆಟ್ ಕಳೆದುಕೊಂಡಿತು. ಆದರೆ, ಹರ್ನೂರ್ ಸಿಂಗ್ ಮತ್ತು ರಶೀದ್ (35; 60ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 90 ರನ್ ಗಳಿಸಿತು. ರಶೀದ್ ಔಟಾದ ನಂತರ ಹರ್ನೂರ್ ಜೊತೆಗೂಡಿದ ನಾಯಕ ಯಶ್ ಧುಳ್ (63; 68ಎ, 4X4) ಮೂರನೇ ವಿಕೆಟ್ ಜೊತೆಯಾಟದಲ್ಲಿ 120 ರನ್ ಸೇರಿಸಿದರು.

ಇನಿಂಗ್ಸ್‌ನ ಕೊನೆಯಲ್ಲಿ ಮಿಂಚಿದ ರಾಜ್ಯವರ್ಧನ್ (ಔಟಾಗದೆ 48; 23ಎ, 4X6, 6X2) ಅಬ್ಬರದ ಬ್ಯಾಟಿಂಗ್ ಮಾಡಿದರು. ಅವರು ಬೌಲಿಂಗ್‌ನಲ್ಲಿಯೂ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5ಕ್ಕೆ282 (ಹರ್ನೂರ್ ಸಿಂಗ್ 120, ಶೇಖ್ ರಶೀದ್ 35, ಯಶ್ ಧುಳ್ 63, ರಾಜವರ್ಧನ್ ಹಂಗರ್ಗೇಕರ್ ಔಟಾಗದೆ 48, ಆಲಿಶಾನ್ ಶರಾಫು 44ಕ್ಕೆ2) **ಯುಎಇ:** 34.3 ಓವರ್‌ಗಳಲ್ಲಿ 128 (ಕೈ ಸ್ಮಿತ್ 45, ಸೂರ್ಯ ಸತೀಶ್ 21, ರಾಜ್ಯವರ್ಧನ್ ಹಂಗರ್ಗೇಕರ್ 24ಕ್ಕೆ3, ಗರ್ವ್ ಸಂಗ್ವಾನ್ 39ಕ್ಕೆ2, ವಿಕಿ ಓಸ್ವಾಲ್ 7ಕ್ಕೆ2, ಖುಶಾಲ್ ತಾಂಬೆ 16ಕ್ಕೆ2) **ಫಲಿತಾಂಶ:** ಭಾರತ 19 ವರ್ಷದೊಳಗಿನವರ ತಂಡಕ್ಕೆ 154 ರನ್‌ಗಳ ಜಯ.


ಬ್ರಯನ್ ಲಾರಾ


ಡೇಲ್ ಸ್ಟೇನ್

ಸನ್‌ರೈಸರ್ಸ್‌ಗೆ ಲಾರಾ, ಸ್ಟೇನ್

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ದಿಗ್ಗಜ ಆಟಗಾರ ಬ್ರಯನ್ ಲಾರಾ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ವೇಗಿ ಡೇಲ್ ಸ್ಟೇನ್ ಅವರನ್ನು ಐಪಿಎಲ್‌ನಲ್ಲಿ ಆಡುವ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಕ್ರಮವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್ ತರಬೇತುದಾರರನ್ನಾಗಿ ನೇಮಕ ಮಾಡಲಾಗಿದೆ.

ಐಪಿಎಲ್‌ನಲ್ಲಿ ವೀಕ್ಷಕ ವಿವರಣೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಲಾರಾ 2022ರ ಟೂರ್ನಿಯಲ್ಲಿ ಸನ್‌ರೈಸರ್ಸ್ ತಂಡದ ತಾಂತ್ರಿಕ ಸಲಹೆಗಾರ ಮತ್ತು ಬ್ಯಾಟಿಂಗ್ ಮಾರ್ಗದರ್ಶಕರಾಗಲಿದ್ದರೆ. ಡೇಲ್ ಬೌಲಿಂಗ್ ಕೋಚ್ ಆಗಿ ನೇಮಕವಾಗಿದ್ದಾರೆ. ಐಪಿಎಲ್‌ನಲ್ಲಿ ಅವರು ಸನ್‌ರೈಸರ್ಸ್ ಸೇರಿದಂತೆ ಕೆಲವು ತಂಡಗಳಲ್ಲಿ ಆಡಿದ ಅನುಭವ ಹೊಂದಿದ್ದಾರೆ.

ತಂಡದ ಸ್ಪಿನ್ ಬೌಲಿಂಗ್ ಕೋಚ್ ಆಗಿ ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಮುಂದುವರಿಯಲಿದ್ದಾರೆ ಎಂದು ತಂಡವು ತನ್ನ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದೆ.

ಟಾಮ್ ಮೂಡಿ ಮುಖ್ಯ ಕೋಚ್ ಆಗಿ ಮರಳಿದ್ದಾರೆ. ಹೋದ ಆವೃತ್ತಿಯಲ್ಲಿ ಟ್ರೆವರ್ ಬೇಲಿಸ್ ಅವರು ಕೋಚ್ ಆಗಿದ್ದರು. ಮೂಡಿ ನಿರ್ದೇಶಕರಾಗಿದ್ದರು. ಭಾರತ ತಂಡದ ಮಾಜಿ ಕ್ರಿಕೆಟಿಗ ಹೇಮಂಗ್ ಬದಾನಿ ಫೀಲ್ಡಿಂಗ್ ಕೋಚ್ ಮತ್ತು ಸೈಮನ್ ಕ್ಯಾಟಿಚ್ ಸಹಾಯಕ ಕೋಚ್ ಆಗಿ ನೇಮಕವಾಗಿದ್ದಾರೆ. ಕ್ಯಾಟಿಚ್ ಈ ಮೊದಲು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಖ್ಯ ಕೋಚ್ ಕೂಡ ಆಗಿದ್ದರು.

ಸನ್‌ರೈಸರ್ಸ್ ತಂಡವು ನಾಯಕ ಕೇನ್ ವಿಲಿಯಮ್ಸನ್, ಉಮ್ರಾನ್ ಮಲಿಕ್ ಮತ್ತು ಅಬ್ದುಲ್ ಸಮದ್ ಅವರನ್ನು ಉಳಿಸಿಕೊಂಡಿದೆ. ಹೋದ ಟೂರ್ನಿಯಲ್ಲಿ ತಂಡವು ಕೊನೆಯ ಸ್ಥಾನ ಪಡೆದಿತ್ತು.

ವಾಜಪೇಯಿ ಕಪ್ ವಾಲಿಬಾಲ್ ಟೂರ್ನಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಾಲಿಬಾಲ್ ಸಂಸ್ಥೆ ಆಯೋಜಿಸಿರುವ ಅಖಿಲ ಭಾರತ ದಕ್ಷಿಣ ವಲಯ ವಾಜಪೇಯಿ ಕಪ್ ವಾಲಿಬಾಲ್ ಟೂರ್ನಿ ಇದೇ 25ರಿಂದ 29ರ ವರೆಗೆ ಶಂಕರ ಮಠ ಸಮೀಪದ ವಿವೇಕಾನಂದ ಕ್ರೀಡಾಂಗಣದಲ್ಲಿ ನಡೆಯಲಿದೆ.

ಹೊನಲು ಬೆಳಕಿನಲ್ಲಿ ನಡೆಯಲಿರುವ ಟೂರ್ನಿಯ ಪುರುಷರ ವಿಭಾಗದ ವಿಜೇತ ತಂಡಕ್ಕೆ ₹ 40,000 ಮತ್ತು ರನ್ನರ್ ಅಪ್ ತಂಡಕ್ಕೆ ₹ 20,000, ಮೂರನೇ ಸ್ಥಾನ ಗಳಿಸಿದ ತಂಡಕ್ಕೆ ₹ 10,000 ನೀಡಲಾಗುವುದು ಎಂದು ವಾಲಿಬಾಲ್ ಸಂಸ್ಥೆಯ ಅಧ್ಯಕ್ಷ ಎಸ್. ಹರೀಶ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಹಿಳಾ ವಿಭಾಗದ ಚಾಂಪಿಯನ್ ತಂಡಕ್ಕೆ ₹ 30,000, ರನ್ನರ್ ಅಪ್ ತಂಡಕ್ಕೆ ₹ 20,000, ಮೂರನೇ ಸ್ಥಾನ ಗಳಿಸಿದ ತಂಡಕ್ಕೆ ₹ 10,000 ನೀಡಲಾಗುವುದು. ಪುರುಷರ ವಿಭಾಗದಲ್ಲಿ 8 ತಂಡಗಳು ಮತ್ತು ಮಹಿಳಾ ವಿಭಾಗದಲ್ಲಿ 4 ತಂಡಗಳು ಪಾಲ್ಗೊಳ್ಳಲಿವೆ ಎಂದು ಅವರು ವಿವರಿಸಿದರು.

ಪುರುಷರ ವಿಭಾಗ ಮತ್ತು ಮಹಿಳಾ ವಿಭಾಗದ ವಿಜೇತರಿಗೆ ನೀಡುವ ಬಹುಮಾನ ಮೊತ್ತದಲ್ಲಿ ತಾರತಮ್ಯ ಏಕೆ ಎಂದು ವಿಚಾರಿಸಿದಾಗ 'ಕೆಲವು ರಾಜ್ಯಗಳಲ್ಲಿ ಪುರುಷರಿಗೆ ನೀಡುವ ಮೊತ್ತದ ಅರ್ಧದಷ್ಟು ಮಾತ್ರ ಮಹಿಳಾ ತಂಡಕ್ಕೆ ನೀಡುತ್ತಾರೆ. ನಮ್ಮಲ್ಲಿ 90 ಶೇಕಡಾ ನೀಡುತ್ತೇವೆ. ಭವಿಷ್ಯದಲ್ಲಿ ಏಕರೂಪದ ಮೊತ್ತ ನೀಡಲು ಪ್ರಯತ್ನಿಸಲಾಗುವುದು' ಎಂದು ಹರೀಶ್ ತಿಳಿಸಿದರು.

ಬ್ಯಾಸ್ಕೆಟ್‌ಬಾಲ್: ರಾಜಕುಮಾರ್ ಕ್ಲಬ್‌ಗೆ ಜಯ

ಬೆಂಗಳೂರು: ಸುಮಂತ್ ಮಿಂಚಿನ ಆಟದ ಬಲದಿಂದ ರಾಜಕುಮಾರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ರಾಜ್ಯ ಸಂಸ್ಥೆ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಜೆಎಸ್‌ಸಿ ವಿರುದ್ಧ ಜಯಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಾಜಕುಮಾರ್ ತಂಡವು 77–75ರಿಂದ ಜೆಎಸ್‌ಸಿ ವಿರುದ್ಧ ಗೆಲುವು ಸಾಧಿಸಿತು. ಸುಮಂತ್ 31 ಮತ್ತು ವೆಂಕಟ್ 12 ಅಂಕ ಗಳಿಸಿದರು. ಜೆಎಸ್‌ಸಿಯ ಕಟ್ಟಿ 25 ಮತ್ತು ಸಂತೋಷ್ 16 ಅಂಕ ಗಳಿಸಿದರು.

ಎಎಸ್‌ಸಿ 78–61 (33–29) ರಿಂದ ವಿಮಾನಪುರ ಎಸ್‌ಸಿ ವಿರುದ್ಧ ಗೆದ್ದಿತು. ಎಎಸ್‌ಸಿಯ ಬಲ್ವಾನ್ (22) ಮತ್ತು ರವಿ (16), ವಿಮಾನಪುರ ತಂಡದ ಆದಿತ್ಯ (21) ಹಾಗೂ ವಿಷ್ಣು (14) ಮಿಂಚಿದರು. ಐಬಿಸಿಸಿ 86–80 (44–43) ರಿಂದ ಎಸ್ ಬ್ಲ್ಯೂಸ್ ವಿರುದ್ಧ ಗೆದ್ದಿತು. ಐಬಿಬಿಸಿಯ ಸುರೇಶ್ (29), ಯಶವಂತ್ (15) ಹಾಗೂ ಬ್ಲ್ಯೂಸ್‌ನ ಅಭಿಷೇಕ್ ಗೌಡ (39) ಹಾಗೂ ರಂಗನಾಥ್ (16) ಉತ್ತಮವಾಗಿ ಆಡಿದರು. ಪಿನಾಕಿನಿ ಜಿ.ಬಿ. ನೂರ್ 69 –47 ರಿಂದ ಬಿಸಿವೈಎ ವಿರುದ್ಧ; ಡಿವೈಇಎಸ್ ಬೆಂಗಳೂರು 83–60ರಿಂದ ಭರತ್ ಎಸ್‌ಯು ವಿರುದ್ಧ; ಕೆಎಸ್‌ಪಿ 88–8ರಿಂದ ಬಾಷ್ ವಿರುದ್ಧ; ವಿವೇಕ್ಸ್ ಎಸ್ 65–61ರಿಂದ ದೇವಾಂಗ್ ಯೂನಿಯನ್ ವಿರುದ್ಧ ಜಯಿಸಿತು.

ಬ್ಯಾಟಿಂಗ್ ಬಲ ನಮಗಿದೆ: ಪೂಜಾರ

ಸೆಂಚುರಿಯನ್ (ಪಿಟಿಐ): ದಕ್ಷಿಣ ಆಫ್ರಿಕಾದ ವೇಗದ ಬೌಲಿಂಗ್ ಸ್ನೇಹಿ ಪಿಚ್‌ಗಳಲ್ಲಿ ಭಾರತದ ಬ್ಯಾಟರ್‌ಗಳು ಶ್ರೇಷ್ಠ ಸಾಮರ್ಥ್ಯ ತೋರಬಲ್ಲರು ಎಂದು ಮಧ್ಯಮಕ್ರಮಾಂಕದ ಬ್ಯಾಟರ್ ಚೇತೇಶ್ವರ್ ಪೂಜಾರ ಅಭಿಪ್ರಾಯಪಟ್ಟಿದ್ದಾರೆ.

'ವಿದೇಶಗಳಿಗೆ ಪ್ರವಾಸ ಹೋಗುವಾಗ ಬೌನ್ಸ್ ಮತ್ತು ವೇಗದ ಎಸೆತಗಳಿಗೆ ಇರುವ ಪಿಚ್‌ಗಳಲ್ಲಿ ಆಡುವ ಸಿದ್ಧತೆ ಮಾಡಿಕೊಂಡೇ ತೆರಳುತ್ತೇವೆ. ಇತ್ತೀಚೆಗೆ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ಗಳಲ್ಲಿ ಟೆಸ್ಟ್ ವಿಜಯ ಸಾಧಿಸಿದರುವುದು ತಂಡದ ಆಟಗಾರರಲ್ಲಿ ಬಹಳಷ್ಟು ಆತ್ಮವಿಶ್ವಾಸ ವೃದ್ಧಿಸುವಂತೆ ಮಾಡಿದೆ' ಎಂದು ಬಿಸಿಸಿಐ ಟ್ವಿಟರ್‌ನಲ್ಲಿ ಹಾಕಿರುವ ವಿಡಿಯೋದಲ್ಲಿ ಪೂಜಾರ ಹೇಳಿದ್ದಾರೆ.

'ಬ್ಯಾಟಿಂಗ್ ಕ್ರಮಾಂಕವು ಸಮತೋಲನವಾಗಿದೆ. ದಕ್ಷಿಣ ಆಫ್ರಿಕಾ ತಂಡದ ಎದುರು ಆಡಿದ ಅನುಭವ ನಮ್ಮಲ್ಲಿ ಬಹಳ ಮಂದಿಗೆ ಇದೆ. ಅವರ ತಂಡದಲ್ಲಿ ಉತ್ತಮ ಬೌಲಿಂಗ್ ಪಡೆ ಇದೆ. ಅವರು ತಮ್ಮ ತವರಿನಲ್ಲಿ ಹೆಚ್ಚು ಪರಿಣಾಮಕಾರಿಯಾಗುವ ಸಾಧ್ಯತೆ ಇದೆ. ಅದಕ್ಕೆ ತಕ್ಕಂತೆ ನಾವು ಕೂಡ ಅಭ್ಯಾಸ ಮಾಡಿದ್ದೇವೆ' ಎಂದು 33 ವರ್ಷದ ಪೂಜಾರ ಹೇಳಿದ್ದಾರೆ.

ಜನವರಿಯಲ್ಲಿ ಭಾರತ ತಂಡ ಆಸ್ಟ್ರೇಲಿಯಾದಲ್ಲಿ 2–1ರಿಂದ ಬಾರ್ಡರ್–ಗಾವಸ್ಕರ್ ಟ್ರೋಫಿ ಗೆದ್ದುಕೊಂಡಿತ್ತು. ಈಚೆಗೆ ಇಂಗ್ಲೆಂಡ್‌ನಲ್ಲಿ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–1ರಿಂದ ಮುನ್ನಡೆ ಗಳಿಸಿತ್ತು. ಕೋವಿಡ್ ಕಾರಣದಿಂದಾಗಿ ಕೊನೆಯ ಒಂದು ಪಂದ್ಯವನ್ನು ಮುಂದೂಡಲಾಗಿತ್ತು.

'ಯಾವುದೇ ವಾತಾವರಣ ಮತ್ತು ಎದುರಾಳಿ ಇದ್ದರೂ ಗೆಲ್ಲುವ ಆತ್ಮವಿಶ್ವಾಸ ನಮಗೆ ಇದೆ. ದಕ್ಷಿಣ ಆಫ್ರಿಕಾದಲ್ಲಿಯೂ ಜಯ ಗಳಿಸುವ ಸಾಮರ್ಥ್ಯ ನಮಗೆ ಇದೆ' ಹೇಳಿದ್ದಾರೆ. 2020ರಿಂದ ಇಲ್ಲಿಯವರೆಗೆ ಚೇತೇಶ್ವರ್ ಪೂಜಾರ ಅವರ ಬ್ಯಾಟಿಂಗ್ ಲಯದಲ್ಲಿಲ್ಲ.

ಕಳೆದ 10 ಪಂದ್ಯಗಳಲ್ಲಿ ಅವರು ಎರಡು ಅರ್ಧಶತಕಗಳನ್ನು ಮಾತ್ರ ಗಳಿಸಿದ್ದಾರೆ.

ಬಯೋಬಬಲ್ ಕುರಿತು ಮಾತನಾಡಿರುವ ಅವರು, 'ಇಲ್ಲಿ ಮಾಡಿರುವ ವ್ಯವಸ್ಥೆಯು ಉತ್ತಮವಾಗಿದೆ. ಬೇರೆಲ್ಲ ಕಡೆಗಿಂತ ಇಲ್ಲಿಯ ಅನುಭವ ಬೇರೆ ರೀತಿಯಾಗಿದೆ. ಮುಕ್ತವಾಗಿ ಓಡಾಡುವಂತಹ ಸ್ಥಳಾವಕಾಶ ಇದೆ. ಮಾನಸಿಕವಾಗಿ ಸದೃಢತೆ ಗಳಿಸಲು ಪೂರಕವಾದ ವಾತಾವರಣ ಇಲ್ಲಿದೆ' ಎಂದು ಪೂಜಾರ ಹೇಳಿದ್ದಾರೆ.



ಚೇತೇಶ್ವರ್ ಪೂಜಾರ


ಕಠಿಣ ಪೈಪೋಟಿಯ ಸಾಧ್ಯತೆ: ಎಂಟಿನಿ

ಜೋಹಾನ್ಸ್‌ಬರ್ಗ್ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳಲ್ಲಿ ಒಳ್ಳೆಯ ಬೌಲರ್‌ಗಳಿದ್ದಾರೆ. ಆದ್ದರಿಂದ ತುರುಸಿನ ಪೈಪೋಟಿ ಏರ್ಪಡುವ ಸಾಧ್ಯತೆ ಇದೆ. ದಕ್ಷಿಣ ಆಫ್ರಿಕಾ ತಂಡಕ್ಕೆ ತವರಿನ ವಾತಾವರಣದ ಲಾಭ ಸಿಗಬಹುದು ಎಂದು ಮಾಜಿ ಕ್ರಿಕೆಟಿಗ ಮಕಾಯ ಎಂಟಿನಿ ಅಭಿಪ್ರಾಯಪಟ್ಟಿದ್ದಾರೆ. 'ಈ ಬಾರಿ ಬಂದಿರುವ ಭಾರತ ತಂಡವು ಬಲಿಷ್ಠವಾಗಿದೆ. ಅದನ್ನು ಎದುರಿಸಲು ಅನುಭವಿ ನಾಯಕ ಡೀನ ಎಲ್ಗರ್ ಮತ್ತು ತೆಂಬಾ ಬವುಮಾ ಅವರು ಉತ್ತಮ ತಂತ್ರಗಾರಿಕೆ ರೂಪಿಸುವ ಸಮರ್ಥರಾಗಿದ್ದಾರೆ. ರಸಿ (ವ್ಯಾನ್ ಡರ್ ಡಸೆ) ಕೂಡ ಭರವಸೆಯ ಆಟಗಾರ. ಕ್ವಿಂಟನ್ ಡಿ ಕಾಕ್ ಎಂತಹದ್ದೇ ಪರಿಸ್ಥಿತಿಯಲ್ಲಿಯೂ ಹೋರಾಟ ಮಾಡುವ ಆಟಗಾರ. ಇದರೊಂದಿಗೆ ಉತ್ತಮ ಬೌಲಿಂಗ್ ಪಡೆಯೂ ಇದೆ' ಎಂದು ಎಂಟಿನಿ ಹೇಳಿದ್ದಾರೆ.

'ಸಾಮರ್ಥ್ಯ ಸಾಬೀತು ಮಾಡುವ ಸಮಯ'

'ವಿರಾಟ್ ಕೊಹ್ಲಿ ಬಳಗಕ್ಕೆ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯ ತೋರಿಸಲು ಇದು ಅತ್ಯಂತ ಸೂಕ್ತ ಸಮಯವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಗೆಲುವು ಸಾಧಿಸುವ ಎಲ್ಲ ಸಾಮರ್ಥ್ಯವೂ ಈ ತಂಡಕ್ಕೆ ಇದೆ' ಎಂದುಭಾರತ ತಂಡ ಮಾಜಿ ಮುಖ್ಯ ಕೋಚ್ ರವಿಶಾಸ್ತ್ರಿ ಹೇಳಿದ್ದಾರೆ.

'ದಕ್ಷಿಣ ಆಫ್ರಿಕಾ ತಂಡವು ತನ್ನ ತವರಿನಂಗಳದಲ್ಲಿ ಬಹಳ ಬಲಿಷ್ಠವಾಗಿದೆ. ಆದರೆ ನಮ್ಮ ತಂಡದಲ್ಲಿ ಅಪಾರ ಶಕ್ತಿಯಿದೆ. ವಿರಾಟ್ ಒಬ್ಬ ಶ್ರೇಷ್ಠ ನಾಯಕರಾಗಿದ್ದಾರೆ. ತಂಡದಲ್ಲಿರುವ ಆಟಗಾರರು ಪ್ರತಿಭಾನ್ವಿತರಾಗಿದ್ದಾರೆ' ಎಂದು ಸ್ಟಾರ್ ಸ್ಪೋರ್ಟ್ಸ್ ಕಾರ್ಯಕ್ರಮದಲ್ಲಿ ಶಾಸ್ತ್ರಿ ಹೇಳಿದರು.


ಶೇಷ ಗೌಡ

ಅಂತರ ಇಲಾಖೆ ಹಾಕಿ: ಪಿಎಸ್‌ಬಿ, ರೈಲ್ವೇಸ್‌ಗೆ ಜಯ

ಬೆಂಗಳೂರು: ಪಂಜಾಬ್ ಆ್ಯಂಡ್ ಸಿಂಡ್ ಬ್ಯಾಂಕ್ (ಪಿಎಸ್‌ಬಿ) ಹಾಗೂ ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ತಂಡಗಳು ನಗರದಲ್ಲಿ ನಡೆಯುತ್ತಿರುವ ಅಂತರ ಇಲಾಖೆಗಳ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿದವು.

'ಡಿ' ಗುಂಪಿನ ಪಂದ್ಯದಲ್ಲಿ ಪಂಜಾಬ್ ಆ್ಯಂಡ್ ಸಿಂಡ್ ಬ್ಯಾಂಕ್, ತಿಮಿಳುನಾಡು ಪೊಲೀಸ್ ತಂಡವನ್ನು 8–1ರಲ್ಲಿ ಮಣಿಸಿತು. ಗಗನ್‌ಪ್ರೀತ್ ಸಿಂಗ್ 3ನೇ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. 9 ಮತ್ತು 27ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದ ಅವರು ಮುನ್ನಡೆಯನ್ನು 3–0ಗೆ ಏರಿಸುವುದರೊಂದಿಗೆ ಹ್ಯಾಟ್ರಿಕ್ ಪೂರೈಸಿದರು. 35ನೇ ನಿಮಿಷದಲ್ಲಿ ಹರ್ಮನ್‌ಜಿತ್ ಸಿಂಗ್, 44ನೇ ನಿಮಿಷದಲ್ಲಿ ಮಣಿಂದರ್ ಸಿಂಗ್, 52ನೇ ನಿಮಿಷದಲ್ಲಿ ಪ್ರಿನ್ಸ್, 54ನೇ ನಿಮಿಷದಲ್ಲಿ ನಾಯಕ ಸತ್‌ಬೀರ್ ಸಿಂಗ್ ಮತ್ತು 55ನೇ ನಿಮಿಷದಲ್ಲಿ ಪ್ರಭ್‌ಜೋತ್ ಸಿಂಗ್ ಗೋಲು ಗಳಿಸಿದರು. ಎದುರಾಳಿ ತಂಡದ ಏಕೈಕ ಗೋಲು 59ನೇ ನಿಮಿಷದಲ್ಲಿ ಬಾಲಮುರುಗನ್‌ರಿಂದ ಬಂತು.

'ಸಿ' ಗುಂಪಿನ ಪಂದ್ಯದಲ್ಲಿ ಭಾರತ ಆಹಾರ ನಿಗಮವನ್ನು ರೈಲ್ವೇಸ್ 7–1ರಲ್ಲಿ ಸೋಲಿಸಿತು. ರೈಲ್ವೇಸ್‌ಗಾಗಿ ಶೇಷ ಗೌಡ ಬಿ.ಎಂ 5ನೇ ನಿಮಿಷದಲ್ಲಿ ಮೊದಲ ಗೋಲು ಗಳಿಸಿದರು. 10 ಮತ್ತು 15ನೇ ನಿಮಿಷಗಳಲ್ಲಿ ರಾಜು ಪಾಲ್, 18ನೇ ನಿಮಿಷದಲ್ಲಿ ಪ್ರದೀಪ್ ಸಿಂಗ್, 34ನೇ ನಿಮಿಷದಲ್ಲಿ ಅಜಿತ್ ಕುಮಾರ್ ಪಾಂಡೆ, 41ನೇ ನಿಮಿಷದಲ್ಲಿ ಜಸ್‌ಜಿತ್ ಸಿಂಗ್ ಗೋಲು ಗಳಿಸಿದರು. 45ನೇ ನಿಮಿಷದಲ್ಲಿ ಶೇಷಗೌಡ ಮತ್ತೊಮ್ಮೆ ಮಿಂಚಿದರು. 54ನೇ ನಿಮಿಷದಲ್ಲಿ ಅಜ್ಮೀರ್ ಸಿಂಗ್ ಕೊನೆಯ ಗೋಲು ಗಳಿಸಿದರು. ಆಹಾರ ನಿಗಮದ ಪರ 18ನೇ ನಿಮಿಷದಲ್ಲಿ ಹನ್ಸ್‌ರಾಜ್ ಗೋಲು ಗಳಿಸಿದರು.

ವಿಜಯ್ ಹಜಾರೆ ಟ್ರೋಫಿ: ಸೌರಾಷ್ಟ್ರಕ್ಕೆ ತಮಿಳುನಾಡಿಗೆ ಸವಾಲು

ಜೈಪುರ(ಪಿಟಿಐ):ದೇಶಿ ಕ್ರಿಕೆಟ್‌ನ ಎರಡು ಬಲಿಷ್ಠ ತಂಡಗಳಾದ ತಮಿಳುನಾಡು ಮತ್ತು ಸೌರಾಷ್ಟ್ರ ಶುಕ್ರವಾರ ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.


ಜಯದೇವ್ ಉನದ್ಕತ್

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಹಿಮಾಚಲಪ್ರದೇಶ ಮತ್ತು ಸೌರಾಷ್ಟ್ರ ಹಣಾಹಣಿ ನಡೆಸಲಿವೆ.

ಎಂಟರ ಘಟ್ಟದಲ್ಲಿ ತಮಿಳುನಾಡು ತಂಡವು ಕರ್ನಾಟಕದ ವಿರುದ್ಧ; ಸೌರಾಷ್ಟ್ರವು ವಿದರ್ಭ ಎದುರು ಜಯಿಸಿದ್ದವು. ಸರ್ವಿಸಸ್ ತಂಡವು ಕೇರಳ ವಿರುದ್ಧ ಗೆದ್ದರೆ, ಹಿಮಾಚಲ ಪ್ರದೇಶವು ಉತ್ತರ ಪ್ರದೇಶ ಸವಾಲು ಮೀರಿ ನಿಂತಿತ್ತು.

ಇಂದಿನ ಪಂದ್ಯಗಳು
ತಮಿಳುನಾಡು–ಸೌರಾಷ್ಟ್ರ
ಹಿಮಾಚಲಪ್ರದೇಶ–ಸರ್ವಿಸಸ್
ಆರಂಭ: ಬೆಳಿಗ್ಗೆ 9ರಿಂದ
ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

ಐಎಸ್‌ಎಲ್: ಇಂದು ಗೋವಾಗೆ ಒಡಿಶಾ ಸವಾಲು

ಡ್ರಾ ಪಂದ್ಯದಲ್ಲಿ ಎಚ್‌ಎಫ್‌ಸಿ–ಎಸ್‌ಸಿಇಬಿ

ಬ್ಯಾಂಬೊಲಿಮ್: ಜಿದ್ದಾಜಿದ್ದಿಯ ಹೋರಾಟ ಕಂಡು ಬಂದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಎಂಟನೇ ಆವೃತ್ತಿಯ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ತಂಡಗಳು 1–1ರ ಸಮಬಲ ಸಾಧಿಸಿದವು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಹಣಾಹಣಿಯ 20ನೇ ನಿಮಿಷದಲ್ಲಿ ಅಮಿರ್ ಡೆರ್ವಿಶೆವಿಚ್ ಗೋಲು ಗಳಿಸಿ ಈಸ್ಟ್ ಬೆಂಗಾಲ್‌ಗೆ ಮುನ್ನಡೆ ಗಳಿಸಿಕೊಟ್ಟರು. ಹೀಗಾಗಿ ತಂಡಲ್ಲಿ ಮೊದಲ ಜಯದ ಆಸೆ ಚಿಗುರಿತ್ತು. ಆದರೆ 35ನೇ ನಿಮಿಷದಲ್ಲಿ ಹೈದರಾಬಾದ್ ತಿರುಗೇಟು ನೀಡಿತು. ಬಾರ್ತೊಲೊಮೆ ಒಗ್ಬೆಚೆ ಗೋಲು ತಂದುಕೊಟ್ಟರು.

7 ಪಂದ್ಯಗಳಲ್ಲಿ ತಲಾ 3 ಜಯ ಮತ್ತು 3 ಡ್ರಾದೊಂದಿಗೆ ಹೈದರಾಬಾದ್ ತಂಡ ಪಾಯಿಂಟ್ ಪಟ್ಟಿಯ 2ನೇ ಸ್ಥಾನಕ್ಕೇರಿತು. ಈಸ್ಟ್ ಬೆಂಗಾಲ್ ತಲಾ 4 ಡ್ರಾ ಮತ್ತು 4 ಸೋಲಿನೊಂದಿಗೆ ಕೊನೆಯ ಸ್ಥಾನದಲ್ಲಿದೆ. 5 ಜಯ ಮತ್ತು 2 ಸೋಲಿನೊಂದಿಗೆ ಮುಂಬೈ ಅಗ್ರ ಸ್ಥಾನದಲ್ಲಿದೆ.

ಹೊಸ ಕೋಚ್‌ಗೆ ಸವಾಲು: ವಾಸ್ಕೊದಲ್ಲಿ ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಎಫ್‌ಸಿ ಗೋವಾವನ್ನು ಒಡಿಶಾ ಎಫ್‌ಸಿ ಎದುರಿಸಲಿದೆ. ಹೊಸ ಕೋಚ್ ಡೆರಿಕ್ ಪೆರೇರಾ ಅವರ ಮಾರ್ಗದರ್ಶನದಲ್ಲಿ ಗೋವಾಗೆ ಇದು ಮೊದಲ ಪಂದ್ಯವಾಗಿದ್ದು ಗೆಲುವಿನ ಲಯಕ್ಕೆ ಮರಳಲು ಪ್ರಯತ್ನಿಸಲಿದೆ. ನೀರಸ ಪ್ರದರ್ಶನದ ಕಾರಣ ಕೋಚ್ ಯುವಾನ್ ಫೆರಾಂಡೊ ಅವರನ್ನು ಎಫ್‌ಸಿ ಗೋವಾ ವಜಾ ಮಾಡಿತ್ತು. ಎರಡು ದಿನಗಳ ಹಿಂದೆಯಷ್ಟೇ ಡೆರಿಕ್ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಕೆಲವು ವರ್ಷಗಳಿಂದ ತಂಡದೊಂದಿಗೆ ತಾಂತ್ರಿಕ ಅಧಿಕಾರಿ ಸೇರಿದಂತೆ ವಿವಿಧ ಹುದ್ದೆಯಲ್ಲಿದ್ದ ಡೆರಿಕ್ ಕೋಚ್ ಆಗಿ ಯಶಸ್ಸು ಗಳಿಸುವರೇ ಎಂಬ ಕುತೂಹಲವೂ ಫುಟ್‌ಬಾಲ್ ಪ್ರೇಮಿಗಳಲ್ಲಿ ಮೂಡಿದೆ.



ಗೋಲು ಗಳಿಸಿದ ಅಮಿರ್ ಡೆರ್ವಿಶೆವಿಚ್ ಅವರ ಸಂಭ್ರಮ –ಐಎಸ್‌ಎಲ್ ಚಿತ್ರ


ಅಪ್ಪಚೆಟ್ಟೋಳಂಡ ಹರ್ಷಿತ್ ಅಪ್ಪಯ್ಯ.

ಹಾಕಿ: ಹರ್ಷಿತ್ ಅಪ್ಪಯ್ಯ ನೇಮಕ

ನಾಪೋಕ್ಲು: ದೆಹಲಿಯಲ್ಲಿ ನಡೆಯಲಿರುವ ಜೂನಿಯರ್ ನೆಹರೂ ಕಪ್ ಹಾಕಿ ಟೂರ್ನಿಯಲ್ಲಿ ಬಲ್ಲಮಾವಟಿಯ ಅಪ್ಪಚೆಟ್ಟೋಳಂಡ ಹರ್ಷಿತ್ ಅಪ್ಪಯ್ಯ ತೀರ್ಪುಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಹಾಕಿ ಇಂಡಿಯಾ ಆಶ್ರಯದಲ್ಲಿ ಇದೇ 25ರಿಂದ ಜನವರಿ 6ರ ವರೆಗೆ ಟೂರ್ನಿ ನಡೆಯಲಿದೆ.

ಎಲ್‌ಸಿಎಲ್: ಏಷ್ಯಾ ಲಯನ್ಸ್‌ಗೆ ಜಯಸೂರ್ಯ, ಅಖ್ತರ್

ನವದೆಹಲಿ (ಪಿಟಿಐ): ಲೆಜೆಂಡ್ಸ್ ಕ್ರಿಕೆಟ್ ಲೀಗ್‌ನಲ್ಲಿ ಆಡಲಿರುವ ಏಷ್ಯಾ ಲಯನ್ಸ್ ತಂಡಕ್ಕೆ ಪಾಕಿಸ್ತಾನದ ಶೋಯಬ್ ಅಖ್ತರ್ ಮತ್ತು ಶ್ರೀಲಂಕಾದ ಸನತ್ ಜಯಸೂರ್ಯ ಸೇರ್ಪಡೆಯಾಗಿದ್ದಾರೆ.

ನಿವೃತ್ತ ಕ್ರಿಕೆಟಿಗರಿಗಾಗಿ ಈ ಟೂರ್ನಿ ಅಲ್ ಅಮೆರತ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದರಲ್ಲಿ ಏಷ್ಯಾ ಲಯನ್ಸ್, ಭಾರತ್ ಮತ್ತು ರೆಸ್ಟ್ ಆಫ್ ವರ್ಲ್ಡ್ ತಂಡಗಳು ಸ್ಪರ್ಧಿಸಲಿವೆ.

ಏಷ್ಯಾ ಲಯನ್ಸ್‌ನಲ್ಲಿ ಶಾಹೀದ್ ಆಫ್ರಿದಿ, ಅಖ್ತರ್, ಜಯಸೂರ್ಯ, ಮುತ್ತಯ್ಯ ಮುರಳೀಧರನ್, ಚಮಿಂದಾ ವಾಸ್, ರಮೇಶ್ ಕಲುವಿತರಣ, ತಿಲಕರತ್ನೆ ದಿಲ್ಶಾನ್, ಅಜರ್ ಮೆಹಮೂದ್, ಉಪುಲ್ ತರಂಗಾ, ಮಿಸ್ಬಾ ಉಲ್ ಹಕ್, ಮೊಹಮ್ಮದ್ ಹಫೀಜ್, ಶೋಯಬ್ ಮಲಿಕ್, ಮೊಹಮ್ಮದ್ ಯೂಸುಫ್, ಉಮರ್ ಗುಲ್, ಯೂನಿಸ್ ಖಾನ್ ಮತ್ತು ಅಸ್ಗರ್ ಅಫ್ಗನ್ ಇದ್ದಾರೆ.


ಜಯಸೂರ್ಯ


ಶೋಯಬ್

ಭಾರತ ತಂಡದ ಮಾಜಿ ಮುಖ್ಯ ಕೋಚ್ ರವಿಶಾಸ್ತ್ರಿ ಈ ಟೂರ್ನಿಯಲ್ಲಿ ಕಮಿಷನರ್ ಆಗಿದ್ದಾರೆ.

ಪಟೇಲ್‌ಗಿಲ್ಲ ಸ್ಥಾನ

ಕ್ರೈಸ್ಟ್‌ಚರ್ಚ್ (ಎಪಿ): ಟೆಸ್ಟ್ ಪಂದ್ಯದ ಇನಿಂಗ್ಸ್‌ವೊಂದರಲ್ಲಿ ಹತ್ತು ವಿಕೆಟ್ ಗಳಿಸಿದ ವಿಶ್ವದ ಮೂರನೇ ಬೌಲರ್ ಎಜಾಜ್ ಪಟೇಲ್ ಅವರಿಗೆ ಬಾಂಗ್ಲಾದೇಶ ವಿರುದ್ಧದ ಸರಣಿಯಲ್ಲಿ ಆಡುವ ನ್ಯೂಜಿಲೆಂಡ್ ತಂಡದಲ್ಲಿ ಸ್ಥಾನ ಲಭಿಸಿಲ್ಲ!


ಎಜಾಜ್ ಪಟೇಲ್

ಜನವರಿ 1ರಿಂದ ಎರಡು ಟೆಸ್ಟ್‌ಗಳ ಸರಣಿ ಆರಂಭವಾಗಲಿದೆ. ಗುರುವಾರ 13 ಆಟಗಾರರ ತಂಡವನ್ನು ಕ್ರಿಕೆಟ್ ನ್ಯೂಜಿಲೆಂಡ್ ಪ್ರಕಟಿಸಿದೆ. ಅದರಲ್ಲಿ ಪಟೇಲ್ ಸ್ಥಾನ ಪಡೆದಿಲ್ಲ. ಸ್ಪಿನ್ ಆಲ್‌ರೌಂಡರ್ ರಚಿನ್ ರವೀಂದ್ರ ಸ್ಥಾನ ಪಡೆದಿದ್ದಾರೆ. ಕೇನ್ ವಿಲಿಯಮ್ಸನ್ ಅನುಪಸ್ಥಿತಿಯಲ್ಲಿ ಟಾಮ್ ಲಥಾಮ್ ನಾಯಕತ್ವ ವಹಿಸಿದ್ದಾರೆ.ಈಚೆಗೆ ಮುಂಬೈನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಭಾರತದ ವಿರುದ್ಧ ಪಟೇಲ್ ಪರ್ಫೆಕ್ಟ್–10 ಸಾಧನೆ ಮಾಡಿದ್ದರು. ಜಿಮ್ ಲೇಕರ್ ಮತ್ತು ಅನಿಲ್ ಕುಂಬ್ಳೆ ಅವರ ನಂತರ ಈ ಸಾಧನೆ ಮಾಡಿದ್ದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

‘ನ್ಯೂಜಿಲೆಂಡ್‌ನಲ್ಲಿ ಸ್ಪಿನ್‌ಸ್ನೇಹಿ ಪಿಚ್‌ಗಳಿಲ್ಲ. ಇಲ್ಲಿಯ ಪಿಚ್ ನಿರ್ಮಾತೃಗಳು ಸ್ಪಿನ್‌ಸ್ನೇಹಿ ಅಂಕಣ ಸಿದ್ಧಗೊಳಿಸಬೇಕು. ನನ್ನ ಸ್ಪಿನ್ ಬೌಲಿಂಗ್ ನೋಡಿ ಮತ್ತಷ್ಟು ಯುವ ಆಟಗಾರರು ಕಲಿಯಬೇಕು‘ ಎಂದು ಹೇಳಿದ್ದಾರೆ.

ತಂಡ: ಟಾಮ್ ಲಥಾಮ್ (ನಾಯಕ), ಟಾಮ್ ಬ್ಲಂಡೆಲ್, ಟ್ರೆಂಟ್ ಬೌಲ್ಟ್, ಡೆವೊನ್ ಕಾನ್ವೆ, ಮ್ಯಾಟ್ ಹೆನ್ರಿ, ಕೈಲ್ ಜೆಮಿಸನ್, ಡೆರಿಲ್ ಮಿಚೆಲ್, ಹೆನ್ರಿ ನಿಕೊಲ್ಸ್, ರಚಿನ್ ರವೀಂದ್ರ, ಟಿಮ್ ಸೌಥಿ, ರಾಸ್ ಟೇಲರ್, ನೀಲ್ ವಾಗ್ನರ್, ವಿಲ್ ಯಂಗ್.